[34]

ಕೆನರಾ ವೆಲ್‌ಫೇರ್ ಟ್ರಸ್ಟ್


सा विद्या या विमुक्तये

# ಆಡಳಿತಾಧಿಕಾರಿಯ ವಾರ್ಷಿಕ ವರದಿ 2016–2017

ಟ್ರಸ್ಟಿನ ಧರ್ಮದರ್ಶಿಗಳ, ವಿಶೇಷ ಆಮಂತ್ರಿತರ, ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರ, ಪ್ರಥಮ ಸಹಾಯಕರ ಮತ್ತು ಕಾರ್ಯಾಲಯ ಸಹಾಯಕರ

## ಸಂಯುಕ್ತ ವಾರ್ಷಿಕ ಸಭೆ

15 ಜುಲೈ 2017



# ಡಾ. ದಿನಕರ ದೇಸಾಯಿ
# (1909 – 1982)

*ನಡು ಹಗಲಿನಲ್ಲಿ ನನಗೆ ಬೀಳುವದು ಕನಸು*
*ಈ ಕನಸಿನಿಂದ ಚಿಗುರುವದುಂಟು ಮನಸು*
*ಒಂದೊಂದು ಚಿಗುರಿಗೂ ಒಂದೊಂದು ಶಾಲೆ*
*ಮೂಡಿದರೆ ಶಾರದಾಂಬೆಗೆ ಪುಷ್ಪ ಮಾಲೆ*

| ವಿಷಯ ಪರಿವಿಡಿ | ಪುಟ ಸಂ. |
|---|---|
| 1. ಸ್ವಾಗತ ಹಾಗೂ ಉಪೋದ್ಘಾತ | 4 – 6 |
| 2. ಆದರ್ಶಗಳ ಬೆಳಕಿನಲ್ಲಿ | 6 |
| 3. 2016–2017ನೇ ಸಾಲಿನ ವಾರ್ಷಿಕ ಸಭೆಯಲ್ಲಿ ಅಧ್ಯಕ್ಷರಾದ ಶ್ರೀ ಎಸ್.ಪಿ.ಕಾಮತರವರು ಉಲ್ಲೇಖಿಸಿದ ಕೆಲವು ವಿಚಾರಗಳು | 7 – 8 |
| 4. ಶೈಕ್ಷಣಿಕ ಹಾಗೂ ಸಾಮಾಜಿಕ ವಿಚಾರದ ಕುರಿತು ಟ್ರಸ್ಟಿನ ಧ್ಯೇಯ | 8 – 9 |
| 5. ಕಳೆದ ವಾರ್ಷಿಕ ಸಭೆಯಲ್ಲಿ ಸ್ವೀಕರಿಸಿದ ನಿರ್ಣಯಗಳು ಹಾಗೂ ಅವುಗಳ ಅನುಷ್ಠಾನದ ಕುರಿತು | 9 – 10 |
| 6. ವಿದ್ಯಾರ್ಥಿಗಳ ದಾಖಲಾತಿ ಹಾಗೂ ಸಿಬ್ಬಂದಿಗಳ ವಿವರ | 11 – 13 |
| 7. ಶೈಕ್ಷಣಿಕ ಪ್ರಗತಿ: 2016–2017ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಹಾಗೂ ಪದವಿ ಪರೀಕ್ಷೆಯಲ್ಲಿ ಮಾಡಿದ ಸಾಧನೆ | 14 – 18 |
| 8. 2016–2017ನೇ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ವಿಶೇಷ ಸಾಧನೆ | 18 – 21 |
| 9. ದಿನಕರ ಕಲಾನಿಕೇತನ ಸಂಗೀತ ವಿದ್ಯಾಲಯ, ಕಾರವಾರ ಮತ್ತು ಅಂಕೋಲಾ | 21 |
| 10. ಗೋಖಲೆ ಸೆಂಟಿನರಿ ಕಾಲೇಜಿನಲ್ಲಿ 2016–2017ನೇ ಸಾಲಿನಿಂದ ಎಮ್.ಎಸ್ಸಿ. ಸ್ನಾತಕೋತ್ತರ ಕೇಂದ್ರ ಪ್ರಾರಂಭ | 21 |
| 11. Workshops conducted during the year | 22 – 25 |
| 12. ಅನುಮೋದಿತ ಹುದ್ದೆಗಳಲ್ಲಿ ನೇಮಕಾತಿ ಹೊಂದಿದ ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿಗಳು | 26 – 27 |
| 13. U.G.C. Grants - ಯು.ಜಿ.ಸಿ.ಯಿಂದ ಬರುವ ಸಹಾಯ ಧನದ ಕುರಿತು | 27 – 28 |
| 14. ಬಿಸಿಯೂಟದ ಯೋಜನೆ ಕುರಿತು | 29 – 30 |
| 15. ಸಮವಸ್ತ್ರದ ಬದಲಾವಣೆ ಕುರಿತು | 31 – 32 |
| 16. ಕಾರ್ಮಿಕರ ರಾಜ್ಯ ವಿಮಾ ನಿಗಮ (E.S.I.) ಯೋಜನೆ | 33 |
| 17. ಟ್ರಸ್ಟಿನ ವಿವಿಧ ಶಾಲೆ–ಕಾಲೇಜುಗಳಲ್ಲಿ ನಡೆದ ಅಭಿವೃದ್ಧಿ ಹಾಗೂ ಇತರ ಕಾರ್ಯಗಳು | 34 – 36 |
| 18. ಕುಗ್ರರ ಫೌಂಡೇಶನ, ಕಾರವಾರ, ಇವರು ತಾತ್ಕಾಲಿಕ ಶಿಕ್ಷಕರಿಗೆ ನೀಡಿದ ಸಹಾಯಧನ | 36 – 37 |
| 19. 'ಜನರಲ್ ವೆಲ್‌ಫೆರ್ ಫಂಡ್' ನಿಂದ ನೀಡಿದ ಸಹಾಯಧನ | 38 |
| 20. 2016–2017ನೇ ಸಾಲಿನಲ್ಲಿ ತಾತ್ಕಾಲಿಕ ಸಿಬ್ಬಂದಿಗಳಿಗೆ ನೀಡಿದ ವೇತನ, ಅಭಿವೃದ್ಧಿ ಕಾರ್ಯಕ್ಕೆ ವಿನಿಯೋಗಿಸಿದ ಹಣ ಇತ್ಯಾದಿಗಳ ವಿವರ | 39 – 41 |
| 21. ಶಿಕ್ಷಣಕ್ಕಾಗಿ ಆರ್ಥಿಕ ನೆರವು (2012–13ನೇ ಸಾಲಿನಿಂದ ಪ್ರಾರಂಭವಾದ ಹೊಸ ಯೋಜನೆ) | 42 |
| 22. Mobile Health Care Project - ಆರೋಗ್ಯ ತಪಾಸಣೆ ಮತ್ತು ಔಷದೋಪಚಾರ ಶಿಬಿರ | 43 |
| 23. P.S.Kamat Memorial District Level Inter-Collegiate Debate Competition - ಪಿ.ಎಸ್.ಕಾಮತ ಸ್ಮರಣಾರ್ಥ ಜಿಲ್ಲಾ ಮಟ್ಟದ ಅಂತರ ಕಾಲೇಜು ಚರ್ಚಾ ಸ್ಪರ್ಧೆ | 43 – 45 |
| 24. Project Change Makers for a Better Tomorrow (ಉತ್ತಮ ನಾಳೆಗಾಗಿ ಪರಿವರ್ತನಾಗಾರರು) | 45 – 46 |
| 25. ದಿ. ಗಣಪತಿ ಅಣ್ಣಪ್ಪಯ್ಯ ಪೈ ಸ್ಮರಣಾರ್ಥ ಸಂಸ್ಕೃತ ಸೌರಭ ಕಾರ್ಯಕ್ರಮ | 47 |
| 26. ಟ್ರಸ್ಟಿಗೆ ಬರುವ ಆದಾಯದ ಕುರಿತು | 48 – 50 |
| 27. 2016–2017ನೇ ಸಾಲಿನಲ್ಲಿ ಟ್ರಸ್ಟಿಗೆ ನೇರವಾಗಿ ದೇಣಿಗೆ ಸಂದಾಯ ಮಾಡಿದವರ ವಿವರ | 51 |
| 28. 2016–2017ನೇ ಸಾಲಿನಲ್ಲಿ ಟ್ರಸ್ಟು ವಿವಿಧ ಕಾರ್ಯಕ್ರಮಗಳಿಗೆ ನೀಡಿದ ದೇಣಿಗೆ ವಿವರ | 51 |
| 29. 2016–2017ನೇ ಸಾಲಿನಲ್ಲಿ ನಿವೃತ್ತಿ ಹೊಂದಿದ ಬೋಧಕ–ಬೋಧಕೇತರರು | 51 – 52 |
| 30. ಶೈಕ್ಷಣಿಕ ಪ್ರಗತಿ ಹಾಗೂ ಲೆಕ್ಕ ಪತ್ರ ಪರಿಶೀಲನಾ ಕಾರ್ಯಕ್ರಮ | 52 – 54 |
| 31. ಪ್ರಗತಿ ಪರಿಶೀಲನಾ ತಂಡದ ಸಲಹೆಗಳು | 54 |
| 32. ಆಫೀಸ ಹಾಗೂ ಲೆಕ್ಕ ಪತ್ರ ನಿರ್ವಹಣೆ ಕುರಿತು ಪರಿಶೀಲನೆಯ ವರದಿ | 55 – 56 |
| 33. ಸಾಮಾನ್ಯ ಸೂಚನೆಗಳು | 57 |
| 34. ಕೊನೆಯ ಮಾತು ಹಾಗೂ ಉಪಕಾರ ಸ್ಮರಣೆ | 58 – 59 |

# ಆಡಳಿತಾಧಿಕಾರಿಯ ವಾರ್ಷಿಕ ವರದಿ – 2016–2017

## 1. ಸ್ವಾಗತ ಹಾಗೂ ಉಪೋದ್ಘಾತ

ಕೆನರಾ ವೆಲ್‌ಫೆರ್ ಟ್ರಸ್ಟು ನಡೆಸುತ್ತಿರುವ ಎಲ್ಲ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರ, ಹಿರಿಯ ಉಪನ್ಯಾಸಕರ / ಹಿರಿಯ ಶಿಕ್ಷಕರ, ಆಫೀಸ್ ಸಿಬ್ಬಂದಿಯವರ, ವಿಶೇಷ ಆಮಂತ್ರಿತರ ಹಾಗೂ ಟ್ರಸ್ಟಿನ ಪದಾಧಿಕಾರಿಗಳ ವಾರ್ಷಿಕ ಸಭೆಯನ್ನು ಟ್ರಸ್ಟಿನ ಅಧ್ಯಕ್ಷರಾದ ಮಾನ್ಯ ಶ್ರೀ ಎಸ್.ಪಿ.ಕಾಮತರವರ ಸಲಹೆಯಂತೆ ಇಂದು ದಿನಾಂಕ 15–07–2017 ರಂದು ಗೋಖಲೆ ಸೆಂಟಿನರಿ ಕಾಲೇಜಿನ ಯು.ಜಿ.ಸಿ ಸಭಾಭವನದಲ್ಲಿ ನಡೆಸಲಾಗುತ್ತಿದೆ. ಟ್ರಸ್ಟು ಕಳೆದ 34 ವರ್ಷಗಳಿಂದ ನಿರಂತರವಾಗಿ ವಾರ್ಷಿಕ ಸಭೆಯನ್ನು ನಡೆಸಿಕೊಂಡು ಬಂದಿದೆ.

ಈ ಸಭೆಯಲ್ಲಿ ಚರ್ಚಿಸಿ ತೆಗೆದುಕೊಳ್ಳುವ ನಿರ್ಣಯಗಳ ಪ್ರಯೋಜನ ಎಲ್ಲ ಸಂಸ್ಥೆಗಳಿಗೆ ದೊರೆಯಬೇಕು. ಹಾಗೂ ಸಂಸ್ಥೆಗಳಲ್ಲಿ ಉತ್ತಮ ಶೈಕ್ಷಣಿಕ ವಾತಾವರಣ ಮೂಡಿ ಬಂದು ಶಿಕ್ಷಣ ಸಂಸ್ಥೆಗಳಲ್ಲಿ ಗುಣಮಟ್ಟದ ಶಿಕ್ಷಣ ದೊರೆಯಬೇಕೆಂಬುದು ಈ ಸಭೆಯ ಉದ್ದೇಶವಾಗಿದೆ.

ಆಡಳಿತದಲ್ಲಿ ಹಾಗೂ ಲೆಕ್ಕಪತ್ರ ನಿರ್ವಹಣೆಯಲ್ಲಿ ಪಾರದರ್ಶಕತೆ ಇರಬೇಕೆನ್ನುವದು ಅಧ್ಯಕ್ಷರ ಪ್ರಾಮಾಣಿಕ ಅನಿಸಿಕೆಯಾಗಿದೆ. ಅಧ್ಯಕ್ಷರ ಅನಿಸಿಕೆಯಂತೆ ಟ್ರಸ್ಟು ನಡೆಸುತ್ತಿರುವ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡುವದರ ಜೊತೆಗೆ ಪಾರದರ್ಶಕವಾಗಿ ಆಡಳಿತ ನಡೆಸುತ್ತಿದೆ ಎಂದು ತಿಳಿಸಲು ಸಂತೋಷ ಪಡುತ್ತೇನೆ.

ಇಂದಿನ ಈ ಸಭೆಗೆ ಆಗಮಿಸಿದ ಟ್ರಸ್ಟಿನ ಅಧ್ಯಕ್ಷರಾದ ಮಾನ್ಯ ಶ್ರೀ ಎಸ್.ಪಿ.ಕಾಮತರವರಿಗೆ, ಟ್ರಸ್ಟಿಗಳಾದ ಪ್ರೊ. ಜಿ.ವಿ.ಭಟ್ಟರವರಿಗೆ ಹಾಗೂ ವಿಶೇಷ ಆಮಂತ್ರಿತರಾದ ಪ್ರೊ. ವಿ.ಆರ್.ವೆರ್ಣೇಕರರವರಿಗೆ, ಪ್ರೊ. ಎಂ.ಎಸ್.ಹಬ್ಬುರವರಿಗೆ, ಕಾರವಾರ ಎಜ್ಯೂಕೇಶನ್ ಸೊಸೈಟಿಯ ಕಾರ್ಯದರ್ಶಿಗಳಾದ ಶ್ರೀ ಜಿ.ಪಿ.ಕಾಮತರವರಿಗೆ ಹಾಗೂ ಟ್ರಸ್ಟು ನಡೆಸುತ್ತಿರುವ ಎಲ್ಲ ಸಂಸ್ಥೆಗಳ ಮುಖ್ಯಸ್ಥರಿಗೆ, ಹಿರಿಯ ಉಪನ್ಯಾಸಕರಿಗೆ, ಹಿರಿಯ ಸಹ ಶಿಕ್ಷಕರಿಗೆ, ಆಫೀಸ ಸಹಾಯಕರಿಗೆ, ಆಮಂತ್ರಿತರಿಗೆ, ಟ್ರಸ್ಟಿನ ಪರವಾಗಿ ಹಾಗೂ ವೈಯಕ್ತಿಕವಾಗಿ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಟ್ರಸ್ಟು ನಡೆಸುತ್ತಿರುವ ವಿವಿಧ ಸಂಸ್ಥೆಗಳಲ್ಲಿ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪದವಿ ಪೂರ್ವ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡಿದ ಆಯಾ ಶಾಲೆ ಮತ್ತು ಕಾಲೇಜುಗಳಲ್ಲಿ ಪ್ರಥಮ ಬಂದ ವಿದ್ಯಾರ್ಥಿಗಳನ್ನು ಕರೆದು ಅವರನ್ನು ಅಭಿನಂದಿಸುವ ಹಾಗೂ ಪ್ರೋತ್ಸಾಹಿಸುವ ಕಾರ್ಯಕ್ರಮವನ್ನು 2014–2015ನೇ ಸಾಲಿನಿಂದ ಪ್ರಾರಂಭಿಸಲಾಗಿದೆ. ಈ ವರ್ಷವು ಕೂಡಾ ಈ ಕಾರ್ಯಕ್ರಮವನ್ನು ಮುಂದುವರೆಸಲಾಗಿದೆ. 2016–2017ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ಹಾಗೂ ಪದವಿ ಪೂರ್ವ ಪರೀಕ್ಷೆಯಲ್ಲಿ ಆಯಾ ಶಾಲಾ–ಕಾಲೇಜುಗಳಲ್ಲಿ ಅತಿ ಹೆಚ್ಚು ಅಂಕ ಪಡೆದು ಪ್ರಥಮರಾಗಿರುವ ಒಟ್ಟು 24 ವಿದ್ಯಾರ್ಥಿಗಳನ್ನು ಇಂದಿನ ಸಭೆಗೆ ಕರೆಯಲಾಗಿದೆ. ಈ ಸಭೆಗೆ ಆಗಮಿಸಿದ ಎಲ್ಲ 24 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹಾಗೂ ಆಯಾ ಶಾಲಾ ಕಾಲೇಜಿನ

ಮುಖ್ಯಾಧ್ಯಾಪಕರಿಗೆ / ಪ್ರಾಚಾರ್ಯರಿಗೆ ಹಾಗೂ ಎಲ್ಲ ಶಿಕ್ಷಕ ವೃಂದದವರಿಗೆ ಟ್ರಸ್ಟಿನ ಪರವಾಗಿ ಹಾಗೂ ತಮ್ಮೆಲ್ಲರ ಪರವಾಗಿ ಹೃತ್ಪೂರ್ವಕವಾಗಿ ಸ್ವಾಗತಿಸಿ ಅಭಿನಂದಿಸುತ್ತೇನೆ.

ನಮ್ಮ ಕೋರಿಕೆಯ ಮೇರೆಗೆ ಆಗಮಿಸಿರುವ ಎಲ್ಲ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮಾನ್ಯ ಅಧ್ಯಕ್ಷರಾದ ಶ್ರೀ ಎಸ್.ಪಿ.ಕಾಮತರವರು ಅಭಿನಂದಿಸಿ ಪ್ರಶಸ್ತಿ ಪತ್ರ ಹಾಗೂ ಪ್ರೋತ್ಸಾಹ ಧನ ರೂ.1000/– ಈ ಸಂದರ್ಭದಲ್ಲಿ ನೀಡಲಿದ್ದಾರೆ. ಶಾಲಾ ಕಾಲೇಜುಗಳಿಗೆ ಪ್ರಥಮರಾಗಿ ಬಂದ ಪ್ರತಿಭಾವಂತ ವಿದ್ಯಾರ್ಥಿಗಳ ಹೆಸರು ಈಗ ಓದಲಾಗುವದು. ಅವರು ಬಂದು ಮಾನ್ಯ ಅಧ್ಯಕ್ಷರಿಂದ ಪ್ರಶಸ್ತಿ ಪತ್ರ ಹಾಗೂ ಪ್ರೋತ್ಸಹಧನ ಸ್ವೀಕರಿಸಬೇಕಾಗಿ ವಿನಂತಿಸುತ್ತೇನೆ.

## ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದು ಆಯಾ ಶಾಲೆಗೆ ಪ್ರಥಮರಾದವರ ಯಾದಿ

## TOP SCORERS FROM THE TRUST INSTITUTIONS AT SSLC - APRIL 2017

| Sl. | Name of the Student | Name of the Instituion | Marks | Out of | Result % |
|---|---|---|---|---|---|
| 1 | **Mr. Nalin Nitin Hosmelkar** | P.M. Eng. Med. High School, Ankola | 621 | 625 | **99.36** |
| 2 | **Mr. Ravi Prakash Hegde** | Janata Vidyalaya, Kadtoka | 617 | 625 | **98.72** |
| 3 | **Ms. Preeti V Halappanavar** | Janata Vidyalaya, Dandeli [Eng. Med.] | 613 | 625 | **98.08** |
| 4 | **Ms. Sneha Suresh Dixit** | Dinkar Eng. Med. High School, Dhareshwar | 606 | 625 | **96.96** |
| 5 | **Ms. Shweta Annappa Naik** | Janata Vidyalaya, Bedkani | 605 | 625 | **96.80** |
| 6 | **Ms. Bhuvaneshwari Hegde** | Janata Vidyalaya, Kulve-Baroor | 603 | 625 | **96.48** |
| 7 | **Mr. Ganapati L Hegde** | Janata Vidyalaya, Anilgod | 599 | 625 | **95.84** |
| 8 | **Mr. Prateek V Nayak** | P.M.High School, Ankola | 593 | 625 | **94.88** |
| 9 | **Ms. Trupti Ravindra Achari** | Janata Vidyalaya, Murdeshwar | 589 | 625 | **94.24** |
| 10 | **Ms. Manisha Annappa Devadig** | Janata Vidyalaya, Shirali | 587 | 625 | **93.92** |
| 11 | **Mr. R M Chnimay** | Janata Vidyalaya, Baad-Kagal | 585 | 625 | **93.60** |
| 12 | **Ms. Ashwini Ramu Kurubar** | Janata Vidyalaya, Dandeli [Kan. Med.] | 583 | 625 | **93.28** |
| 13 | **Mr. Sharat Subray Naik** | Janata Vidyalaya, Kasarkod | 579 | 625 | **92.64** |
| 14 | **Ms. Nirmala Budavant Patgar** | Janata Vidyalaya, Mirjan-Kodkani | 579 | 625 | **92.64** |
| 15 | **Mr. Chandrashekhar M Gouda** | S.K.P.High School, Katgal | 577 | 625 | **92.32** |
| 16 | **Mr. Akash K Kotharkar** | Janata Vidyalaya, Kadwad | 541 | 625 | **86.56** |
| 17 | **Ms. Ranjita Shetty** | Janata Vidyalaya, Dhareshwar | 521 | 625 | **83.36** |
| 18 | **Mr. Gururaj Kumakar** | Janata Vidyalaya, Mudga | 460 | 625 | **73.60** |

# ದ್ವಿತೀಯ ಪಿ.ಯು. ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದು ಆಯಾ ಪದವಿ ಪೂರ್ವ ಕಾಲೇಜಿಗೆ ಪ್ರಥಮರಾದವರ ಯಾದಿ

## TOP SCORERS FROM THE TRUST INSTITUTIONS AT PU II - APRIL 2017

| Sl. | Name of the Student | Stream | Name of the Institution | Marks | Out of | Result % |
|---|---|---|---|---|---|---|
| 1 | **Ms. Aishwarya Talakeri** | Science | G.C.P.U.College, Ankola | 585 | 600 | **97.50** |
| 2 | **Mr. Divesh J Tanna** | Commerce | Divekar PU College, Karwar | 552 | 600 | **92.00** |
| 3 | **Mr. Ganesh D Madiwal** | Arts | J.V.C.Jr. College, Kadtoka | 511 | 600 | **85.17** |
| 4 | **Mr. Abhishek N Naik** | Arts | J.V.C.Jr. College, Shirali | 499 | 600 | **83.17** |
| 5 | **Mr. Vittu Adolkar** | Commerce | J.V.C.Jr. College, Dandeli | 498 | 600 | **83.00** |
| 6 | **Ms. Bhavana K Ager** | Arts | P.M.C.Jr. College, Ankola | 457 | 600 | **76.17** |

## 2. ಆದರ್ಶಗಳ ಬೆಳಕಿನಲ್ಲಿ

ಕೆನರಾ ವೆಲ್‌ಫೆರ್ ಟ್ರಸ್ಟು 1953ರಲ್ಲಿ ಡಾ. ದಿನಕರ ದೇಸಾಯಿಯವರ ಅಧ್ಯಕ್ಷತೆಯಲ್ಲಿ ಸ್ಥಾಪನೆಗೊಂಡು ಉತ್ತರ ಕನ್ನಡ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳನ್ನು ಹಾಗೂ ಇನ್ನಿತರ ಸೇವಾ ಸಂಸ್ಥೆಗಳನ್ನು ಪ್ರಾರಂಭಿಸಿ ಶಿಕ್ಷಣ ಕ್ರಾಂತಿಗೆ ಚಾಲನೆ ನೀಡಿದರು. ಉತ್ತರ ಕನ್ನಡ ಜಿಲ್ಲೆಯ ಜನರು ಅದರಲ್ಲೂ ಮುಖ್ಯವಾಗಿ ಗ್ರಾಮೀಣ ಭಾಗದ ಜನರು ಶಿಕ್ಷಣದಿಂದ ವಂಚಿತರಾಗಬಾರದೆಂಬ ಕನಸನ್ನು ನನಸು ಮಾಡಿದರು. ಇಂದು ಕೆನರಾ ವೆಲ್‌ಫೆರ್ ಟ್ರಸ್ಟು ಸಾರ್ಥಕ 64 ವರ್ಷಗಳನ್ನು ಪೂರೈಸಿ 65ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ.

ಡಾ. ದಿನಕರ ದೇಸಾಯಿಯವರ ತರುವಾಯ ಅಂದರೆ 1982 ರಿಂದ ಮಾನ್ಯ ಶ್ರೀ ಎಸ್.ಪಿ.ಕಾಮತರವರು ಟ್ರಸ್ಟಿನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡು, ಕಳೆದ 34 ವರ್ಷಗಳಿಂದ ಟ್ರಸ್ಟನ್ನು ಅತ್ಯಂತ ಯಶಸ್ವಿಯಾಗಿ, ಅರ್ಥಪೂರ್ಣವಾಗಿ ನಡೆಸಿಕೊಂಡು ಬಂದಿದ್ದಾರೆ. ಡಾ. ದಿನಕರ ದೇಸಾಯಿಯವರು ನಂಬಿದ್ದ ಆದರ್ಶಗಳ ಮುಂಬೆಳಕಿನಲ್ಲಿ ಇಂದು ಟ್ರಸ್ಟು ಶ್ರೀ ಎಸ್.ಪಿ.ಕಾಮತರವರ ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ ಶೈಕ್ಷಣಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವದು ಶ್ಲಾಘನೀಯವಾದದ್ದು.

ಟ್ರಸ್ಟು ಇಂದು ಕಾರವಾರದ ದಿವೇಕರ ವಾಣಿಜ್ಯ ಕಾಲೇಜಿನಲ್ಲಿ M.Com ಸ್ನಾತ್ತಕೋತ್ತರ ಕೇಂದ್ರವನ್ನು, ಹಾಗೂ ಅಂಕೋಲೆಯ ಗೋಖಲೆ ಸೆಂಟಿನರಿ ಕಾಲೇಜಿನಲ್ಲಿ ಸ್ನಾತಕೋತ್ತರ ಎಮ್.ಎಸ್ಸಿ. ರಸಾಯನಶಾಸ್ತ್ರ ವಿಷಯವನ್ನು ಬೋಧನೆ ಮಾಡುವದರ ಜೊತೆಗೆ ಜಿಲ್ಲೆಯಲ್ಲಿ 6 ಪದವಿ ಪೂರ್ವ ಕಾಲೇಜುಗಳನ್ನು, 4 ಪದವಿ ಕಾಲೇಜುಗಳನ್ನು, 15 ಕನ್ನಡ ಮಾಧ್ಯಮ ಪ್ರೌಢ ಶಾಲೆಗಳನ್ನು, 3 ಆಂಗ್ಲ ಮಾಧ್ಯಮ ಪ್ರೌಢ ಶಾಲೆಗಳನ್ನು, 10 ಪೂರ್ವ ಪ್ರಾಥಮಿಕ ಹಾಗೂ ಪ್ರಾಥಮಿಕ ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಾಲೆಗಳನ್ನು ಹಾಗೂ 6 ಇನ್ನಿತರ ಸೇವಾ ಸಂಸ್ಥೆಗಳನ್ನು ಟ್ರಸ್ಟು ನಡೆಸುತ್ತಿದೆ. ಈಗ ಟ್ರಸ್ಟು ನಡೆಸುತ್ತಿರುವ ಒಟ್ಟೂ ಸಂಸ್ಥೆಗಳ ಸಂಖ್ಯೆ 45ಕ್ಕೆ ತಲುಪಿದೆ.

## 3. 2016–2017ನೇ ಸಾಲಿನ ವಾರ್ಷಿಕ ಸಭೆಯಲ್ಲಿ ಅಧ್ಯಕ್ಷರಾದ ಶ್ರೀ ಎಸ್.ಪಿ.ಕಾಮತರವರು ಉಲ್ಲೇಖಿಸಿದ ಕೆಲವು ವಿಚಾರಗಳು

ಟ್ರಸ್ಟಿನ ವರದಿಯು ನಮ್ಮೆಲ್ಲರೊಂದಿಗಿನ ಸಂವಹನ ಕ್ರಿಯೆ ಎಂದು ಬಣ್ಣಿಸಿದ ಅಧ್ಯಕ್ಷರು ಇದೊಂದು ಪರಸ್ಪರ ಅರಿವಿನ ಪ್ರಯತ್ನಶೀಲತೆಯ, ಗ್ರಹಿಸುವಿಕೆಯ ಸಭೆಯಾಗಿದೆ. ಆಯಾ ಕೇಂದ್ರಗಳಲ್ಲಿ, ಆಯಾ ವ್ಯಕ್ತಿಗಳು ಏನೆನು ಪ್ರಯೋಗ ಮಾಡುತ್ತಿದ್ದಾರೆ, ಅವರ ಮಾನದಂಡಗಳು, ಪರಿಕಲ್ಪನೆಗಳು, ಪ್ರಯೋಗಶೀಲತೆಗಳು ಹೇಗಿವೆ? ಅಲ್ಲಿಯ ಹೊಸತನ, ಹೊಸ ಆಲೋಚನೆ ಇವೆಲ್ಲವುಗಳನ್ನು ಗ್ರಹಿಸಲು ಈ ಸಭೆಗೆ ಸಾಧ್ಯವಾಗುತ್ತದೆ. ಟ್ರಸ್ಟಿನಲ್ಲಿ ನಡೆಯುತ್ತಿರುವ ಪ್ರತಿಯೊಂದು ಬೆಳವಣಿಗೆಯ ಹಿಂದೆ ಬೇರೆ ಬೇರೆ ಪ್ರಜ್ಞಾಸ್ತರಗಳ (Consciousness) ಸ್ವಬೋಧನೆ ಇದೆ. ಬೌದ್ಧಿಕ ಜಾಣ್ಮೆ ಇದೆ.



1. ನಮ್ಮ ಆಲೋಚನಾ ಕ್ರಮಗಳು ಕ್ರಮೇಣ ಸಾಂಸ್ಥಿಕ ಸ್ವರೂಪವನ್ನು ಪಡೆದುಕೊಳ್ಳುತ್ತವೆ. ಆದ್ದರಿಂದ ಇಲ್ಲಿ ಸೇರಿದ ನನ್ನ ಗೆಳೆಯರಿಗೆ ನನ್ನ ವಿನಂತಿಯೆಂದರೆ, ನೀವೆಲ್ಲ ಒಂದೇ ಉದ್ದೇಶದ ಭಾಗವಾಗಿದ್ದೀರಿ. ಸುಮಾರು 3ಕೋಟಿ 40ಲಕ್ಷ ರೂಪಾಯಿ ಕಳೆದ ವರ್ಷ ಕ್ರೋಢೀಕರಿಸುವುದು ನಮ್ಮಿಂದ ಸಾಧ್ಯವಾಗಿದ್ದು ಹೇಗೆ? ಅದರ ಹಿಂದೆ ನೀವೆಲ್ಲ ಇದ್ದೀರಿ. 'ಟ್ರಸ್ಟ್'ಂದರೆ ನಾವೆಲ್ಲ ಸೇರಿ ಆಗಿದೆ. ಅದೇ ಇದರ ಸಂತೋಷ (That is its joy and its beauty) ಮತ್ತು ಸೊಬಗಾಗಿದೆ.
2. ನಮ್ಮ ಸಂಸ್ಥೆ ನಿಸ್ಸಂದೇಹವಾಗಿಯೂ ಬಹಳ ಅರ್ಥಪೂರ್ಣವಾದ ದಾರಿಯಲ್ಲಿ ಸಾಗಿದೆ. ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. ಟ್ರಸ್ಟಿನ ಎಲ್ಲ ಶಾಲೆ–ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ತೋರಿದ ಶೈಕ್ಷಣಿಕ ಪ್ರಗತಿ ಅದ್ಭುತವಾಗಿದೆ. ಗ್ರಾಮೀಣಭಾಗದಲ್ಲಿ ನಮ್ಮ ಶೈಕ್ಷಣಿಕ ಪ್ರಗತಿಯ ಮಟ್ಟ ಎತ್ತರದ ಸ್ಥಾನದಲ್ಲಿರುವದು ಹೆಮ್ಮೆಯ ವಿಚಾರ.
3. ನೀವು ನಿಮ್ಮ ಗುರಿಸಾಧನೆಯ ಹೊಣೆಗಾರಿಕೆಯಿಂದ ಜಾರಿಕೊಳ್ಳುವಂತಿಲ್ಲ; ಸಂಕಲ್ಪ ಮಾಡಿ ಕಾರ್ಯಪ್ರವೃತ್ತ–ರಾಗಬೇಕು. 'ಸಂಕಲ್ಪ' ಅಂದರೆ ಕೇವಲ ನಿರ್ಧಾರವಲ್ಲ; 'ಸಂಕಲ್ಪ' ಮಾಡಿದ್ದೀರಿ ಎಂದರೆ ಆ ಕೆಲಸ ನಿಮ್ಮಿಂದ ಆಗಿದೆ ಮತ್ತು ಆಗಿಯೇ ಆಗುತ್ತದೆ ಎಂದು ಅರ್ಥ. ಯಾರು ಯಾವ ಆಶೆ(ಗುರಿ)ಯನ್ನು ಹೊಂದಿರುತ್ತಾರೊ ಅವರು ಅದನ್ನು ಪಡೆದೇ ತೀರುತ್ತಾರೆ. ಆದ್ದರಿಂದ ನೀವು ಏನನ್ನು ಮಾಡಬಯಸಿದ್ದೀರೋ ಅದರ ಭಾರವನ್ನು ಯಾರ ತಲೆಯ ಮೇಲಾದರೂ ಹಾಕಿದರೆ ಆಗಲಿಲ್ಲ, ದೈವೇಚ್ಛೆ ಎಂದು ಕೈಚೆಲ್ಲಬೇಡಿರಿ. ನೂರಕ್ಕೆ ನೂರರಷ್ಟು ಮನಸ್ಸುಕೊಟ್ಟು ತೊಡಗಿಸಿಕೊಳ್ಳಿ. ಆಗ ನಿಮ್ಮ 'ಸಂಕಲ್ಪ' ಈಡೇರುತ್ತದೆ.

4. ಈ ವರ್ಷವನ್ನು ಇಡೀ ದೇಶವೇ 'ಯೋಗಮಯ' ಎಂದು ಘೋಷಿಸಿದೆ. 'ಯೋಗ' ಮತ್ತು 'ಸಂಕಲ್ಪ'ಗಳು ಜತೆಜತೆಗೆ ಸಾಗುತ್ತವೆ. ಇಡೀ ದೇಶ ಈಗ ಯೋಗಪರಿಕಲ್ಪನೆಯಿಂದ ಜಾಗೃತವಾಗಿದೆ. ನಮ್ಮ ಟ್ರಸ್ಟು ಕೂಡ ಈ ವರ್ಷದಿಂದ 'ಯೋಗ'ವನ್ನು ತನ್ನ ಭಾಗವಾಗಿ ಸ್ವೀಕರಿಸುತ್ತದೆ. ಕಾರವಾರ ಎಜುಕೇಶನ್ ಸೊಸೈಟಿ'ಯೂ ನಮ್ಮೊಂದಿಗೆ ಈ ವಿಚಾರದಲ್ಲಿ ನೂರಕ್ಕೆ ನೂರು ಕೈಜೋಡಿಸುತ್ತದೆ.
5. ಕಳೆದ ವರ್ಷವನ್ನು ನಮ್ಮ ಸಂಸ್ಥೆಗಳಲ್ಲಿ ಸ್ವಚ್ಛತೆ ಅಭಿಯಾನದ ಭಾಗವಾಗಿಸಿದ್ದೆವು. ಸ್ವಚ್ಛ ಇಟ್ಟರೆ ಸಾಲದು; ನಾವು ನಮ್ಮ ಸಂಸ್ಥೆಯೊಂದಿಗೆ ಅದು ಯಾವ ಗ್ರಾಮದಲ್ಲಿದೆಯೋ ಆ ಗ್ರಾಮವನ್ನು ಅಥವಾ ಪಟ್ಟಣವನ್ನು ಸ್ವಚ್ಛವಾಗಿಡುವ ಸಂಕಲ್ಪ ಮಾಡಬೇಕು. ಅದು ಹೇಗೆ ಮಾಡುತ್ತೀರಿ, ಯಾವಯಾವ ಸಂಸ್ಥೆಗಳ (ಏಜನ್ಸಿಗಳ) ನೆರವು ಪಡೆಯುತ್ತೀರಿ ಅದು ನಿಮಗೆ ಬಿಟ್ಟದ್ದು. ಜನಪ್ರತಿನಿಧಿಗಳನ್ನು, ನಗರಸಭೆ/ ಪುರಸಭೆ/ ಗ್ರಾಮ ಪಂಚಾಯತ್‌ಗಳನ್ನು ನಾವು ನಂಬಿ ಈ ಕೆಲಸಕ್ಕೆ ತೊಡಗುವುದಲ್ಲ; ನಮ್ಮದೇ ದಾರಿಯಲ್ಲಿ ಈ ಯೋಜನೆಯನ್ನು ಫಲಪ್ರದಗೊಳಿಸಬೇಕು.
6. ಪ್ಲಂಟೇಶನ್‌ಗಳ ಬಗ್ಗೆ ಐದುವರ್ಷಗಳಿಂದ ಪ್ರಯತ್ನಿಸುತ್ತಿದ್ದೇವೆ. ಆದರೆ ನಿರೀಕ್ಷೆಯಂತೆ ಕೆಲಸ ಆಗಿಲ್ಲ; ಈಗ ನಾವು ಈ ಬಗ್ಗೆ ವಿಶೇಷ ಗಮನಹರಿಸಬೇಕು; ಹೊಸ ಅಭಿಯಾನವನ್ನೇ ಶುರುಮಾಡಬೇಕು. ಒಂದು ಕೇಂದ್ರದಲ್ಲಿ 100 ಗಿಡ ಹಚ್ಚಿ ಅದರ ಪೋಷಣೆ ಆಗಬೇಕು ಅಂದರೆ ಮಾತ್ರ ಅಭಿವೃದ್ಧಿ ಹೊಂದುತ್ತದೆ. ಉತ್ತಮ ಗಿಡ, ಉತ್ತಮ ಕ್ರಿಯೆ, ಉತ್ತಮ ಪುರ ನಮ್ಮ ಉದ್ದೇಶವಾಗಬೇಕು.
7. ಟ್ರಸ್ಟಿನ ಧ್ಯೇಯ ವಾಕ್ಯವೇ "ಶಿಕ್ಷಣದ ಮೂಲಕ ಸಾಮಾಜಿಕ ಪರಿವರ್ತನೆ". ಈ ಧ್ಯೇಯ ವಾಕ್ಯವನ್ನು ನಾವು ಗಂಭೀರವಾಗಿ ಸ್ವೀಕರಿಸಿ ಹೆಜ್ಜೆ ಇಡಬೇಕಾಗಿದೆ. ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುವ ಎಲ್ಲಾ ಸಿಬ್ಬಂದಿಗಳು ತಮ್ಮ ತಾಬಾ ಇರುವ ಮಕ್ಕಳ ಭವಿಷ್ಯದ ಬಗ್ಗೆ ವಿಶೇಷ ಗಮನ ಹರಿಸುವದು ನಮ್ಮ ಕರ್ತವ್ಯದ ಭಾಗವಾಗಿದೆ. ನಮ್ಮ ಸುತ್ತಲಿನ ಸಾಮಾಜಿಕ, ಆರ್ಥಿಕ, ಆರೋಗ್ಯ ಮತ್ತಿತರ ಸಮಸ್ಯೆಗಳ ಬಗ್ಗೆಯೂ ಸದುದ್ದೇಶದಿಂದ ಸಹಾಯ ಹಸ್ತ ಚಾಚ ಬೇಕಾದದ್ದಿದೆ ಎಂಬ ವಿಚಾರವನ್ನು ಸಭೆಯಲ್ಲಿ ಅಧ್ಯಕ್ಷರು ಮಂಡಿಸಿದರು.

## 4. ಶೈಕ್ಷಣಿಕ ಹಾಗೂ ಸಾಮಾಜಿಕ ವಿಚಾರದ ಕುರಿತು ಟ್ರಸ್ಟಿನ ಧ್ಯೇಯ

1. ಟ್ರಸ್ಟಿನ ಸಂಸ್ಥೆಗಳಲ್ಲಿ ಕಲಿಯುತ್ತಿರುವ ಎಲ್ಲ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ಸಿಗುವುದರ ಜೊತೆಗೆ ಶಾಲಾ, ಕಾಲೇಜುಗಳಲ್ಲಿ ಒಳ್ಳೆಯ ವಾತಾವರಣ, ಒಳ್ಳೆಯ ಪರಿಸರ ದೊರೆಯುವಂತೆ ಪ್ರಯತ್ನಿಸುವದು, ಶಿಕ್ಷಣದ ಗುಣ ಮಟ್ಟ ಸುಧಾರಿಸುವದರ ಜೊತೆಗೆ ಪಠ್ಯ ಪಠ್ಯೇತರ ವಿಷಯದಲ್ಲಿ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡುವಂತೆ ಎಲ್ಲ ಮುಲಭೂತ ಸೌಲಭ್ಯ ಒದಗಿಸಿ ಶಿಕ್ಷಣದಲ್ಲಿ ಮಹತ್ವಪೂರ್ಣ ಬದಲಾವಣೆ ತರುವಲ್ಲಿ ಎಲ್ಲರೂ ಪ್ರಾಮಾಣಿಕವಾದ ಪ್ರಯತ್ನ ಮಾಡುವದು ಪ್ರತಿಯೊಬ್ಬರ ಕರ್ತವ್ಯವಾಗಿದೆ.
2. "ಶಿಕ್ಷಣದ ಮೂಲಕ ಸಾಮಾಜಿಕ ಬದಲಾವಣೆ" ಎಂಬ ಟ್ರಸ್ಟಿನ ನಿಲುವನ್ನು ಮನಸಾ ಸ್ವೀಕರಿಸಿ ಆಯಾ ಭಾಗಗಳಲ್ಲಿ ಟ್ರಸ್ಟಿನ ಶಿಕ್ಷಣ ಸಂಸ್ಥೆಗಳು ಸಮಾಜಸೇವಾ ಕಾರ್ಯಕ್ಕೆ ತಮ್ಮನ್ನು ತೊಡಗಿಸಿಕೊಂಡು ಕಾರ್ಯ ನಿರ್ವಹಿಸಬೇಕಾಗಿದೆ.

3. ಪರಿಹಾರ ಬೋಧನಾ ಕಾರ್ಯವನ್ನು ಹೆಚ್ಚು ಸಮರ್ಪಕವಾಗಿ ಎಲ್ಲ ಶಾಲೆಗಳಲ್ಲಿಯೂ ನಿರ್ವಹಿಸುವಂತೆ ಹಾಗೂ ಪರೀಕ್ಷಾ ಫಲಿತಾಂಶ ಉತ್ತಮ ಪಡಿಸುವದರ ಜೊತೆಗೆ ಪ್ರತಿಭಾವಂತ ವಿದ್ಯಾರ್ಥಿಗಳ ಬಗ್ಗೆಯೂ ಹೆಚ್ಚಿನ ಗಮನ ಹರಿಸಿ ಅವರ ಸಾಧನೆ ರಾಜ್ಯಮಟ್ಟದಲ್ಲಿ ಗುರುತಿಸುವಂತೆ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುವದು.
4. ಪಠ್ಯೇತರ ಚಟುವಟಿಕೆಗಳಲ್ಲೂ ಕೂಡಾ ವಿಶೇಷ ಗಮನ ಹರಿಸಿ, ಪ್ರತಿಭೆಯುಳ್ಳ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವ ದಿಕ್ಕಿನಲ್ಲಿ ಗಮನ ಹರಿಸುವದು.
5. ಸರಕಾರದ ಮಳೆಕೊಯ್ಲು ಯೋಜನೆ, ಸಂಪೂರ್ಣ ನಿರ್ಮಲಗ್ರಾಮ ಯೋಜನೆಗಳಿಗೆ ನಮ್ಮ ಸಂಸ್ಥೆಗಳು ತಮ್ಮ ಭಾಗಗಳಲ್ಲಿ ಕೈಜೋಡಿಸಿ ಅವು ಯಶಸ್ವಿಯಾಗುವಂತೆ ನೋಡಿಕೊಳ್ಳುವದು.
6. ಗ್ರಾಮೀಣ ಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಟ್ರಸ್ಟಿನ ಸಂಸ್ಥೆಗಳು ಸಾಕ್ಷರತೆ ಪ್ರಮಾಣ ನೂರಕ್ಕೆ ನೂರರಷ್ಟು ಆಗುವಂತೆ ಸ್ವಯಂಪ್ರೇರಣೆಯಿಂದ ಕಾರ್ಯಯೋಜನೆಗಳನ್ನು ಹಾಕಿಕೊಂಡು ಅದನ್ನು ಜಾರಿಗೆ ತರುವಲ್ಲಿ ಸಂಸ್ಥೆಯ ಸಿಬ್ಬಂದಿಗಳನ್ನು ಹಾಗೂ ವಿದ್ಯಾರ್ಥಿಗಳನ್ನು ಸಾಮೂಹಿಕವಾಗಿ ತೊಡಗಿಸಿಕೊಂಡು ಪ್ರಯತ್ನಿಸುವದು.
7. ಪ್ರತಿಯೊಂದು ಸಂಸ್ಥೆಯವರು (ಪ್ರಾಥಮಿಕ, ಪ್ರೌಢ ಮತ್ತು ಕಾಲೇಜುಗಳು ಸೇರಿದಂತೆ) ಕಡ್ಡಾಯವಾಗಿ ಪಾಲಕರ ಸಭೆಯನ್ನು ಕರೆದು ವಿದ್ಯಾರ್ಥಿಗಳ ಶೈಕ್ಷಣಿಕ ವಿಚಾರವಾಗಿ, ನಡವಳಿಕೆಯ ವಿಚಾರವಾಗಿ, ಹಾಜರಾತಿಯ ವಿಚಾರವಾಗಿ ಮುಕ್ತವಾಗಿ ಚರ್ಚಿಸಿ ಸಲಹೆ–ಸೂಚನೆಗಳನ್ನು ನೀಡುವದು ಮತ್ತು ಅವರಿಂದ ಬರುವ ಸಲಹೆ ಸೂಚನೆಗಳಿದ್ದರೆ, ಆಕ್ಷೇಪಗಳಿದ್ದರೆ ಅವನ್ನು ದಾಖಲೆಗೊಳಪಡಿಸಿ ಪರಿಹಾರದ ದಾರಿ ಕಂಡುಕೊಳ್ಳುವದು.
8. ಒಟ್ಟಾರೆಯಾಗಿ ಶಿಕ್ಷಕರು ತಮ್ಮ ಕ್ರಿಯಾಶೀಲತೆಯನ್ನು ಹೆಚ್ಚಿಸಿಕೊಂಡು, ತಾವು ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಿ ವಿದ್ಯಾರ್ಥಿಗಳ, ಪಾಲಕರ ಹಾಗೂ ಸಮಾಜದ ಗೌರವ ಸಂಪಾದಿಸಿಕೊಂಡು ಕಾರ್ಯ ನಿರ್ವಹಿಸುವದು ಪ್ರತಿಯೊಬ್ಬರ ಧ್ಯೇಯವಾಗಬೇಕಾಗಿದೆ.

## 5. ಕಳೆದ ವಾರ್ಷಿಕ ಸಭೆಯಲ್ಲಿ ಸ್ವೀಕರಿಸಿದ ನಿರ್ಣಯಗಳು ಹಾಗೂ ಅವುಗಳ ಅನುಷ್ಠಾನದ ಕುರಿತು

| ಸ್ವೀಕರಿಸಿದ ನಿರ್ಣಯಗಳು: | ಅಂಗೀಕರಿಸಿದ ನಿರ್ಣಯ ಅನುಷ್ಠಾನದ ಕುರಿತು |
|---|---|
| 1. ಪ್ರತಿಯೊಂದು ಸಂಸ್ಥೆಯೂ ಕನಿಷ್ಠ ಒಂದುನೂರು ಗಿಡನೆಟ್ಟು, ಅವು ಬೇರೂರಿ, ಬೆಳೆಯುವಂತೆ ಕಡ್ಡಾಯವಾಗಿ ನೋಡಿಕೊಳ್ಳಬೇಕು. ಪ್ರತಿಯೊಬ್ಬ ವಿದ್ಯಾರ್ಥಿ ಕನಿಷ್ಠ ಒಂದು ಗಿಡವನ್ನಾದರೂ ನೆಟ್ಟು ಅದನ್ನು ಪೋಷಿಸುವಂತೆ ಪ್ರೇರೆಪಿಸುವದು. | **2016–2017ನೇ ಸಾಲಿನಿಂದ ಟ್ರಸ್ಟಿನ ಎಲ್ಲಾ ಶಾಲಾ–ಕಾಲೇಜುಗಳಲ್ಲಿ ಗಿಡನೆಡುವ ಕಾರ್ಯಕ್ರಮವನ್ನು ಮುಂದುವರೆಸಿದ್ದಾರೆ. ಬಹುತೇಕ ಶಾಲೆಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿ ಒಂದಕ್ಕಿಂತ ಹೆಚ್ಚು ಗಿಡನೆಟ್ಟು ಪೋಶಿಸುತ್ತಿದ್ದಾರೆ. ಪ್ರತಿ ವರ್ಷ ಗಿಡ ನೆಡುವದರ ಜೊತೆಗೆ ಅದರ ಪೋಷಣೆ ಮಾಡುವದು ಅಷ್ಟೇ ಮಹತ್ವದ್ದು. ಈ ಬಗ್ಗೆ ಶಾಲೆಯ ಮುಖ್ಯಾಧ್ಯಾಪಕರು, ಎಲ್ಲ ಶಿಕ್ಷಕರ ಗಮನ ಹರಿಸಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಬೇಕು ಹಾಗೂ ಈ ಕಾರ್ಯಕ್ರಮ ನಿರಂತರವಾಗಿ ನಡೆಯಬೇಕು.** |

| | |
|---|---|
| 2. ಟ್ರಸ್ಟು ಈ ವರ್ಷವನ್ನು ಯೋಗ ಅಭಿಯಾನ ವರ್ಷವೆಂದೇ ಘೋಷಿಸುತ್ತದೆ; ಪ್ರತಿಯೊಂದು ಸಂಸ್ಥೆಗಳೂ ತಮ್ಮ ತಮ್ಮ ಕೇಂದ್ರದಲ್ಲಿ ಯೋಗವನ್ನು ಒಂದು ಕಡ್ಡಾಯ ಪ್ರಕ್ರಿಯೆಯಾಗಿ ಅಳವಡಿಸಿ, ಅದಕ್ಕೆ ಬೇಕಾದ ಸೌಕರ್ಯಗಳನ್ನು ಪಡೆದುಕೊಳ್ಳಬೇಕು. | ಟ್ರಸ್ಟು ನಡೆಸುತ್ತಿರುವ ಎಲ್ಲ ಶಿಕ್ಷಣ ಸಂಸ್ಥೆಗಳು 2016–2017ನೇ ಸಾಲಿನಲ್ಲಿ 'ಯೋಗ'ವನ್ನು ಒಂದು ಪ್ರಕ್ರಿಯೆಯಾಗಿ ಆಚರಿಸಿ ಕಾಲಕಾಲಕ್ಕೆ ಯೋಗ ತರಬೇತಿ ಶಿಬಿರಗಳನ್ನು ಏರ್ಪಡಿಸಿ ತನ್ಮೂಲಕ ವಿದ್ಯಾರ್ಥಿಗಳಲ್ಲಿ ಜಾಗೃತೆ ಮೂಡಿಸುವ ಕಾರ್ಯ ಮಾಡಿದೆ. ಈ ಕುರಿತು ವರದಿಯನ್ನು ಕೂಡಾ ಟ್ರಸ್ಟಿಗೆ ಸಲ್ಲಿಸಿದ್ದಾರೆ ಈ ಕಾರ್ಯಕ್ರಮ ನಿರಂತರವಾಗಿ ನಡೆಯಲಿ ಎಂದು ಆಶಿಸುತ್ತೇನೆ. |
| 3. ಅನುದಾನಿತ ಮಾಧ್ಯಮಿಕ ಶಾಲೆಗಳ ಸಾದಿಲ್ವಾರ ಖರ್ಚಿಗಾಗಿ ರೂ.15,000/– ರಂತೆ ನೀಡಲು ನಿರ್ಧರಿಸಲಾಯಿತು. | ಟ್ರಸ್ಟಿನ ನಿರ್ಣಯದಂತೆ ಸಾದಿಲ್ವಾರು ಖರ್ಚಿಗೆ 2016–2017ನೇ ಸಾಲಿನಲ್ಲಿ ರೂ.15,000/–ರಂತೆ ಒಟ್ಟೂ ಮೊತ್ತ ರೂ. 2,10,000/– ನೀಡಲಾಗಿದೆ |
| 4. ಈ ಹಿಂದಿನ ವರ್ಷಗಳಲ್ಲಿ ಪ್ರಾರಂಭವಾದ ಸ್ವಚ್ಛತಾ ಅಭಿಯಾನ ಅಪೂರ್ಣವೆಂದು ಇಂದಿನ ಸಭೆ ಭಾವಿಸುತ್ತದೆ; ಆದ್ದರಿಂದ ಆಯಾ ಶಾಲೆಗಳು ತಮ್ಮ ಆವಾರವನ್ನು ಸ್ವಚ್ಛವಾಗಿ ಇಡುವುದರೊಂದಿಗೆ ತಾವು ಪ್ರತಿನಿಧಿಸುತ್ತಿರುವ ಊರಿನ ಸ್ವಚ್ಛತೆಯನ್ನೂ ತನ್ನ ಈ ಅಭಿಯಾನದ ಭಾಗವೆಂದು ಭಾವಿಸಿ ಕಾರ್ಯಪ್ರವೃತ್ತರಾಗಬೇಕು | ಟ್ರಸ್ಟಿನ ಎಲ್ಲಾ ಶಾಲಾ–ಕಾಲೇಜುಗಳು ಸ್ವಚ್ಛತಾ ಅಭಿಯಾನವನ್ನು ಮುಂದುವರೆದ ಭಾಗವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಬಹುತೇಕ ಎಲ್ಲಾ ಶಾಲೆ–ಕಾಲೇಜುಗಳ ಆವರಣ ಸ್ವಚ್ಛವಾಗಿದ್ದು ಪ್ಲಾಸ್ಟಿಕ್ ರಹಿತವಾಗಿದೆ.<br>ಎಲ್ಲ ಸಂಸ್ಥೆಗಳು ತಮ್ಮ ಆವರಣದ ಸ್ವಚ್ಛತೆಯ ಜೊತೆಗೆ ಸಾಧ್ಯವಾದಷ್ಟು ಊರಿನ ಸ್ವಚ್ಛತೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ವಿನಂತಿಸಲಾಗಿದೆ. |
| 5. ಈ ವರ್ಷ ಟ್ರಸ್ಟಿನ ಬೇಡಿಕೆ ಇರುವ ಸಂಸ್ಥೆಗಳಿಗೆ ಪೂರೈಸಲು 100ರಷ್ಟು ಹೊಸ ಡೆಸ್ಕು ಮತ್ತು ಬೆಂಚುಗಳನ್ನು ಮಾಡಲು ನಿರ್ಧರಿಸಿತು. | 2016–2017ನೇ ಸಾಲಿನಲ್ಲಿ ತಯಾರಿಸಿದ ಡೆಸ್ಕು ಬೆಂಚುಗಳಲ್ಲಿ 25 ಸೆಟ್ ಡೆಸ್ಕ್ ಬೆಂಚನ್ನು ಗೋಖಲೆ ಸೆಂಟಿನರಿ ಕಾಲೇಜ್, ಅಂಕೋಲಾಕ್ಕೆ, 25 ಸೆಟ್ಟನ್ನು ದಿವೇಕರ ವಾಣಿಜ್ಯ ಕಾಲೇಜಿಗೆ ಹಾಗೂ 25 ಸೆಟ್ಟನ್ನು ಜನತಾ ವಿದ್ಯಾಲಯ ಮುದಗಾ ಶಾಲೆಗೆ ನೀಡಲಾಗಿದೆ. ಜನತಾ ವಿದ್ಯಾಲಯ ಮುರ್ಡೇಶ್ವರ ಶಾಲೆಯಲ್ಲಿ ಹೆಚ್ಚುವರಿಯಾಗಿದ್ದ 40 ಡೆಸ್ಕು ಬೆಂಚುಗಳಲ್ಲಿ 20 ಸೆಟ್ಟನ್ನು ಜನತಾ ವಿದ್ಯಾಲಯ ಅನಿಲಗೋಡ ಹಾಗೂ 20 ಸೆಟ್ಟನ್ನು ಜನತಾ ವಿದ್ಯಾಲಯ ಶಿರಾಲಿ ಶಾಲೆಗೆ ನೀಡಲಾಗಿದೆ. ಜನತಾ ವಿದ್ಯಾಲಯ ದಾಂಡೇಲಿಯಲ್ಲಿ ಹೆಚ್ಚುವರಿಯಾಗಿದ್ದ 40 ಡೆಸ್ಕ ಮತ್ತು ಬೆಂಚುಗಳಲ್ಲಿ 16 ಸೆಟ್ ನ್ನು ದಿನಕರ ಪ್ರಾಥಮಿಕ ಶಾಲೆ, ಧಾರೇಶ್ವರ ಶಾಲೆಗೆ ನೀಡಲಾಗಿದೆ. ಈ ವರ್ಷ ಒಟ್ಟಾರೆ 131 ಡೆಸ್ಕು ಬೆಂಚುಗಳನ್ನು ವಿವಿಧ ಶಾಲೆ–ಕಾಲೇಜುಗಳಿಗೆ ಅವಶ್ಯಕತೆಗೆ ಅನುಗುಣವಾಗಿ ನೀಡಲಾಗಿದೆ. |

## 6. ವಿದ್ಯಾರ್ಥಿಗಳ ದಾಖಲಾತಿ ಹಾಗೂ ಸಿಬ್ಬಂದಿಗಳ ವಿವರ

2016–2017ನೇ ಶೈಕ್ಷಣಿಕ ವರ್ಷದಲ್ಲಿ ಟ್ರಸ್ಟು ನಡೆಸುತ್ತಿರುವ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಹಾಗೂ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿಯವರ ವಿವರ ಈ ಕೆಳಗಿನಂತಿದೆ.

### INSTITUTIONAL STRENGTH - ACADEMIC YEAR 2016-2017

| SI | NAME OF THE INSTITUTION | Student Strength | | | Total No. of Employees | | | | |
|---|---|---|---|---|---|---|---|---|---|
| | | | | | Aided Employees | | Appointed by Mgt. | | |
| | | Boys | Girls | Total | Teach-ers | NT-Staff | Teach-ers | NT-Staff | Total |
| | **DEGREE COLLEGES** | | | | | | | | |
| 1. | Gokhale Centenary College, Ankola | 198 | 259 | **457** | 21 | 10 | 14 | 10 | **55** |
| 2. | Divekar College Of Commerce, Karwar | 105 | 160 | **265** | 8 | 5 | 3 | 7 | **23** |
| 3. | KWT's College of Education, Dandeli | 4 | 31 | **35** | - | - | 6 | 2 | **8** |
| 4. | KWT's B.C.A. College, Karwar | 44 | 57 | **101** | - | - | 6 | 2 | **8** |
| 5. | Divekar College PG Centre (M.Com.), Karwar | 15 | 35 | **50** | - | - | 3 | 2 | **5** |
| 6. | G.C.College PG Centre (M.Sc.), Ankola | 5 | 14 | **19** | - | - | 3 | 2 | **5** |
| | **Total** | **371** | **556** | **927** | **29** | **15** | **35** | **25** | **104** |
| | **JUNIOR COLLEGES** | | | | | | | | |
| 7. | Gokhale Centenary PU College, Ankola | 181 | 113 | **294** | 0 | 1 | 12 | 6 | **19** |
| 8. | Divekar PU Commerce College, Karwar | 68 | 48 | **116** | 0 | 0 | 7 | 2 | **9** |
| 9. | J.V. Comp. Jr. College, Dandeli | 94 | 119 | **213** | 4 | 4 | 4 | 1 | **13** |
| 10. | J.V. Comp. Jr. College, Kadtoka | 32 | 47 | **79** | 4 | 0 | 2 | 1 | **7** |
| 11. | J.V. Comp. Jr. College, Shirali | 107 | 196 | **303** | 6 | 0 | 5 | 6 | **17** |
| 12. | P.M. Comp. Jr. College, Ankola | 37 | 27 | **64** | 6 | 1 | 0 | 2 | **9** |
| | **Total** | **519** | **550** | **1069** | **20** | **6** | **30** | **18** | **74** |
| | **HIGH SCHOOLS** | | | | | | | | |
| 13. | People's Multipurpose High School, Ankola | 254 | 230 | **484** | 14 | 2 | 2 | 1 | **19** |
| 14. | P.M. Eng. Med. High School, Ankola | 95 | 87 | **182** | 0 | 0 | 7 | 2 | **9** |
| 15. | Janata Vidyalaya, Baad-Kagal | 125 | 90 | **215** | 9 | 2 | 1 | 2 | **14** |
| 16. | Janata Vidyalaya, Shirali | 63 | 48 | **111** | 7 | 1 | 0 | 0 | **8** |
| 17. | Janata Vidyalaya, Dandeli | 568 | 408 | **976** | 20 | 2 | 2 | 2 | **26** |
| 18. | Janata Vidyalaya, Kadwad | 39 | 38 | **77** | 6 | 1 | 1 | 1 | **9** |
| 19. | Janata Vidyalaya, Kasarkod | 68 | 54 | **122** | 5 | 1 | 3 | 1 | **10** |
| 20. | Janata Vidyalaya, Murdeshwar | 176 | 124 | **300** | 8 | 1 | 7 | 2 | **18** |
| 21. | Janata Vidyalaya, Mirjan-Kodkani | 165 | 155 | **320** | 10 | 1 | 0 | 2 | **13** |
| 22. | Janata Vidyalaya, Kadtoka | 106 | 96 | **202** | 9 | 1 | 0 | 2 | **12** |
| 23. | Janata Vidyalaya, Mudga | 58 | 54 | **112** | 7 | 1 | 0 | 1 | **9** |
| 24. | Janata Vidyalaya, Dhareshwar | 49 | 54 | **103** | 8 | 2 | 0 | 0 | **10** |
| 25. | Janata Vidyalaya, Bedkani | 63 | 64 | **127** | 7 | 1 | 0 | 1 | **9** |
| 26. | Smt. Kamalabai Pikale High School, Katgal | 131 | 112 | **243** | 5 | 1 | 2 | 1 | **9** |
| 27. | Janata Vidyalaya, Anilgod | 50 | 47 | **97** | 6 | 1 | 1 | 1 | **9** |
| 28. | Janata Vidyalaya, Kulve-Baroor | 54 | 43 | **97** | 6 | 2 | 1 | 1 | **10** |
| 29. | Dinkar Eng. Med. High School, Dhareshwar | 26 | 35 | **61** | 0 | 0 | 6 | 2 | **8** |
| | **Total** | **2090** | **1739** | **3829** | **127** | **20** | **33** | **22** | **202** |


| | | | | | | | | | |
|---|---|---|---|---|---|---|---|---|---|
| | **PRIMARY AND PRE-PRIMARY SCHOOLS** | | | | | | | | |
| 30. | English Medium Primary School, Dandeli | 618 | 528 | **1146** | 2 | 0 | 17 | 4 | **23** |
| 31. | Kannada Medium Primary School, Dandeli | 232 | 224 | **456** | 0 | 0 | 9 | 2 | **11** |
| 32. | Dr. Dinkar Desai Mem. Pri. School, Ankola | 323 | 236 | **559** | 0 | 0 | 12 | 2 | **14** |
| 33. | Dinkar Primary School, Dhareshwar | 131 | 99 | **230** | 0 | 0 | 10 | 1 | **11** |
| 34. | Balamandir, Shirali | 100 | 89 | **189** | 0 | 0 | 7 | 2 | **9** |
| 35. | English Medium Nursery School, Dandeli | 159 | 141 | **300** | 0 | 0 | 4 | 4 | **8** |
| 36. | Kannada Medium Nursery School, Dandeli | 55 | 71 | **126** | 0 | 0 | 4 | 3 | **7** |
| 37. | Thakkar Bapa Nursery School, Ankola | 110 | 117 | **227** | 0 | 0 | 4 | 1 | **5** |
| 38. | Dinkar Pre-Primary School, Dhareshwar | 40 | 33 | **73** | 0 | 0 | 2 | 0 | **2** |
| 39. | Anandashrama Balavikasa Kendra, Mundgod | - | - | **0** | 0 | 0 | 0 | 0 | **0** |
| | **Total** | **1768** | **1538** | **3306** | **2** | **0** | **69** | **19** | **90** |
| | **OTHER SOCIAL SERVICE INSTITUTIONS** | | | | | | | | |
| 40. | Thakkar Bapa Tailoring School, Ankola | - | 15 | **15** | - | - | 1 | - | **1** |
| 41. | Anandashram Tailoring School, Mundgod | - | 30 | **30** | - | - | 1 | 1 | **2** |
| 42. | Dinkar Kalaniketan Music School, Ankola | - | - | **0** | - | - | - | - | **0** |
| 43. | Dinkar Kalaniketan Music School, Karwar | 35 | 45 | **80** | - | - | 2 | - | **2** |
| 44. | Computer Training Centre, Karwar | 105 | 160 | **265** | - | - | 3 | 1 | **4** |
| 45. | Computer Training Centre, Dandeli | 368 | 256 | **624** | - | - | 2 | 1 | **3** |
| | **Total** | **508** | **506** | **1014** | **0** | **0** | **9** | **3** | **12** |

## ABSTRACT OF STUDENT & EMPLOYEE STRENGTH


| **Sl** | **NAME OF THE INSTITUTION** | **Student Strength** | | | **Total No. of Employees** | | | | |
|---|---|---|---|---|---|---|---|---|---|
| | | | | | Aided Employees | | Appointed by Mgt. | | |
| | | Boys | Girls | Total | Teach-ers | NT-Staff | Teach-ers | NT-Staff | Total |
| **1** | **DEGREE COLLEGES** | **371** | **556** | **927** | **29** | **15** | **35** | **25** | **104** |
| **2** | **JUNIOR COLLEGES** | **519** | **550** | **1069** | **20** | **6** | **30** | **18** | **74** |
| **3** | **HIGH SCHOOLS** | **2090** | **1739** | **3829** | **127** | **20** | **33** | **22** | **202** |
| **4** | **PRIMARY & PRE-PRIMARY SCHOOLS** | **1768** | **1538** | **3306** | **2** | **0** | **69** | **19** | **90** |
| **5** | **OTHER INSTITUTIONS** | **508** | **506** | **1014** | **0** | **0** | **9** | **3** | **12** |
| | **GRAND TOTAL** | **5256** | **4889** | **10145** | **178** | **41** | **176** | **87** | **482** |

ಟ್ರಸ್ಟು ನಡೆಸುತ್ತಿರುವ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಒಟ್ಟೂ 10145 ವಿದ್ಯಾರ್ಥಿಗಳು 2016–2017ನೇ ಸಾಲಿನಲ್ಲಿ ವಿವಿಧ ತರಗತಿಗಳಿಗೆ ಪ್ರವೇಶ ಪಡೆದಿರುತ್ತಾರೆ. ಎಲ್ಲ ಸಂಸ್ಥೆಗಳಲ್ಲಿ ಒಟ್ಟೂ 178 ಅನುಮೋದಿತ ಅಧ್ಯಾಪಕರು, 41 ಅಧ್ಯಾಪಕೇತರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಇದರ ಹೊರತಾಗಿ ಆಡಳಿತ ಮಂಡಳಿಯಿಂದ ನೇಮಕಾತಿ ಹೊಂದಿದ ಪೂರ್ಣಕಾಲಿಕ ಹಾಗೂ ಅರೆಕಾಲಿಕ 176 ಅಧ್ಯಾಪಕರು ಹಾಗೂ 87 ಶಿಕ್ಷಕೇತರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಿಕ್ಷಣ ಸಂಸ್ಥೆಗಳಲ್ಲಿ ಒಟ್ಟೂ **482** ಸಿಬ್ಬಂದಿಗಳು ಹಾಗೂ ಟ್ರಸ್ಟ ಕಾರ್ಯಾಲಯದಲ್ಲಿ **4** ಸಿಬ್ಬಂದಿಗಳು ಸೇರಿ ಒಟ್ಟೂ **486** ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.

# STUDENT STRENGTH 2016-2017




# STAFF POSITION - 2016 - 2017




| | Degree Colleges | Junior Colleges | High Schools | Primary & Pre-Primary Schools | Other Institutions |
|---|---|---|---|---|---|
| Aided Teachers | 29 | 20 | 127 | 2 | 0 |
| Aided Non-Teaching Staff | 15 | 6 | 20 | 0 | 0 |
| Mgt. Appnt. Teachers | 35 | 30 | 33 | 69 | 9 |
| Mgt. Appnt. Non-Teaching | 25 | 18 | 22 | 19 | 3 |
| Total Staff | 104 | 74 | 202 | 90 | 12 |

## 7. ಶೈಕ್ಷಣಿಕ ಪ್ರಗತಿ: 2016–2017ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಹಾಗೂ ಪದವಿ ಪರೀಕ್ಷೆಯಲ್ಲಿ ಮಾಡಿದ ಸಾಧನೆ

2016–2017ನೇ ಶೈಕ್ಷಣಿಕ ವರ್ಷದಲ್ಲಿ ಜರುಗಿದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ನಮ್ಮ ಟ್ರಸ್ಟಿನ ಎಲ್ಲ ಸಂಸ್ಥೆಗಳಲ್ಲಿ ಪರೀಕ್ಷೆ ಪರಿಣಾಮದ ವಿವರ ಈ ಕೆಳಗಿನಂತೆ ಇದೆ.

### SSLC EXAMINATION HELD IN MARCH / APRIL 2017


| Name of the School | *Previous Year's Result* | Students Appeared | Students Passed | RESULT % |
|---|---|---|---|---|
| **Dinkar Eng. Med. High School, Dhareshwar** | *100.00* | 20 | 20 | **100.00** |
| **Janata Vidyalaya, Kasarkod** | *92.11* | 47 | 44 | **93.62** |
| **P.M. Eng. Med. High School, Ankola** | *100.00* | 59 | 55 | **93.22** |
| **Janata Vidyalaya, Kadwad** | *89.74* | 25 | 23 | **92.00** |
| **Janata Vidyalaya, Kadtoka** | *91.07* | 62 | 57 | **91.94** |
| **Janata Vidyalaya, Dandeli [Eng. Med.]** | *96.35* | 140 | 127 | **90.71** |
| **Janata Vidyalaya, Kulve-Baroor** | *86.96* | 36 | 32 | **88.89** |
| **Janata Vidyalaya, Baad-Kagal** | *96.70* | 69 | 61 | **88.41** |
| **Janata Vidyalaya, Anilgod** | *96.49* | 35 | 29 | **82.86** |
| **Janata Vidyalaya, Shirali** | *68.97* | 38 | 30 | **78.95** |
| **P.M.High School, Ankola** | *85.90* | 164 | 128 | **78.05** |
| **Janata Vidyalaya, Mudga** | *74.29* | 35 | 26 | **74.29** |
| **Janata Vidyalaya, Bedkani** | *93.48* | 48 | 33 | **68.75** |
| **Janata Vidyalaya, Murdeshwar** | *77.71* | 127 | 86 | **67.72** |
| **Janata Vidyalaya, Dandeli [Kan. Med.]** | *71.98* | 210 | 125 | **59.52** |
| **S.K.P.High School, Katgal** | *79.55* | 81 | 48 | **59.26** |
| **Janata Vidyalaya, Mirjan** | *81.97* | 131 | 76 | **58.02** |
| **Janata Vidyalaya, Dhareshwar** | *83.33* | 45 | 24 | **53.33** |

| | |
|---|---|
| **2017 SSLC - Karnataka State % - 67.87** | **2017 SSLC – Uttar Kannada District % - 78.92** |

ಶೇಕಡಾ 100ರಷ್ಟು ಫಲಿತಾಂಶ ನೀಡಿದ ದಿನಕರ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಧಾರೇಶ್ವರ ಹಾಗೂ ಉತ್ತಮ ಫಲಿತಾಂಶ ನೀಡಿದ ಕಾಸರಕೋಡ, ಪಿ.ಎಮ್.ಇಂಗ್ಲೀಷ ಮೀಡಿಯಮ್ ಸ್ಕೂಲ, ಅಂಕೋಲಾ, ಕಡವಾಡ, ಕಡತೋಕಾ, ಇಂಗ್ಲೀಷ ಮೀಡಿಯಮ್ ಹೈಸ್ಕೂಲ, ದಾಂಡೇಲಿ, ಕುಳವೆ–ಬರೂರ, ಬಾಡ–ಕಾಗಾಲ, ಅನಿಲಗೋಡ, ಶಿರಾಲಿ ಶಾಲೆಗಳ ಮುಖ್ಯಾಧ್ಯಾಪಕರನ್ನು, ಶಿಕ್ಷಕರನ್ನು ಹಾಗೂ ವಿದ್ಯಾರ್ಥಿಗಳನ್ನು ಟ್ರಸ್ಟಿನ ಪರವಾಗಿ ಅಭಿನಂದಿಸುತ್ತೇನೆ.

ಜಿಲ್ಲಾ ಮಟ್ಟದ ಸರಾಸರಿಗಿಂತ ಕಡಿಮೆ ಫಲಿತಾಂಶ ನೀಡಿದ ಶಾಲೆಗಳಾದ ಪಿ.ಎಮ್.ಹೈಸ್ಕೂಲ್, ಅಂಕೋಲಾ, ಮುದಗಾ, ಬೇಡ್ಕಣಿ, ಹಾಗೂ ಜಿಲ್ಲಾ ಮತ್ತು ರಾಜ್ಯ ಸರಾಸರಿಗಿಂತ ಕಡಿಮೆ ಫಲಿತಾಂಶ ನೀಡಿದ ಶಾಲೆಗಳಾದ ಮುರ್ಡೇಶ್ವರ, ಕನ್ನಡ ಮಾಧ್ಯಮ ದಾಂಡೇಲಿ, ಕತಗಾಲ, ಮಿರ್ಜಾನ, ಧಾರೇಶ್ವರ ಈ ಶಾಲೆಗಳ ಮುಖ್ಯಾಧ್ಯಾಪಕರು ಈ ವರ್ಷ ವಿಶೇಷ ಪ್ರಯತ್ನ ಮಾಡಿ ಉತ್ತಮ ಫಲಿತಾಂಶ ನೀಡುವಂತೆ ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು. ಈ ಎಲ್ಲ ಶಾಲೆಗಳು ಈ ವರ್ಷ ಉತ್ತಮ ಫಲಿತಾಂಶ ನೀಡಲೆಂದು ಹಾರೈಸುತ್ತೇನೆ. ಅವರೆಲ್ಲರನ್ನು ಕೂಡಾ ಅಭಿನಂದಿಸುತ್ತೇನೆ.

## HIGH SCHOOL RESULTS - 2016-2017




## ಎಪ್ರೀಲ್ 2017ರಲ್ಲಿ ಜರುಗಿದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಟ್ರಸ್ಟು ನಡೆಸುತ್ತಿರುವ ಶಾಲೆಗಳಲ್ಲಿ ಅತಿ ಹೆಚ್ಚು ಅಂಕ ಪಡೆದು ಪ್ರಥಮರಾದವರ ಯಾದಿ

### TOP SCORERS FROM THE TRUST INSTITUTIONS AT SSLC - APRIL 2017

| Sl. | Name of the Student | Name of the School | Marks | Out of | Result % |
|---|---|---|---|---|---|
| 1 | **Mr. Nalin Nitin Hosmelkar** | P.M. Eng. Med. High School, Ankola | 621 | 625 | **99.36** |
| 2 | **Mr. Ravi Prakash Hegde** | Janata Vidyalaya, Kadtoka | 617 | 625 | **98.72** |
| 3 | **Ms. Preeti V Halappanavar** | Janata Vidyalaya, Dandeli [Eng. Med.] | 613 | 625 | **98.08** |
| 4 | **Ms. Sneha Suresh Dixit** | Dinkar Eng. Med. High School, Dhareshwar | 606 | 625 | **96.96** |
| 5 | **Ms. Shweta Annappa Naik** | Janata Vidyalaya, Bedkani | 605 | 625 | **96.80** |

| | | | | | |
|---|---|---|---|---|---|
| 6 | **Ms. Bhuvaneshwari Hegde** | Janata Vidyalaya, Kulve-Baroor | 603 | 625 | **96.48** |
| 7 | **Mr. Ganapati L Hegde** | Janata Vidyalaya, Anilgod | 599 | 625 | **95.84** |
| 8 | **Mr. Prateek V Nayak** | P.M.High School, Ankola | 593 | 625 | **94.88** |
| 9 | **Ms. Trupti Ravindra Achari** | Janata Vidyalaya, Murdeshwar | 589 | 625 | **94.24** |
| 10 | **Ms. Manisha Annappa Devadig** | Janata Vidyalaya, Shirali | 587 | 625 | **93.92** |
| 11 | **Mr. R M Chnimay** | Janata Vidyalaya, Baad-Kagal | 585 | 625 | **93.60** |
| 12 | **Ms. Ashwini Ramu Kurubar** | Janata Vidyalaya, Dandeli [Kan. Med.] | 583 | 625 | **93.28** |
| 13 | **Mr. Sharat Subray Naik** | Janata Vidyalaya, Kasarkod | 579 | 625 | **92.64** |
| 14 | **Ms. Nirmala Budavant Patgar** | Janata Vidyalaya, Mirjan-Kodkani | 579 | 625 | **92.64** |
| 15 | **Mr. Chandrashekhar M Gouda** | S.K.P.High School, Katgal | 577 | 625 | **92.32** |
| 16 | **Mr. Akash K Kotharkar** | Janata Vidyalaya, Kadwad | 541 | 625 | **86.56** |
| 17 | **Ms. Ranjita Shetty** | Janata Vidyalaya, Dhareshwar | 521 | 625 | **83.36** |
| 18 | **Mr. Gururaj Kumakar** | Janata Vidyalaya, Mudga | 460 | 625 | **73.60** |

2017ರಲ್ಲಿ ಜರುಗಿದ ದ್ವಿತೀಯ ಪದವಿ ಪೂರ್ವ ಪರೀಕ್ಷೆಯ ಫಲಿತಾಂಶವನ್ನು ಈ ಕೆಳಗೆ ನೀಡಲಾಗಿದೆ.

## PU II YEAR EXAMINATION HELD IN APRIL 2017

| Name of the College | Stream | *Prev. Year's Result* | Students Appeared | Students Passed | RESULT % |
|---|---|---|---|---|---|
| **J.V.Comp. Jr. College, Shirali** | Arts | *70.21* | 88 | 72 | **81.82** |
| **J.V.Comp. Jr. College, Shirali** | Com | *78.57* | 66 | 49 | **74.24** |
| **G.C.P.U.College, Ankola** | Sci | *76.54* | 87 | 64 | **73.56** |
| **J.V.Comp. Jr. College, Dandeli** | Com | *83.02* | 68 | 49 | **72.06** |
| **J.V.Comp. Jr. College, Kadtoka** | Arts | *88.24* | 37 | 24 | **64.86** |
| **G.C.P.U.College, Ankola** | Com | *64.52* | 39 | 24 | **61.54** |
| **Divekar P.U. College, Karwar** | Com | *79.71* | 54 | 30 | **55.56** |
| **J.V.Comp. Jr. College, Dandeli** | Arts | *75.00* | 29 | 16 | **55.17** |
| **G.C.P.U.College, Ankola** | Arts | *56.67* | 18 | 5 | **27.78** |
| **P.M.Comp. Jr. College, Ankola** | Arts | *61.19* | 36 | 6 | **16.67** |

| **2017 PU II - Karnataka State % - 52.38** | **2017 PU II – Uttar Kannada District % - 71.99** |
|---|---|


ಎಪ್ರೀಲ್ 2017ರಲ್ಲಿ ಜರುಗಿದ ದ್ವಿತೀಯ ಪಿ.ಯು.ಸಿ.ಪರೀಕ್ಷೆ ಫಲಿತಾಂಶದಲ್ಲಿ ಕಲಾ ವಿಭಾಗದಲ್ಲಿ ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜ್, ಶಿರಾಲಿ ಶೇಕಡಾ 81.82ರಷ್ಟು ಫಲಿತಾಂಶ ವಾಣಿಜ್ಯ ವಿಭಾಗದಲ್ಲಿ ಶೇಕಡಾ 74.24ರಷ್ಟು ಫಲಿತಾಂಶ ನೀಡಿ ಪ್ರಥಮ ಸ್ಥಾನದಲ್ಲಿದೆ. ಗೋಖಲೆ ಸೆಂಟಿನರಿ ಪದವಿ ಪೂರ್ವ ಕಾಲೇಜ್ ಅಂಕೋಲಾ ವಿಜ್ಞಾನ ವಿಭಾದಲ್ಲಿ ಶೇಕಡಾ 73.56ರಷ್ಟು ಹಾಗೂ ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜ್ ದಾಂಡೇಲಿ ವಾಣಿಜ್ಯ ವಿಭಾಗದಲ್ಲಿ 72.06ರಷ್ಟು ಫಲಿತಾಂಶ ನೀಡಿ ನಂತರದ ಸ್ಥಾನದಲ್ಲಿದೆ. ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜ್, ಕಡತೋಕಾ ಹಾಗೂ ಗೋಖಲೆ ಸೆಂಟಿನರಿ ಪದವಿ ಪೂರ್ವ ಕಾಲೇಜ್, ಅಂಕೋಲಾ ಅನುಕ್ರಮವಾಗಿ ಕಲೆ ಮತ್ತು ವಾಣಿಜ್ಯ ವಿಭಾಗದಲ್ಲಿ ಶೇಕಡಾ 64.86 ಮತ್ತು ಶೇಕಡಾ 61.54 ರಷ್ಟು ಫಲಿತಾಂಶ ನೀಡಿದೆ. ದಿವೇಕರ ಪದವಿ ಪೂರ್ವ ಕಾಲೇಜು, ಕಾರವಾರ ವಾಣಿಜ್ಯ ವಿಭಾಗದಲ್ಲಿ ಶೇಕಡಾ 55.56 ದಾಂಡೇಲಿ ಕಲಾ ವಿಭಾಗದಲ್ಲಿ ಶೇಕಡಾ 55.17ರಷ್ಟು ಫಲಿತಾಂಶ ನೀಡಿದ್ದು ಜಿಲ್ಲಾ ಸರಾಸರಿಗಿಂತ ಕಡಿಮೆ ಆಗಿದೆ.

ಗೋಖಲೆ ಸೆಂಟಿನರಿ ಪದವಿ ಪೂರ್ವ ಕಾಲೇಜು ಕಲಾ ವಿಭಾಗದಲ್ಲಿ ಕೇವಲ 27.78ರಷ್ಟು ಫಲಿತಾಂಶ ನೀಡಿದೆ. ಹಾಗೂ ಪಿ.ಎಮ್.ಸಂಯುಕ್ತ ಪದವಿ ಪೂರ್ವ ಕಾಲೇಜು, ಅಂಕೋಲಾ ಕೇವಲ 16.67ರಷ್ಟು ಫಲಿತಾಂಶ ನೀಡಿದ್ದು ಇದು ಜಿಲ್ಲೆ ಮತ್ತು ರಾಜ್ಯ ಸರಾಸರಿಗಿಂತ ಕಡಿಮೆ ಆಗಿದೆ. ಈ ಫಲಿತಾಂಶ ಟ್ರಸ್ಟಿಗೆ ಒಂದು ಕಪ್ಪು ಚುಕ್ಕೆ ಆಗಿದೆ.

ರಾಜ್ಯ ಮತ್ತು ಜಿಲ್ಲಾ ಸರಾಸರಿಗಿಂತ ಕಡಿಮೆ ಫಲಿತಾಂಶ ನೀಡಿದ ಕಾಲೇಜುಗಳ ಪ್ರಾಚಾರ್ಯರು ಹಾಗೂ ಉಪನ್ಯಾಸಕರು ಈ ಬಗ್ಗೆ ಚಿಂತನೆ ನಡೆಸಿ ಬರುವ ವರ್ಷ ಈ ಫಲಿತಾಂಶ ಮರುಕಳಿಸದಂತೆ ಎಚ್ಚರಿಕೆ ವಹಿಸಿ ಉತ್ತಮ ಫಲಿತಾಂಶ ನೀಡಲು ಪ್ರಾಮಾಣಿಕ ಪ್ರಯತ್ನ ಮಾಡುವದು ಅವಶ್ಯವಿದೆ.

ಉತ್ತಮ ಫಲಿತಾಂಶ ನೀಡಿದ ಎಲ್ಲ ಕಾಲೇಜುಗಳ ಪ್ರಾಚಾರ್ಯರಿಗೆ, ಉಪನ್ಯಾಸಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಟ್ರಸ್ಟಿನ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ.

## JUNIOR COLLEGE RESULTS - 2016-2017



## TOP SCORERS FROM THE TRUST INSTITUTIONS AT PU II - APRIL 2017

| Sl. | Name of the Student | Stream | Name of the School | Marks | Out of | Result % |
|---|---|---|---|---|---|---|
| 1 | **Ms. Aishwarya Talakeri** | Sci | G.C.P.U.College, Ankola | 585 | 600 | **97.50** |
| 2 | **Mr. Divesh J Tanna** | Com | Divekar PU College, Karwar | 552 | 600 | **92.00** |
| 3 | **Mr. Ganesh D Madiwal** | Arts | J.V.C.Jr. College, Kadtoka | 511 | 600 | **85.17** |
| 4 | **Mr. Abhishek N Naik** | Arts | J.V.C.Jr. College, Shirali | 499 | 600 | **83.17** |
| 5 | **Mr. Vittu Adolkar** | Com | J.V.C.Jr. College, Dandeli | 498 | 600 | **83.00** |
| 6 | **Ms. Bhavana K Ager** | Arts | P.M.C.Jr. College, Ankola | 457 | 600 | **76.17** |

2016–2017ನೇ ಸಾಲಿನ ಪದವಿ ಪರೀಕ್ಷೆಯ ಫಲಿತಾಂಶವನ್ನು ಈ ಕೆಳಗೆ ನೀಡಲಾಗಿದೆ.

## DEGREE EXAMINATION HELD IN MAY / JUNE 2017

| Name of the College | Stream | *Previous Year's Result* | Students appeared | Students passed | RESULT % (2016-2017) |
|---|---|---|---|---|---|
| **KWT's B.Ed. College, Dandeli** | BEd | *98.99* | 32 | 32 | **100.00** |
| **KWT's BCA College, Karwar** | BCA | *94.44* | 36 | 36 | **100.00** |
| **Divekar College of Commerce, Karwar** | MCom | *100.00* | 30 | 30 | **100.00** |
| **Divekar College of Commerce, Karwar** | BCom | *95.51* | 88 | 86 | **97.73** |
| **Gokhale Centenary College, Ankola** | BA | *90.57* | 25 | 24 | **96.00** |
| **Gokhale Centenary College, Ankola** | BCom | - | 36 | 27 | **75.00** |
| **Gokhale Centenary College, Ankola** | BSc | *71.83* | 58 | 37 | **63.79** |
| **Gokhale Centenary College, Ankola** | MSc | - | 15 | 2 | **13.33** |

ಸಂಸ್ಥೆಗಳ ಮುಖ್ಯಸ್ಥರಿಗೆ, ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಟ್ರಸ್ಟಿನ ಪರವಾಗಿ ಅಭಿನಂದಿಸುತ್ತೇನೆ.

## 8. 2016–2017ನೇ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ವಿಶೇಷ ಸಾಧನೆ

| | |
|---|---|
| **1.** | **ಗೋಖಲೆ ಸೆಂಟಿನರಿ ಪದವಿ ಪೂರ್ವ ಕಾಲೇಜ್, ಅಂಕೋಲಾ**<br>▪ ದಿವೇಕರ ವಾಣಿಜ್ಯ ಕಾಲೇಜಿನ ವಿದ್ಯಾರ್ಥಿ ಮೊಹಮ್ಮದ್ ರಾಜಾ ಅಕ್ಬರ್ ಶೇಖ ಇವರು ಕರ್ನಾಟಕ ವಿಶ್ವವಿದ್ಯಾಲಯದ ತಾಯಕೊಂಡೋದಲ್ಲಿ ನಡೆದ ಪಂದ್ಯಾವಳಿಯಲ್ಲಿ ಕಂಚಿನ ಪದಕ ಗಳಿಸಿದ್ದಾರೆ. |
| **2.** | **ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜ, ಕಡತೋಕಾ**<br>▪ ಜಗದೀಶ ಗೌಡ ಇವರು ರಾಜ್ಯಮಟ್ಟದ ಪದವಿ ಪೂರ್ವ ಶಿಕ್ಷಣ ಇಲಾಖೆ ನಡೆಸುವ 100 ಮತ್ತು 400 ಮಿ. ಓಟದಲ್ಲಿ ಭಾಗವಹಿಸಿ 6ನೇ ಸ್ಥಾನ ಪಡೆದಿರುವರು.<br>▪ ಜಗದೀಶ ಟಿ.ಗೌಡ ಇವರು ರಾಜ್ಯಮಟ್ಟದ 400 ಮಿ. ಹರ್ಡಲ್ಸನಲ್ಲಿ ಭಾಗವಹಿಸಿ 5ನೇ ಸ್ಥಾನ ಪಡೆದಿರುವರು. |

| | |
|---|---|
| **3.** | **ಪಿ.ಎಂ.ಹೈಸ್ಕೂಲ, ಅಂಕೋಲಾ**<br>▪ ಅಕ್ಷತಾ ಪೊಕ್ಕಾ ಗೌಡ, 9ಎ, ಇವರು 800 ಮಿ. ಓಟದಲ್ಲಿ ರಾಜ್ಯಕ್ಕೆ 5ನೇ ಸ್ಥಾನ ಪಡೆದಿದ್ದಾರೆ.<br>▪ ವೈಷ್ಣವಿ ನಾಯಕ ಮತ್ತು ವಿನಾಯಕ ಜಿ.ನಾಯ್ಕ ಇವರು ಶೆಟಲ್ ಬ್ಯಾಡಮಿಂಟನ ಸ್ಪರ್ಧೆಯಲ್ಲಿ ಆಯ್ಕೆಯಾಗಿ ರಾಜ್ಯ ಮಟ್ಟದಲ್ಲಿ ಭಾಗವಹಿಸಲು ಆಯ್ಕೆಯಾಗಿದ್ದಾರೆ. |
| **4.** | **ಜನತಾ ವಿದ್ಯಾಲಯ, ಮಿರ್ಜಾನ–ಕೋಡ್ಕಣಿ**<br>▪ 10ನೇ ತರಗತಿಯಲ್ಲಿ ಓದುತ್ತಿರುವ ಮಹೇಂದ್ರ ಅಂಬಿಗ, ಮಧುರಾ ದೇಶಭಂಡಾರಿ, ಅರ್ಪಿತ ಅಂಬಿಗ ಮತ್ತು ಸಂದೇಶಕುಮಾರ ಪೋಲ್‌ವಾಲ್ಟ ಹಾಗೂ ನಡಿಗೆ ಪಂದ್ಯದಲ್ಲಿ ರಾಜ್ಯಮಟ್ಟದಲ್ಲಿ ಭಾಗವಹಿಸಿದ್ದು, ಮಹೇಂದ್ರ ಅಂಬಿಗ ಇವರು ರಾಜ್ಯಕ್ಕೆ 3ನೇ ಸ್ಥಾನ ಪಡೆದಿರುವರು. |
| **5.** | **ಜನತಾ ವಿದ್ಯಾಲಯ, ಶಿರಾಲಿ**<br>▪ ಶಾಲೆಯ 12 ವಿದ್ಯಾರ್ಥಿಗಳು 17ನೇ ವಿಶ್ವ ಜಾಂಬೂರಿಯಲ್ಲಿ ರಾಷ್ಟ್ರಪತಿ ಪುರಸ್ಕಾರ ಪಡೆದಿರುವರು. |
| **6.** | **ಜನತಾ ವಿದ್ಯಾಲಯ, ಕಡತೋಕಾ**<br>▪ ಸುವರ್ಣ ಕೆ.ಗೌಡ, 10ನೇ ತರಗತಿ, ಇವರು ಉದ್ದ ಜಿಗಿತ ತ್ರಿವಿಧ ಜಿಗಿತ, 100 ಮಿ. ಓಟದಲ್ಲಿ ರಾಜ್ಯಮಟ್ಟದಲ್ಲಿ ಭಾಗವಹಿಸಿದ್ದಾರೆ.<br>▪ ಕಾರ್ತಿಕ ಮೋಹನ ನಾಯ್ಕ ಇವರು ತ್ರಿವಿಧ ಜಿಗಿತದಲ್ಲಿ ರಾಜ್ಯಮಟ್ಟದಲ್ಲಿ ಭಾಗವಹಿಸಿದ್ದಾರೆ. |
| **7.** | **ಜನತಾ ವಿದ್ಯಾಲಯ, ದಾಂಡೇಲಿ**<br>▪ ಹರ್ಷಲ ಚಿತೇಂದ್ರ ರಾಂಗಣೇಕರ, 9ನೇ ತರಗತಿ, ಇವರು ಟೇಬಲ್ ಟೆನ್ನಿಸ್ ಸ್ಪರ್ಧೆಯಲ್ಲಿ ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು ದೆಹಲಿಯಲ್ಲಿ ನಡೆದ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆ.<br>▪ ಪಿಯುಷ ಸುರೇಶ ಕೌರ, 10ನೇ ತರಗತಿ, ಇವರು ಚದುರಂಗ ಸ್ಪರ್ಧೆಯಲ್ಲಿ ರಾಜ್ಯಮಟ್ಟದಲ್ಲಿ ಭಾಗವಹಿಸಿದ್ದಾರೆ.<br>▪ ಸಾಖಲೇನ್ ಆರ್.ಶೇಖ್, 10ನೇ ತರಗತಿ, ಇವರು ಗುಂಡು ಎಸೆತ ಚಕ್ರ ಎಸೆತ, ಹ್ಯಾಮರ ಎಸೆತ ಸ್ಪರ್ಧೆಯಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದಾರೆ. |
| **8.** | **ದಿನಕರ ದೇಸಾಯಿ ಸ್ಮಾರಕ ಕನ್ನಡ ಹಾಗೂ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ, ಅಂಕೋಲಾ**<br>▪ ದೀಪಿತ ಸುಧೀರ ನಾಯಕ, ಬಿ.ಎಲ್.ಸೃಜನ, ಗುರುಪ್ರಸಾದ ರಾಜಾರಾಮ ವೈದ್ಯ, ಶ್ರವಣ ನಾಗರಾಜ ಕಾಮತ ಇವರು ವಿಜ್ಞಾನ ವಸ್ತುಪ್ರದರ್ಶನ ಸ್ಪರ್ಧೆಯಲ್ಲಿ ರಾಜ್ಯಮಟ್ಟದಲ್ಲಿ ಭಾಗವಹಿಸಿರುತ್ತಾರೆ.<br>▪ ನಜೀರ ರಫೀಕ್ ಖಾನ್, ಮಯೂರ ಗೋವಿಂದರಾಯ ನಾಯ್ಕ, ಆದಿತ್ಯಾ ಚಂದ್ರಶೇಖರ ಕಸಬೇಕರ, ಸಚಿನ ಬಸವರಾಜ ಮೋಟಗಿ, ಸೃಜನ ಸುಧಾಕರ ನಾಯ್ಕ 7ನೇ ತರಗತಿ ಇವರು ಶಟಲ್ ಬ್ಯಾಡ್ಮಿಂಟನ ಸ್ಪರ್ಧೆಯಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ. |

| | |
|---|---|
| 9. | **ಜನತಾ ವಿದ್ಯಾಲಯ, ಕುಳವೆ–ಬರೂರ**<br>▪ ನಿಶಿಲ್ ನಾರಾಯಣ ನಾಯ್ಕ, 10ನೆ ತರಗತಿ, ಇವರು ಹರ್ಡಲ್ ಸ್ಪರ್ಧೆಯಲ್ಲಿ ರಾಜ್ಯಕ್ಕೆ 6ನೇ ಸ್ಥಾನ ಪಡೆದಿರುವರು |
| 10. | **ಪಿ.ಎಂ. ಇಂಗ್ಲೀಷ ಮೀಡಿಯಮ್ ಹೈಸ್ಕೂಲ, ಅಂಕೋಲಾ**<br>▪ ಸುಮಿತ ಆರ್.ನಾಯ್ಕ, 10ನೇ ತರಗತಿ, ಇವರು ಹೆಮರ್ ಥ್ರೋ ಸ್ಪರ್ಧೆಯಲ್ಲಿ ರಾಜ್ಯ ಮಟ್ಟದಲ್ಲಿ ಭಾಗವಹಿಸಿದ್ದಾರೆ. ಕುಮಾರಿ ಸಫಾ ಎಸ್.ಶೇಖ ಇವರು ಹಿಂದಿ ಭಾಷಣ ಸ್ಪರ್ಧೆಗೆ ರಾಜ್ಯಮಟ್ಟದಲ್ಲಿ ಅರ್ಹತೆ ಪಡೆದಿರುವರು. |
| 11. | **ದಿನಕರ ಆಂಗ್ಲ ಮಾಧ್ಯಮ ಪ್ರೌಢ ಶಾಲೆ, ಧಾರೇಶ್ವರ**<br>▪ ದೀಕ್ಷಿತ ಆರ್.ನಾಯಕ, 10ನೇ ತರಗತಿ, ಗುಂಡು ಎಸೆತ ಸ್ಪರ್ಧೆಯಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆ.<br>▪ ಶಿವಾನಿ ಎಂ.ಪೈ, 10ನೇ ತರಗತಿ, ಇವರು ಉದ್ದ ಜಿಗಿತ ಮತ್ತು ತ್ರಿವಿಧ ಜಿಗಿತ ಸ್ಪರ್ಧೆಯಲ್ಲಿ ಮತ್ತು ನೇಹಾ ಎನ್.ಭಟ್ಟ, 10ನೇ ತರಗತಿ, ಇವರು ಜಾನಪದ ಗೀತೆ ಸ್ಪರ್ಧೆಯಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.<br>▪ ಮಹಾಬಲೇಶ್ವರ ಭಟ್ಟ, 6ನೇ ತರಗತಿ, ಚೆಸ್‌ನಲ್ಲಿ, ಅನನ್ಯಾ ಭಟ್ಟ ಭಕ್ತಿಗೀತೆಯಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ. |
| 12. | **ಜನತಾ ವಿದ್ಯಾಲಯ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ, ದಾಂಡೇಲಿ**<br>ಕಲ್ಪನಾ ರಾಜಪುತ, 7ನೇ ತರಗತಿ, ಹಾಗೂ ಹರೀಶ ಶಾಮ ಪಾಟೀಲ್ ಇವರು ಚಕ್ರಎಸೆತ ಹಾಗೂ ಚದುರಂಗ ಆಟದಲ್ಲಿ ರಾಜ್ಯವನ್ನು ಪ್ರತಿನಿಧಿಸಿದಾರೆ. |
| 13. | **ಜನತಾ ವಿದ್ಯಾಲಯ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ, ದಾಂಡೇಲಿ**<br>▪ ಸೃಷ್ಟಿ ದೌಲತ ಕಾಂಬಳೆ, ಶ್ರುತಿ ಅಶೋಕ ಶಿಗ್ಗೆಹಳ್ಳಿ, 7ನೇ ತರಗತಿ, ಇವರು ಸಿರಿಗನ್ನಡ ಪ್ರತಿಭಾ ಪರೀಕ್ಷೆಯಲ್ಲಿ ರಾಜ್ಯಮಟ್ಟದಲ್ಲಿ ಕ್ರಮವಾಗಿ 4 ಮತ್ತು 5ನೇ ಸ್ಥಾನ ಪಡೆದಿರುವರು<br>▪ ಭೂಮಿ ವಿಜಯಕುಮಾರ ಗೌಡರ, 6ನೇ ತರಗತಿ, ಶ್ರೇಯಾ ಸುತಾರ, 1ನೇ ತರಗತಿ, ಹಾಗೂ ದರ್ಶನ ಗಣಪತಿ ನಾಯ್ಕ, 4ನೇ ತರಗತಿ, ಇವರು ಚಿತ್ರಕಲಾ ಸ್ಪರ್ಧೆಯಲ್ಲಿ ರಾಜ್ಯಮಟ್ಟದಲ್ಲಿ ಭಾಗವಹಿಸಿ ಕ್ರಮವಾಗಿ 7 ಮತ್ತು 8ನೇ ರ‍್ಯಾಂಕ ಗಳಿಸಿರುವರು.<br>▪ ಸಂಜನಾ ಕುಂಮಗಾಳಕರ, ಚೇತನ್ಯ ಸುರೇಶ ಪಾವಣೆ, 7ನೇ ತರಗತಿ, ಇವರು ತಾರಾ ಮಂಡಲ ವಿಜ್ಞಾನ ಪ್ರತಿಭಾನ್ವೇಷಣೆ ಪರೀಕ್ಷೆಯಲ್ಲಿ ರಾಜ್ಯಮಟ್ಟದಲ್ಲಿ ಭಾಗವಹಿಸಿ ಕ್ರಮವಾಗಿ 4 ಮತ್ತು 5ನೇ ಸ್ಥಾನ ಗಳಿಸಿರುವರು<br>▪ ಮಹಾಂತೇಶ ಕನಕಣ್ಣನವರ, ದರ್ಶನ ಮಹಾವೀರ ಕಾಂಬಳೆ, ಸ್ಮೀತಾ ಚಂದ್ರು ಮಾವುಸ್ಕರ, ಶ್ರುತಿ ಅಶೋಕ ಸೀಗೆಹಳ್ಳಿ, ವರ್ಷಾ ಸಂಜೀವ ಕೋಲೆ, ಅಕ್ಷಯ ಧರೆಪ್ಪಾ ಗೌಡರ, ಸವಿತಾ ಯಕ್ಕುಂಡಿ, ಸಂಜನಾ ಕುಂಬಗಾಳಕರ, ಶಶಿಧರ ಹಿರೇಮಠ ಇವರು ಕರ್ನಾಟಕ ಪ್ರತಿಭಾ ಅಕಾಡೆಮಿ ಬೆಂಗಳೂರು ಇದರಲ್ಲಿ ಭಾಗವಹಿಸಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ. |

ವಿಶೇಷ ಸಾಧನೆ ಮಾಡಿದ ಎಲ್ಲ ವಿದ್ಯಾರ್ಥಿಗಳಿಗೆ ಹಾಗೂ ಅಧ್ಯಾಪಕ ವೃಂದದವರಿಗೆ, ಟ್ರಸ್ಟಿನ ಪರವಾಗಿ ಹಾರ್ದಿಕ ಅಭಿನಂದನೆ ಸಲ್ಲಿಸುತ್ತೇನೆ. 2016–2017ನೇ ಸಾಲಿನಲ್ಲಿ ಪ್ರೌಢ ಶಾಲೆ ಮಟ್ಟದಲ್ಲಿ ವಿಶೇಷ ಸಾಧನೆ ಮಾಡಿದವರ ಸಂಖ್ಯೆ ಕಡಿಮೆಯಾಗಿದೆ. ರಾಜ್ಯಮಟ್ಟದಲ್ಲಿ / ರಾಷ್ಟ್ರಮಟ್ಟದಲ್ಲಿ ಯಾವದೇ ಸಾಧನೆ ಮಾಡದೇ ಇರುವ ಶಾಲೆ–ಕಾಲೇಜುಗಳು 2017–2018ನೇ ಸಾಲಿನಲ್ಲಿ ವಿಶೇಷ ಪ್ರಯತ್ನ ಮಾಡಿ ಸಾಧನೆ ಮಾಡಿದವರ ಪಟ್ಟಿಯಲ್ಲಿ ತಮ್ಮ ಸಂಸ್ಥೆ ಹೆಸರು ನಮೂದಾಗುವಂತೆ ದೈಹಿಕ ಶಿಕ್ಷಕರು ಕಾರ್ಯ ನಿರ್ವಹಿಸಬೇಕು.

## 9. ದಿನಕರ ಕಲಾನಿಕೇತನ ಸಂಗೀತ ವಿದ್ಯಾಲಯ, ಕಾರವಾರ ಮತ್ತು ಅಂಕೋಲಾ

ಕಾರವಾರದಲ್ಲಿ ಟ್ರಸ್ಟು ನಡೆಸುತ್ತಿರುವ ದಿನಕರ ಕಲಾನಿಕೇತನದಲ್ಲಿ ಸಂಗೀತ ತರಬೇತಿ ನೀಡಲಾಗುತಿದ್ದು, ಶ್ರೀ ಮಾರುತಿ ಗಣಪತಿ ನಾಯ್ಕ ಇವರು ಸಂಗೀತ ಶಿಕ್ಷಕರಾಗಿ ದಿನಾಂಕ 10 ಸೆಪ್ಟೆಂಬರ್ 2014 ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಇವರ ಜೊತೆಗೆ ತಬಲಾ ವಾದನದಲ್ಲಿ ವಿಶೇಷ ತರಬೇತಿ ನೀಡಲು ಶ್ರೀ ಗಣಪತಿ ವಿ.ಹೆಗಡೆಯವರು ತಬಲಾ ಶಿಕ್ಷಕರಾಗಿ ದಿನಾಂಕ 9 ಜೂನ್ 2015 ರಿಂದ ಕಾರ್ಯನಿರ್ವಹಿಸುತ್ತಿದಾರೆ. ಕಾರವಾರದ ಸಂಗೀತ ವಿದ್ಯಾಲಯದಲ್ಲಿ ಒಟ್ಟೂ 80 ವಿದ್ಯಾರ್ಥಿಗಳು ತರಬೇತಿ ಪಡೆಯುತ್ತಿದ್ದಾರೆ. 2017–18ನೇ ಸಾಲಿನಿಂದ ಪಿ.ಎಂ.ಹೈಸ್ಕೂಲ್, ಅಂಕೋಲಾದ ಪ್ರಾಥಮಿಕ ವಿಭಾಗದ ಕಟ್ಟಡದಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಸಂಗೀತ ಆಸಕ್ತರಿಗೆ ಸಂಗೀತ, ತಬಲಾ ಮತ್ತು ಹಾರ್ಮೋನಿಯಂ ತರಬೇತಿ ವಾರದಲ್ಲಿ 3 ದಿವಸ ನೀಡಲಾಗುತ್ತಿದೆ. ಈ ತರಗತಿಗೆ ಇದುವರೆಗೆ ಸುಮಾರು 60 ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿರುತ್ತಾರೆ. ಸಂಗೀತ ಮತ್ತು ತಬಲಾ ತರಬೇತಿ ಕ್ಲಾಸಿಗೆ ಇನ್ನೂ ಹೆಚ್ಚು ಆಸಕ್ತರು, ವಿದ್ಯಾರ್ಥಿಗಳು ಪ್ರವೇಶ ಪಡೆಯುವಂತೆ ಪ್ರಯತ್ನಿಸಬೇಕಾಗಿದೆ.

## 10.ಗೋಖಲೆ ಸೆಂಟಿನರಿ ಕಾಲೇಜಿನಲ್ಲಿ 2016–2017ನೇ ಸಾಲಿನಿಂದ ಎಮ್.ಎಸ್ಸಿ. ಸ್ನಾತಕೋತ್ತರ ಕೇಂದ್ರ ಪ್ರಾರಂಭ

ಗೋಖಲೆ ಸೆಂಟಿನರಿ ಕಾಲೇಜಿನಲ್ಲಿ 2016–2017ನೇ ಸಾಲಿನಿಂದ ಕರ್ನಾಟಕ ವಿಶ್ವವಿದ್ಯಾಲಯದ M.Sc. General Chemistry ವಿಭಾಗ ಪ್ರಾರಂಭವಾಗಿದೆ. ಪ್ರಾಚಾರ್ಯರಾದ ಡಾ. ಇಮ್ತಿಯಾಜ್ ಅಹಮ್ಮದ ಖಾನ ಅವರು ಈ ಕೋರ್ಸಿನ Coordinator ರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

2016–17ನೇ ಸಾಲಿನಲ್ಲಿ ಈ ಕೋರ್ಸಿಗೆ ಪ್ರವೇಶ ಪಡೆಯಲು ಕರ್ನಾಟಕ ವಿಶ್ವವಿದ್ಯಾಲಯಕ್ಕೆ 10 ಸೀಟುಗಳು ಹಾಗೂ ಆಡಳಿತ ಮಂಡಳಿಗೆ 10 ಸೀಟುಗಳು ಒಟ್ಟೂ 20 ಸೀಟುಗಳು ಲಭ್ಯವಿದೆ. ಇದರಲ್ಲಿ 19 ವಿದ್ಯಾರ್ಥಿಗಳು ಪ್ರವೇಶ ಪಡೇದಿರುತ್ತಾರೆ. 2017–18ನೇ ಸಾಲಿನಲ್ಲಿ ಎಲ್ಲ 20 ವಿದ್ಯಾರ್ಥಿಗಳು ಪ್ರವೇಶ ಪಡೆಯುವಂತೆ ಕೋ–ಆರ್ಡಿನೇಟರ್‌ರಾದ ಡಾ.ಇಮ್ತಿಯಾಜ್ ಖಾನ್ ಅವರು ಪ್ರಯತ್ನಿಸಬೇಕಾಗಿ ಕೋರಿಕೆ.

ಕರ್ನಾಟಕ ವಿಶ್ವವಿದ್ಯಾಲಯದಲ್ಲಿಯೇ ಇದೊಂದು ಉತ್ತಮ P.G.Centre ಆಗಿ ಕಾರ್ಯ ನಿರ್ವಹಿಸಿ ಇದರ ಪ್ರಯೋಜನ ವಿಶೇಷವಾಗಿ ಉತ್ತರ ಕನ್ನಡ ಜಿಲ್ಲೆಯವರಿಗೆ ದೊರೆಯಬೇಕೆಂಬುವ ಅಧ್ಯಕ್ಷರ ಇಚ್ಛೆಯಾಗಿದೆ.

## 11.Workshops conducted during the year

### One-day Workshop for English Teachers (Primary, High School & Junior College)

ಕಾರವಾರ ಏಜ್ಯೂಕೇಶನ್ ಸೊಸೈಟಿಯ ಬಾಲಮಂದಿರ, ಹಿಂದೂ ಹೈಸ್ಕೂಲ್ ಮತ್ತು ಸುಮತಿ ದಾಮಲೆ ಶಾಲೆ ಹಾಗೂ ಟ್ರಸ್ಟು ನಡೆಸುತ್ತಿರುವ ಪದವಿ ಪೂರ್ವ, ಮಾಧ್ಯಮಿಕ ಮತ್ತು ಪ್ರಾಥಮಿಕ ತರಗತಿಗಳಿಗೆ ಇಂಗ್ಲೀಷ ವಿಷಯವನ್ನು ಬೋಧನೆ ಮಾಡುತ್ತಿರುವ ಶಿಕ್ಷಕರಿಗೆ 24 ಜೂನ್ 2017 ರಂದು ಒಂದು ದಿನದ ಕಾರ್ಯಗಾರವನ್ನು ಕಾರವಾರದ ಎಜ್ಯೂಕೇಶನ ಸೊಸೈಟಿಯ ಬಾಲಮಂದಿರದ ಸಭಾಭವನದಲ್ಲಿ ನಡೆಸಲಾಯಿತು. ಈ ಕಾರ್ಯಕ್ರಮವನ್ನು ಕಾರವಾರ ಎಜ್ಯೂಕೇಶನ ಸಂಸ್ಥೆಯ ಪ್ರಾಯೋಜಕತ್ವದಲ್ಲಿ ಹಾಗೂ ಕೆನರಾ ವೆಲ್‌ಫೆರ್ ಟ್ರಸ್ಟಿನ ಸಹಯೋಗದೊಂದಿಗೆ ನಡೆಸಲಾಯಿತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಟ್ರಸ್ಟಿನ ಅಧ್ಯಕ್ಷರಾದ ಮಾನ್ಯ ಎಸ್.ಪಿ.ಕಾಮತ ಅವರು ನೆರವೇರಿಸಿರುವರು.

One-Day Orientation Workshop on English language teaching was organized on 24th June 2017 by Karwar Education Society in association with Kanara Welfare Trust, Ankola. More than 50 teachers from different schools working under Kanara Welfare Trust participated in the orientation program.



This orientation workshop was aimed at equipping the teachers with day-to-day teaching & enhancing effective communication skills in the classrooms. Chairman of Kanara Welfare Trust and President of Karwar Education Society, Shri S.P.Kamat, along with other dignitaries inaugurated the session.

The key note speakers of the workshop were Dr. R.G.Hegde (Professor of English, Bangur Nagar Degree College Dandeli), Rev. Dr. Stany Pinto (Principal, St. Joseph Composite PU College, Karwar) and Mrs. Vandana Nayak (Lecturer of English, Govt. PU College, Karwar).

**OBJECTIVES OF THE ORIENTATION PROGRAMME**

1. To acquaint the teachers with the ideas for introducing language teaching in day-to-day classes and to develop a perspective on the changes in language and the strategies to realize them in the classroom.
2. To discuss the implications for English language education and responsibilities of teachers in realizing the effects of language teaching.
3. To develop an understanding among the teachers on the emerging trends in teaching-learning of language viz, listening and speaking, reading, writing, grammar, vocabulary, pronunciation, multilingualism as a strategy for language and content learning, story-telling and other aspects.

4. To demonstrate & discuss how language classroom processes / activities should be organized to promote language learning (through pair work, group work, assignments, project work, role plays, etc.)
5. To discuss the problems and issues relating to continuous language assessment in language education reflecting on the present practices in the system and how to understand and implement Continuous and Comprehensive Assessment (CCE) in the classroom.
6. To promote effective communication skills in day to day classrooms.

**THE THEMES / TOPICS OF THE ORIENTATION**

The orientation programme covered almost all aspects of language education, materials for teaching English at primary and secondary stages.

**CONCLUSION**

The one-day workshop was useful to all the concerned English language teachers. Kanara Welfare Trust and Karwar Education Society have always aimed at enhancing the quality of teaching, learning and evaluation in our institutions. Over the years, we have made optimum use of our resources and utilized modern technology for the betterment of the teacher and the learner alike. Conducting orientation workshops is part of the process in our pursuit for empowering the teaching fraternity. We hope that this exercise bears fruit in the days to come and we can reach out to a large number of beneficiaries, both from the student as well as the teaching community.

We are thankful to the Principal and staff of Balmandir High School for their active involvement leading to the successful conduct of this workshop.

## One-day Workshop for Kannada & Hindi Teachers

ಕನ್ನಡ ಮತ್ತು ಹಿಂದಿ ವಿಷಯ ಬೋಧನೆ ಮಾಡುವ ಪ್ರೌಢಶಾಲಾ ಶಿಕ್ಷಕರಿಗೆ ಹೊಸ ಪದ್ದತಿಯಲ್ಲಿ ಬೋಧನೆ ಮಾಡುವ ಕುರಿತು C.C.E. (Continuous Comprehensive Evalution) ಒಂದು ದಿನದ ಕಾರ್ಯಗಾರವನ್ನು ಗೋಖಲೆ ಸೆಂಟಿನರಿ ಕಾಲೇಜಿನಲ್ಲಿ 26 ನವೆಂಬರ್ 2016 ರಂದು ಆಯೋಜಿಸಲಾಗಿತ್ತು. ಈ ಕಾರ್ಯಗಾರದಲ್ಲಿ ಟ್ರಸ್ಟು ನಡೆಸುತ್ತಿರುವ ಶಾಲೆಯಲ್ಲಿ ಬೋಧನೆ ಮಾಡುತ್ತಿರುವ ಎಲ್ಲ ಕನ್ನಡ ಮತ್ತು ಹಿಂದಿ ಶಿಕ್ಷಕರು ಭಾಗವಹಿಸಿದ್ದರು. ಕಾರವಾರ ಎಜ್ಯೂಕೇಶನ್ ಸಂಸ್ಥೆಯ, ಬಾಲಮಂದಿರ, ಸುಮತಿ ದಾಮಲೆ ಹಾಗೂ ಹಿಂದು ಹೈಸ್ಕೂಲಿನ ಶಿಕ್ಷಕರು ಕೂಡಾ ಭಾಗವಹಿಸಿದ್ದರು.

ಕನ್ನಡ ವಿಷಯಕ್ಕೆ ಸಂಬಂಧಿಸಿದಂತೆ ವಿಷಯ ತಜ್ಞರಾಗಿ ಶ್ರೀ ವಿಷ್ಣು ನಾಯ್ಕ, ನಿವೃತ್ತ ಪ್ರಾಚಾರ್ಯರು, ಹಾಗೂ ಶ್ರೀ ಅಶೋಕ ಭಟ್, ಸಹಶಿಕ್ಷಕರು ಭಾಗವಹಿಸಿದ್ದರು. ಹಿಂದಿ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಎಸ್.ವಿ.ಮುಳಗುಂದ, ನಿವೃತ್ತ ಹಿಂದಿ ಶಿಕ್ಷಕರು, ಶ್ರೀ ಮಹೇಶ ಹನಬರಟ್ಟಿ, ಸಹಶಿಕ್ಷಕರು, ಮತ್ತು ಶ್ರೀ ಗಣೇಶ ಭಟ್ಟ, ಸಹಶಿಕ್ಷಕರು, ಇವರು ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸಿರುತ್ತಾರೆ. ಟ್ರಸ್ಟಿನ ಆಡಳಿತಾಧಿಕಾರಿಗಳು ಕಾರ್ಯಕ್ರಮದ ಔಚಿತ್ಯವನ್ನು ವಿವರಿಸಿದರು.

ನಂತರ ಮೂರು ವಿಭಾಗದಲ್ಲಿ ವಿಷಯ ತಜ್ಞರಿಂದ ವಿಷಯಕ್ಕೆ ಸಂಬಂಧಿಸಿದಂತೆ ಮಹತ್ವಪೂರ್ಣ ಕಾರ್ಯಗಾರ ನಡೆಸಲಾಯಿತು. ಕೊನೆಯಲ್ಲಿ ಅಧ್ಯಾಪಕರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಮುಕ್ತ ಚರ್ಚೆ ನಡೆಸಿ ಪರಿಹಾರ ನೀಡಲಾಯಿತು.

ಈ ಶಿಬಿರದಲ್ಲಿ ಒಟ್ಟೂ 46 ಅದ್ಯಾಪಕರು ಭಾಗವಹಿಸಿದ್ದರು. ಶಿಬಿರದ ಪ್ರಾಯೋಜಕತ್ವವನ್ನು ಟ್ರಸ್ಟು ವಹಿಸಿರುತ್ತದೆ.

## One-day Workshop for Science Teachers

ವಿಜ್ಞಾನ ವಿಷಯವನ್ನು ಬೋಧಿಸುವ ವಿಜ್ಞಾನ ಶಿಕ್ಷಕರಿಗೆ ಒಂದು ದಿವಸದ ತರಬೇತಿ ಶಿಬಿರವನ್ನು ದಿನಾಂಕ 23 ಜನವರಿ 2017 ರಂದು ಗೋಖಲೆ ಸೆಂಟಿನರಿ ಕಾಲೇಜಿನಲ್ಲಿ ಆಯೋಜಿಸಲಾಗಿತ್ತು. ಈ ಶಿಬಿರದಲ್ಲಿ ಟ್ರಸ್ಟು ಮತ್ತು ಕಾರವಾರ ಎಜ್ಯುಕೇಶನ್ ಸಂಸ್ಥೆಯವರು ನಡೆಸುತ್ತಿರುವ ಎಲ್ಲ ಪ್ರೌಢಶಾಲೆಗಳ ವಿಜ್ಞಾನ ಶಿಕ್ಷಕರು ಭಾಗವಹಿಸಿದ್ದರು.

ಈ ಕಾರ್ಯಗಾರದಲ್ಲಿ ವಿಷಯ ತಜ್ಞರಾಗಿ ಈ ಕೆಳಗೆ ನಮೂದಿಸಿದವರು ಭಾಗವಹಿಸಿರುತ್ತಾರೆ.

- **Prof. M.S.Habbu**, Retd. Principal – Physics
- **Prof. V.R.Vernekar**, Retd. Principal – Chemistry
- **Dr. V.N.Nayak**, Coordinator, Uttar Kannada Jilla Vijnana Kendra, Karwar
- **Prof. Vijayashri Gaonkar,** Mathematics Dept., Govt. College, Ankola
- **Dr. Ashokkumar,** Mathematics Dept., G.C.College, Ankola
- **Prof. R.P.Bhat,** Mathematics Dept., G.C.College, Ankola
- **Prof. Padmanabh Prabhu,** Physics Dept., G.C.College, Ankola
- **Dr. Shivanand Bhat,** Botany Dept., Govt. College, Karwar
- **Dr. S.R.Shirodkar,** Zoology Dept., G.C.College, Ankola
- **Prof. V.M.Naik,** Botany Dept., G.C.College, Ankola

ಈಗ ಪ್ರಾರಂಭವಾಗಿರುವ C.C.E. (Continuous and Comprehensive Evalution) ಪದ್ಧತಿ ಪ್ರಕಾರ ವಿಷಯ ಬೋಧನೆಯ Techniqueನ್ನು ವಿಷಯ ತಜ್ಞರು ತಿಳಿಸಿಕೊಟ್ಟರು. ವಿಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ ಪ್ರಯೋಗಗಳನ್ನು ಮಾಡುವ ವಿಧಾನವನ್ನು ಪ್ರಾತಕ್ಷಿತೆಯೊಂದಿಗೆ ತೋರಿಸಿಕೊಟ್ಟರು. ಪ್ರಯೋಗ ಮಾಡುವ ಅನೇಕ ವಿಧಾನಗಳನ್ನು ತಿಳಿಸಿಕೊಟ್ಟರು. ಎಲ್ಲ ವಿಷಯ ತಜ್ಞರು ತಮ್ಮ ತಮ್ಮ ವಿಭಾಗಕ್ಕೆ ಸಂಬಂಧಿಸಿದ ವಿಜ್ಞಾನ ವಿಷಯ ಬೋಧನೆ ಶಿಕ್ಷಕರಿಗೆ ಮನದಟ್ಟಾಗುವಂತೆ ವಿವರಿಸಿದರು. ಗಣಿತ ವಿಷಯದ ಬೋಧನ ಬಗ್ಗೆಯೂ ವಿಶೇಷ ಗಮನಹರಿಸಿದರು. ಒಟ್ಟಾರೆ ವಿಜ್ಞಾನ ಮತ್ತು ಗಣಿತ ಬೋಧನೆ ಶಾಲೆಯಲ್ಲಿ ಪರಿಣಾಮಕಾರಿಯಾಗುವಂತೆ ತಿಳುವಳಿಕೆ ನೀಡಿದ್ದಲ್ಲದೆ ವಿಜ್ಞಾನ ಶಿಕ್ಷಕರು ಎದುರಿಸುತ್ತಿರುವ ಸಮಸ್ಯೆ ಕುರಿತು ಚರ್ಚಿಸಿ ಪರಿಹಾರ ನೀಡಿದರು.

ಕಾಲೇಜಿನ ಪ್ರಾಚಾರ್ಯರಾದ ಡಾ. ಇಮ್ತಿಯಾಜ್ ಅಹ್ಮದ್ ಖಾನ್ ಹಾಗೂ ಉಳಿದ ಎಲ್ಲ ವಿಷಯ ತಜ್ಞರು ನೀಡಿದ ಉತ್ತಮ ಸಹಕಾರ ಹಾಗೂ ಮಾರ್ಗದರ್ಶನಕ್ಕೆ ವಂದನೆ ಸಲ್ಲಿಸಲಾಯಿತು.

ಈ ಶಿಬಿರದಲ್ಲಿ ಒಟ್ಟೂ 80 ಅಧ್ಯಾಪಕರು ಭಾಗವಹಿಸಿದ್ದರು. ಶಿಬಿರದ ಪ್ರಾಯೋಜಕತ್ವವನ್ನು ಟ್ರಸ್ಟು ವಹಿಸಿರುತ್ತದೆ.

## One-day Workshop for Economics, Commerce and Accountancy Teachers

ದಿನಾಂಕ 10 ಡಿಸೆಂಬರ್ 2016 ರಂದು ವ್ಯವಹಾರ ಅಧ್ಯಯನ, ಲೆಕ್ಕಶಾಸ್ತ್ರ ಹಾಗೂ ಅರ್ಥಶಾಸ್ತ್ರ ವಿಭಾಗದ ಒಂದು ದಿವಸದ ಕಾರ್ಯಾಗಾರವನ್ನು ಜನತಾ ವಿದ್ಯಾಲಯ ಪದವಿ ಪೂರ್ವ ಕಾಲೇಜು, ದಾಂಡೇಲಿಯಲ್ಲಿ ಯಶಸ್ವಿಯಾಗಿ ನಡೆಸಲಾಯಿತು.

ವ್ಯವಹಾರ ಅಧ್ಯಯನ ಮತ್ತು ಲೆಕ್ಕಶಾಸ್ತ್ರ ವಿಷಯಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಬಿ.ಬಿ.ಕುಂದರಗಿ ನಿವೃತ್ತ ಪ್ರಾಚಾರ್ಯರು, ವಿದ್ಯೋದಯ ಪದವಿ ಪೂರ್ವ ಕಾಲೇಜು, ಯಡಳ್ಳಿ, ಶಿರಸಿ ಹಾಗೂ ಶ್ರೀಮತಿ ಆಶಾಲತಾ ಜೈನ, ಉಪನ್ಯಾಸಕರು, ಬಂಗೂರನಗರ ಪದವಿ ಪೂರ್ವ ಕಾಲೇಜು, ದಾಂಡೇಲಿಯವರು ಭಾಗವಹಿಸಿ ಕಾರ್ಯಾಗಾರವನ್ನು ಯಶಸ್ವಿಗೊಳಿಸಿದರು.

ಅರ್ಥಶಾಸ್ತ್ರ ವಿಷಯಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀಯುತ ಶಂಭು ಭಟ್ಟ, ಉಪನ್ಯಾಸಕರು, ವಿದ್ಯೋದಯ ಪದವಿ ಪೂರ್ವ ಕಾಲೇಜು, ಯಡಳ್ಳಿ, ಶಿರಸಿ ಹಾಗೂ ಶ್ರೀಯುತ ಕೆ.ಎನ್. ಜಾಕೋಜಿ, ಉಪನ್ಯಾಸಕರು, ಸರಕಾರಿ ಪದವಿ ಪೂರ್ವ ಕಾಲೇಜು, ದಾಂಡೇಲಿ, ಇವರುಗಳು ಕಾರ್ಯಾಗಾರವನ್ನು ಯಶಸ್ವಿಯಾಗಿ ನಡೆಸಿದರು.

ಈ ಕಾರ್ಯಗಾರದಲ್ಲಿ ಅರ್ಥಶಾಸ್ತ್ರ ಮತ್ತು ವ್ಯವಹಾರ ಅಧ್ಯಯನ ಬೋಧಿಸುವ ಉಪನ್ಯಾಸಕರುಗಳು ಪ್ರಸ್ತುತ ಪಠ್ಯ ಪುಸ್ತಕದ ಸಮಸ್ಯೆಗಳು, ಪಠ್ಯ ವಸ್ತುವನ್ನು ವಿದ್ಯಾರ್ಥಿಗಳಿಗೆ ಅರ್ಥವಾಗುವ ರೀತಿಯಲ್ಲಿ ಕಲಿಸುವ ವಿಧಾನ, ಒಟ್ಟಾರೆ ವಿದ್ಯಾರ್ಥಿಗಳ ಫಲಿತಾಂಶ ಉತ್ತಮಗೊಳಿಸಿಕೊಳ್ಳಲು ಬೇಕಾದ ಅಂಶಗಳ ಕುರಿತು ದಿನವಿಡೀ ಚರ್ಚೆ ನಡೆಸಿದರು. ಒಟ್ಟಾರೆಯಾಗಿ ಇಡೀ ಕಾರ್ಯಾಗಾರ ಹಾಜರಿದ್ದ ಉಪನ್ಯಾಸಕರುಗಳು ವಿಷಯಗಳ ಬೋಧನಾ ಮಟ್ಟವನ್ನು ಎತ್ತರಿಸಿಕೊಳ್ಳಲು ಅರ್ಥಪೂರ್ಣ ವೇದಿಕೆಯಾಯಿತು

ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜ್, ದಾಂಡೇಲಿ ಇದರ ಪ್ರಾಚಾರ್ಯರಾದ ಶ್ರೀ ಎಮ್.ಎಸ್.ಇಟಗಿಯವರು ಈ ಕಾರ್ಯಗಾರವನ್ನು ವಿಶೇಷ ಆಸಕ್ತಿ ವಹಿಸಿ ಯಶಸ್ವಿಯಾಗಿ ನಡೆಸಿಕೊಟ್ಟರು. ಟ್ರಸ್ಟಿನ ಪ್ರಾಯೋಜಕತ್ವದಲ್ಲಿ ನಡೆದ ಕಾರ್ಯಕ್ರಮ ಯಶಸ್ವಿಯಾಗುವಲ್ಲಿ ಸಹಕರಿಸಿದ ಎಲ್ಲರೂ ಅಭಿನಂದನಾರ್ಹರು.

## 12.ಅನುಮೋದಿತ ಹುದ್ದೆಗಳಲ್ಲಿ ನೇಮಕಾತಿ ಹೊಂದಿದ ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿಗಳು

2016–2017ನೇ ಸಾಲಿನಲ್ಲಿ ನೇಮಕಾತಿ ಹೊಂದಿದ ಅನುದಾನಿತ ಶಿಕ್ಷಕರ ವಿವರ ಈ ಕೆಳಗಿನಂತಿದೆ. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ, ಇವರ ಸರ್ಕಾರದ ಆದೇಶದಂತೆ ನೇಮಕಾತಿ ಮಾಡಲು ಕಳುಹಿಸಿದ ಅಭ್ಯರ್ಥಿಗಳನ್ನು ಟ್ರಸ್ಟು ಇನ್ನೊಮ್ಮೆ ಸಂದರ್ಶನ ನಡೆಸಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಆಡಳಿತ ಮಂಡಳಿ ಆದೇಶದಂತೆ 2 ವರ್ಷದ ಪ್ರೊಬೇಶನ್ ಅವಧಿಯ ಆಧಾರದ ಮೇಲೆ ಸೇವೆಗೆ ಹಾಜರು ಪಡಿಸಿಕೊಳ್ಳಲಾಗಿದೆ.

| ಅ.ನಂ | ಹೆಸರು | ಹುದ್ದೆ | ನೇಮಕಗೊಂಡ ಶಾಲೆ |
|---|---|---|---|
| 1 | **ಶ್ರೀಮತಿ ಪ್ರೀತಿ ನಾಯ್ಕ** (ಹೆಚ್ಚುವರಿ ಶಿಕ್ಷಕರು ವರ್ಗಾವಣೆ ಮೂಲಕ) | **ಸಹಶಿಕ್ಷಕರು (ವಿಜ್ಞಾನ PCM)** | **ಜನತಾ ವಿದ್ಯಾಲಯ, ಕಾಸರಕೋಡ** |
| 2 | **ಶ್ರೀ ಉದಯ ಎಸ್.ನಾಯ್ಕ** (ಹೆಚ್ಚುವರಿ ಶಿಕ್ಷಕರು ವರ್ಗಾವಣೆ ಮೂಲಕ) | **ಸಹಶಿಕ್ಷಕರು (ಸಮಾಜ ವಿಜ್ಞಾನ)** | **ಜನತಾ ವಿದ್ಯಾಲಯ, ಧಾರೇಶ್ವರ** |
| 3 | **ಶ್ರೀ ಫಕಿರಪ್ಪ ಎಚ್.ನಾಗಣ್ಣವರ** (ಹೆಚ್ಚುವರಿ ಶಿಕ್ಷಕರು ವರ್ಗಾವಣೆ ಮೂಲಕ) | **ಸಹಶಿಕ್ಷಕರು (ಇಂಗ್ಲೀಷ)** | **ಜನತಾ ವಿದ್ಯಾಲಯ, ಬಾಡ–ಕಾಗಲ** |
| 4 | **ಶ್ರೀ ಸುರೇಶ ನಾಯ್ಕ** (ನೇರ ನೇಮಕಾತಿ ವರ್ಗಾವಣೆ ಮೂಲಕ) | **ಜವಾನ** | **ಜನತಾ ವಿದ್ಯಾಲಯ, ಮಿರ್ಜಾನ–ಕೋಡ್ಕಣಿ** |
| 5 | **ಶ್ರೀಮತಿ ಶ್ವೇತಾ ಫಕಿರೇಶ ತಲವಾರ** (ಅನುಕಂಪದ ಆಧಾರ ಮೇಲೆ ನೇಮಕಾತಿ) | **ಜವಾನ** | **ಜನತಾ ವಿದ್ಯಾಲಯ, ಮುದಗಾ** |

ಡಾ. ಜಯಶ್ರೀ ಕೊರಟಿ, ಪ್ರಾಚಾರ್ಯರು, ಕೆನರಾ ವೆಲ್‌ಫೇರ್ ಟ್ರಸ್ಟಿನ ಬಿ.ಎಡ್. ಕಾಲೇಜ್, ದಾಂಡೇಲಿ ಇವರು 17–05–2017ರಂದು ಸೇವೆಗೆ ರಾಜಿನಾಮೆ ನೀಡಿರುತ್ತಾರೆ. ಇವರ ಜಾಗೆಯಲ್ಲಿ ಬಿ.ಎಡ್. ಕಾಲೇಜ್ ಪ್ರಾಚಾರ್ಯರಾಗಿ ಡಾ. ಸಹನಾ ಸೂರ್ಯವಂಶಿ, M.Sc., M.Ed., Ph.D. ಇವರನ್ನು 01–07–2017 ರಿಂದ ಮಾನ್ಯ ಅಧ್ಯಕ್ಷರು ನೇಮಕ ಮಾಡಿರುತ್ತಾರೆ.

ಗೋಖಲೆ ಸೆಂಟಿನರಿ ಪದವಿ ಪೂರ್ವ ಕಾಲೇಜು ಹಾಗೂ ದಿವೇಕರ ವಾಣಿಜ್ಯ ಪದವಿ ಪೂರ್ವ ಕಾಲೇಜು 2001ರಲ್ಲಿ ಸರ್ಕಾರದ ಆದೇಶದಂತೆ ಸಂಯುಕ್ತ ಕಾಲೇಜುಗಳಿಂದ ಬೇರ್ಪಟ್ಟಿದೆ. ಸರ್ಕಾರ ಇದುವರೆಗೆ ಉಪನ್ಯಾಸಕರ ನೇಮಕಾತಿಗೆ ಅನುಮತಿ ನೀಡಿರುವದಿಲ್ಲ. ಒಟ್ಟು 12 ಉಪನ್ಯಾಸಕರ ಹುದ್ದೆಗೆ ನೇಮಕಾತಿ ಮಾಡುವಂತೆ ಅನುಮತಿ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಅದರಲ್ಲಿ 9 ಹುದ್ದೆಗಳಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತು 5 ವರ್ಷಗಳು ಕಳೆದರೂ ಇದುವರೆಗೆ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಆದೇಶ ನೀಡಿರುವದಿಲ್ಲ. ಈ

ಹಿಂದೆ ಆಡಳಿತಾತ್ಮಕ ಅನುಮೋದನೆ ನೀಡಿದ 9 ಹುದ್ದೆಗಳಲ್ಲಿ ಕೇವಲ 4 ಹುದ್ದೆಗಳನ್ನು ತುಂಬಲು ಇಲಾಖೆಯಿಂದ ಸುತ್ತೋಲೆ ಬಂದಿದ್ದು ಅವುಗಳ ಮಾಹಿತಿಯನ್ನು ಇಲಾಖೆಗೆ ಕಳುಹಿಸಿ 3 ವರ್ಷಗಳಾದರೂ ಇನ್ನೂ ಅನುಮತಿ ನೀಡಿರುವದಿಲ್ಲ. ಹುದ್ದೆಗಳನ್ನು ತುಂಬಲು ಅನುಮತಿ ನೀಡುವಲ್ಲಿ ಸರ್ಕಾರ ವಿಳಂಬ ನೀತಿಯನ್ನು ಅನುಸರಿಸುತ್ತಿರುವದರಿಂದ ಈ ಪದವಿ ಪೂರ್ವ ಕಾಲೇಜುಗಳನ್ನು ನಡೆಸುವದು ಟ್ರಸ್ಟಿಗೆ ಆರ್ಥಿಕವಾಗಿ ಬಹಳ ಸಮಸ್ಯೆಯಾಗಿದೆ. ಸರ್ಕಾರದ ಈ ಧೋರಣೆಯಿಂದ ಅನುದಾನಿತ ಪದವಿ ಪೂರ್ವ ಕಾಲೇಜುಗಳನ್ನು ಕೇವಲ ತಾತ್ಕಾಲಿಕ ಉಪನ್ಯಾಸಕರಿಂದ ನಡೆಸಿಕೊಂಡು ಹೋಗಬೇಕಾಗಿದೆ. ಮುಂದಿನ ದಿನಗಳಲ್ಲಿ ಟ್ರಸ್ಟಿಗೆ ಪದವಿ ಪೂರ್ವ ಕಾಲೇಜುಗಳನ್ನು ನಡೆಸುವದು ಆರ್ಥಿಕವಾಗಿ ದೊಡ್ಡ ಸಮಸ್ಯೆಯಾಗಬಹುದು. ಗೋಖಲೆ ಸೆಂಟಿನರಿ ಪದವಿ ಪೂರ್ವ ಕಾಲೇಜ್, ದಿವೇಕರ ವಾಣಿಜ್ಯ ಪದವಿ ಪೂರ್ವ ಕಾಲೇಜ್, ಪಿ.ಎಂ.ಜ್ಯೂನಿಯರ್ ಕಾಲೇಜ್, ಹಾಗೂ ದಾಂಡೇಲಿ, ಕಡತೋಕಾ ಮತ್ತು ಶಿರಾಲಿ ಪದವಿ ಪೂರ್ವ ಕಾಲೇಜುಗಳಿಗೆ ಕಳೆದ ವರ್ಷ ವೇತನ ನೀಡುವ ಸಲುವಾಗಿ ಆಡಳಿತ ಮಂಡಳಿ ಖಾತೆಯಿಂದ ಖರ್ಚು ಮಾಡಿದ ಒಟ್ಟು ಮೊತ್ತ ರೂ. 34,00,407/–

## 13.U.G.C. Grants - ಯು.ಜಿ.ಸಿ.ಯಿಂದ ಬರುವ ಸಹಾಯ ಧನದ ಕುರಿತು

ಗೋಖಲೆ ಸೆಂಟಿನರಿ ಪದವಿ ಕಾಲೇಜು, ಅಂಕೋಲಾ, ಹಾಗೂ ದಿವೇಕರ ವಾಣಿಜ್ಯ ಪದವಿ ಕಾಲೇಜು, ಕಾರವಾರ – ಈ ಎರಡೂ ಸಂಸ್ಥೆಗಳು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ Section 2(f) ಮತ್ತು 12(B)ದರ ವ್ಯಾಪ್ತಿಯಲ್ಲಿ ಬರುವದರಿಂದ ಈ ಕಾಲೇಜುಗಳಿಗೆ NAAC ಮಾನ್ಯತೆ ಗ್ರೇಡಿಂಗಿಗೆ ಅನುಗುಣವಾಗಿ ಯು.ಜಿ.ಸಿ.ಯು ವಿವಿಧ ಯೋಜನೆ ಅಡಿಯಲ್ಲಿ ಕೆಳೆದ ಹಲವಾರು ವರ್ಷಗಳಿಂದ ಸಹಾಯ ಧನ ನಿಡುತ್ತಿದೆ. ಕಾಲೇಜಿನ ಪ್ರಾಚಾರ್ಯರು ಯು.ಜಿ.ಸಿ.ಯಿಂದ ಬಂದ ಸಹಾಯ ಧನವನ್ನು ಯು.ಜಿ.ಸಿ.ಯವರು ನಿಗದಿಪಡಿಸಿದ ಕಾರ್ಯಗಳಿಗೆ ವಿನಿಯೋಗಿಸಬೇಕಾಗುತ್ತದೆ. ಯು.ಜಿ.ಸಿ. ಹಣವನ್ನು ಖರ್ಚು ಮಾಡಿದ ನಂತರ ಸಕಾಲದಲ್ಲಿ Utilization Certificate duly audited by the Chartered Accountant ಸಲ್ಲಿಸಬೇಕಾಗುತ್ತದೆ.

ಹಣ ವಿನಿಯೋಗ ಮಾಡುವಾಗ ಈ ಹಿಂದೆಯೇ ಟ್ರಸ್ಟಿನ ಅಧ್ಯಕ್ಷರು guidelines ಹಾಕಿಕೊಟ್ಟಿದ್ದು ಇರುತ್ತದೆ. ಇದನ್ನು ಸರಿಯಾಗಿ ಪಾಲಿಸಲು ಈ ಮೂಲಕ ತಿಳಿಸಲಾಗಿದೆ. ಟ್ರಸ್ಟು ನೀಡಿದ guidelines ಪ್ರಕಾರ ಯು.ಜಿ.ಸಿ. ಯಿಂದ ಬಂದ ಹಣವನ್ನು ಯು.ಜಿ.ಸಿ ನಿಯಮದಂತೆ ವಿನಿಯೋಗಿಸಬೇಕೆಂದು ಸಂಬಂಧಿಸಿದ ಪ್ರಾಚಾರ್ಯರಿಗೆ ಇನ್ನೊಮ್ಮೆ ಈ ಮೂಲಕ ತಿಳಿಸಲು ಬಯಸುತ್ತೇನೆ. ಯು.ಜಿ.ಸಿ.ಯಿಂದ ಬಂದ ಹಣ ಹಾಗೂ ವಿನಿಯೋಗಿಸಿದ ಹಣಕ್ಕೆ ಪ್ರತ್ಯೇಕ ದಾಖಲೆಗಳನ್ನು ಇಟ್ಟು ಖರಿದಿಸಿದ ಎಲ್ಲ ವಸ್ತುಗಳು ಕಾಲೇಜಿನ ಸ್ಟಾಕ್ ರೆಜಿಸ್ಟರನಲ್ಲಿ ಕಡ್ಡಾಯವಾಗಿ ನೋಂದಣಿ ಮಾಡುವಂತೆ ಪ್ರಾಚಾರ್ಯರು ಕ್ರಮ ಕೈಗೊಳ್ಳಬೇಕು. ಟ್ರಸ್ಟಿನಿಂದ ಇಲ್ಲವೇ ಯು.ಜಿ.ಸಿ. ಅಧಿಕಾರಿಗಳು ತಪಾಸಣೆಗೆ ಬಂದಾಗ ಯಾವುದೇ ನ್ಯೂನತೆ ಇರದ ಹಾಗೆ ನೋಡಿಕೊಳ್ಳುವದು ಸಂಬಂಧಿಸಿದವರ ಕರ್ತವ್ಯವಾಗಿರುತ್ತದೆ.

ವಿಶ್ವವಿದ್ಯಾಲಯ ಧನ ಸಹಾಯ ಆಯೋಗ ಅರ್ಹ ಕಾಲೇಜುಗಳಿಗೆ ಈ ಕೆಳಗಿನ ಯೋಜನೆಗಳ ಅಡಿಯಲ್ಲಿ ಹಣ ಮಂಜೂರಿ ಮಾಡುತ್ತದೆ.

| | |
|---|---|
| • Faculty Improvement Program (FIP) | • Remedial Courses |
| • Major Research Project | • Add-on Courses |
| • Minor Research Project (MRP) | • Purchase of Equipments |
| • Conduct of State Level Seminar / Workshop | • Library Automation |
| • Conduct of National Level Seminar | • UGC Additional Assistance |
| • College with Potential for Excellence | • Special Grant Enhancement |
| • Internal Quality Assurance Cell (IQAC) | • Equal Opportunity Centre |
| • Network Resource Centre (NRC) | • Merged Schemes |
| • Purchase of Sports Materials | • General Development |
| • Internet Connectivity | • Hostel Buildings |
| • Upgradation of Classrooms / Seminar Halls | • Stipend for Students |
| • Sports Coaching for Students | • Laboratory Upgradation |
| • Maintenance of Equipment | • Teaching Aids |
| • Enrichment of Teachers | • Skill Development |
| ***..and other heads (recurring & non-recurring) which may be added from time to time*** | |

ಕಳೆದ 5 ವರ್ಷಗಳಲ್ಲಿ ಯು.ಜಿ.ಸಿ.ಯಿಂದ ಗೋಖಲೆ ಸೆಂಟೀನರಿ ಕಾಲೇಜ್, ಅಂಕೋಲಾಕ್ಕೆ ರೂ.1,28,66,445/– ಸಹಾಯಧನ ರೂಪದಲ್ಲಿ ವಿವಿಧ ಯೋಜನೆಗಳಿಗೆ ಬಂದಿರುತ್ತದೆ. ಅದೇ ರೀತಿ ದಿವೇಕರ ವಾಣಿಜ್ಯ ಕಾಲೇಜ್, ಕಾರವಾರಕ್ಕೆ ರೂ.77,57,026/– ಸಹಾಯಧನ ಬಂದಿರುತ್ತದೆ. ಈ ಹಣವನ್ನು ಆಯಾ ಕೆಲಸಗಳಿಗೆ ವಿನಿಯೋಗಿಸಲಾಗಿದೆಯೆಂದು ಸಂಬಂಧಿಸಿದ ಕಾಲೇಜುಗಳ ಪ್ರಾಚಾರ್ಯರು ವರದಿ ಮಾಡಿರುತ್ತಾರೆ.

2016–2017ನೇ ಸಾಲಿನಿಂದ ಬರುವ 5 ವರ್ಷಗಳಿಗೆ ಅನ್ವಯಿಸುವಂತೆ ಅಂಕೋಲಾದ ಗೋಖಲೆ ಸೆಂಟಿನರಿ ಕಾಲೇಜನ್ನು 'College with Potential for Excellence' ಎಂದು ಗುರುತಿಸಿ ವಿಶ್ವವಿದ್ಯಾಲಯ ಧನ ಸಹಾಯ ಆಯೋಗ ರೂ.1.5 ಕೋಟಿಯನ್ನು ಮಂಜೂರು ಮಾಡಿರುತ್ತದೆ. ಇದೊಂದು ವಿಶೇಷ ಅನುದಾನವಾಗಿರುತ್ತದೆ, ಈ ಹಣ ಯು.ಜಿ.ಸಿ.ಯಿಂದ ಬಿಡುಗಡೆ ಆದ ನಂತರ ಅವರು ನಿಗದಿಪಡಿಸಿದ ಕಾರ್ಯಗಳಿಗೆ ನಿಯಮದಂತೆ ವಿನಿಯೋಗಿಸಲು ಪ್ರಾಚಾರ್ಯರಿಗೆ ತಿಳಿಸಲಾಗಿದೆ.

## 14.ಬಿಸಿಯೂಟದ ಯೋಜನೆ ಕುರಿತು

ಕರ್ನಾಟಕ ಸರಕಾರದ ಯೋಜನೆಯಂತೆ ಟ್ರಸ್ಟು ನಡೆಸುತ್ತಿರುವ ಎಲ್ಲ ಅನುದಾನಿತ ಹೈಸ್ಕೂಲುಗಳಲ್ಲಿ ಬಿಸಿಯೂಟದ ಯೋಜನೆ ಯಶಸ್ವಿಯಾಗಿ ನಡೆಯುತ್ತಿದೆ. ಅನುದಾನರಹಿತ ಹೈಸ್ಕೂಲ ಹಾಗೂ ಪ್ರಾಥಮಿಕ ವಿಭಾಗದ ಮಕ್ಕಳಿಗೂ ಆಯಾ ಶಾಲೆಯಲ್ಲಿ ಬಿಸಿಯೂಟದ ಯೋಜನೆ ಪ್ರತ್ಯೇಕವಾಗಿ ಮಾಡಲಾಗುತ್ತಿದೆ.

2016–2017ನೇ ಸಾಲಿನಲ್ಲಿ ಶೈಕ್ಷಣಿಕ ಪರಿಶೀಲನಾ ಸಂದರ್ಭದಲ್ಲಿ ಟ್ರಸ್ಟು ನಡೆಸುತ್ತಿರುವ ಎಲ್ಲ ಸಂಸ್ಥೆಗಳಲ್ಲಿ ಹಾಗೂ ಮಕ್ಕಳಿಗೆ ನೀಡುತ್ತಿರುವ ಬಿಸಿಯೂಟವನ್ನು ಹಾಗೂ ಅದರ ವ್ಯವಸ್ಥೆಯನ್ನು ಪರಿಶೀಲಿಸಲಾಗಿದೆ. ಸರ್ಕಾರದವರು ಎಲ್ಲ ಅನುದಾನಿತ ಶಾಲೆಗಳಿಗೆ ಅವರ ಶಾಲೆಯ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಬಿಸಿಯೂಟ ತಯಾರಿಸುವ ಸ್ವತಂತ್ರ ಕಟ್ಟಡವನ್ನು ನಿರ್ಮಿಸಿಕೊಟ್ಟಿದ್ದಾರೆ.



**ಪರಿಶೀಲನೆ ನಡೆದಾಗ ಕಂಡು ಬಂದ ಕೆಲವು ವಿಷಯಗಳನ್ನು ಉಲ್ಲೇಖಿಸಲು ಬಯಸುತ್ತೇನೆ**

1. ಬಿಸಿಯೂಟದ ಅಡಿಗೆ ತಯಾರಿಸುವ ಸಿಬ್ಬಂದಿಗಳು ಅಡಿಗೆ ಮಾಡುವ ಸ್ಥಳಗಳನ್ನು ಸ್ವಚ್ಛವಾಗಿ ಇಡಲು ಪ್ರಥಮ ಆದ್ಯತೆ ನೀಡಬೇಕು. ಅಡಿಗೆ ತಯಾರಿಸುವವರು Masks ಮತ್ತು Gloves ಕಡ್ಡಾಯವಾಗಿ ಉಪಯೋಗಿಸಬೇಕು.
2. ಆಹಾರಧಾನ್ಯ ಉಪಯೋಗಿಸುವಾಗ ಅದರ ಗುಣಮಟ್ಟವನ್ನು ಪರೀಕ್ಷಿಸಿ ಉಪಯೋಗಿಸಬೇಕು. ಹಾಳಾದ ಆಹಾರಧಾನ್ಯವನ್ನು ಯಾವ ಕಾರಣಕ್ಕೂ ಉಪಯೋಗಿಸಬಾರದು.
3. ಅಡಿಗೆ ತಯಾರಿಸುವ ಪಾತ್ರೆಗಳು ಸ್ವಚ್ಛವಾಗಿ ಇರುವಂತೆ ನೋಡಿಕೊಳ್ಳಬೇಕು.
4. ಮುಖ್ಯ ಅಡಿಗೆಯವರು ಸರಕಾರ ನೀಡುವ ಆಹಾರ ಧಾನ್ಯಗಳನ್ನು ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಸರಿಯಾಗಿ ಉಪಯೋಗಿಸಬೇಕು. ಅದರ ಲೆಕ್ಕವನ್ನು ಸರಿಯಾಗಿ ಇಡಬೇಕು. ಯಾವದೇ ಕಾರಣಕ್ಕೂ ವ್ಯತ್ಯಾಸ ಬರದಂತೆ, ದುರುಪಯೋಗವಾಗದಂತೆ ನೋಡಿಕೊಳ್ಳಬೇಕು.
5. ಬಿಸಿಯೂಟಕ್ಕೆ ಬೇಕಾಗುವ ತರಕಾರಿಗಳಲ್ಲಿ ಸ್ವಲ್ಪ ಪ್ರಮಾಣದಲ್ಲಿ ತರಕಾರಿಯನ್ನು ಜನತಾ ವಿದ್ಯಾಲಯ, ಶಿರಾಲಿ, ಮಿರ್ಜಾನ, ದಾಂಡೇಲಿ ಮತ್ತು ಕುಳವೆ–ಬರೂರ ಶಾಲೆಯ ಆವರಣದಲ್ಲಿ ಬೆಳೆಸಿ ಅದನ್ನು ಉಪಯೋಗಿಸುತ್ತಿದ್ದಾರೆ. ಉಳಿದ ಶಾಲೆಯ ಮುಖ್ಯಾಧ್ಯಾಪಕರೂ ಕೂಡ ಈ ಬಗ್ಗೆ ಗಮನ ಹರಿಸಿ ಸಾಧ್ಯವಾದಷ್ಟು ತರಕಾರಿಗಳನ್ನು ಬೆಳೆಸುವಂತೆ ಪ್ರಯತ್ನಿಸಬೆಕಾಗಿ ಕೋರಿಕೆ.
6. ಶಾಲೆಯ ಶಿಕ್ಷಕ ವೃಂದದವರು, ಮುಖ್ಯಾಧ್ಯಾಪಕರು ಬಿಸಿಯೂಟದ ವ್ಯವಸ್ಥೆ ಸರಿಯಾಗಿ ನಡೆಯುವಂತೆ ಮೇಲ್ವಿಚಾರಣೆಯನ್ನು ನಿರ್ವಹಿಸಬೇಕು.

ಅನೇಕ ಸಂಸ್ಥೆಗಳಲ್ಲಿ ವ್ಯವಸ್ಥೆ ಅಚ್ಚುಕಟ್ಟಾಗಿ ನಡೆದಿದೆ. ಕೆಲವು ಸಂಸ್ಥೆಗಳಲ್ಲಿ ಕೆಲವೊಂದು ಲೋಪದೋಷಗಳು ಕಂಡುಬಂದಿದೆ. ಸಂಬಂಧಿಸಿದ ಶಾಲೆಗಳ ಮುಖ್ಯಾಧ್ಯಾಪಕರಿಗೆ ನ್ಯೂನತೆ ಕಂಡು ಬಂದಲ್ಲಿ ಅವರ ಗಮನಕ್ಕೆ ತಂದು ತುರ್ತಾಗಿ ಸರಿಪಡಿಸುವಂತೆ ತಿಳಿಸಲಾಗಿದೆ.

ಬಿಸಿಯೂಟ ನೀಡುವಲ್ಲಿ ಯಾವದಾದರೂ ಲೋಪವಾದರೆ ಅದರ ಪರಿಣಾಮ ನೇರವಾಗಿ ವಿದ್ಯಾರ್ಥಿಗಳ ಮೇಲೆ ಆಗುವದರಿಂದ ಎಲ್ಲ ಶಾಲೆಯ ಮುಖ್ಯಾಧ್ಯಾಪಕರು/ಸಹಶಿಕ್ಷಕರು ವಿಶೇಷ ಕಾಳಜಿ ವಹಿಸಿ ಬಿಸಿಯೂಟದ ಯೋಜನೆ ಯಶಸ್ವಿಯಾಗಿ ನಡೆಯುವಂತೆ ಕಾಳಜಿ ವಹಿಸಲು ವಿನಂತಿಸಲಾಗಿದೆ.

ಬಿಸಿಯೂಟದ ಯೋಜನೆಯಂತೆ ಸರಕಾರವು ಮಕ್ಕಳಿಗೆ ಮದ್ಯಾಹ್ನದ ಊಟ ನೀಡುತ್ತಿದೆ. ಸರ್ಕಾರ ನೀಡುವ ಸಹಾಯಧನದಲ್ಲಿ ಮಕ್ಕಳಿಗೆ ಬಹುತೇಕ ಎಲ್ಲ ಶಾಲೆಗಳಲ್ಲಿ ಅನ್ನ, ಸಾಂಬಾರು, ಉಪ್ಪಿನಕಾಯಿ ಮಾತ್ರ ನೀಡಲಾಗುತಿದೆ. ಶಾಲೆಗಳಲ್ಲಿ ಬಿಸಿಯೂಟ ಮಾಡುವ ಮಕ್ಕಳ ವಯಸ್ಸು ಸುಮಾರು 12 ರಿಂದ 15 ಇರುವದರಿಂದ ಅವರಿಗೆ ಬಿಸಿಯೂಟದ ಜೊತೆಗೆ ಇನ್ನೇನಾದರು ಪೌಷ್ಟಿಕ ಆಹಾರ ನೀಡುವದರಿಂದ ಅವರ ಬೆಳವಣಿಗೆಗೆ ಪೂರಕವಾಗುತ್ತದೆ ಎಂದು ಅಧ್ಯಕ್ಷರು ಅಭಿಪ್ರಾಯಪಟ್ಟು, ಪೌಷ್ಟಿಕ ಆಹಾರ ನೀಡಿದರೆ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೆ ತಲಾ ಎಷ್ಟು ಖರ್ಚು ಬರಬಹುದೆಂದು ಅಂದಾಜು ಮಾಡುವರೆ ಒಂದು ಉಪ ಸಮಿತಿಯನ್ನು ನೇಮಕ ಮಾಡಿದಂತೆ, ಉಪ ಸಮಿತಿಯ ಸಂಚಾಲಕರಾದ ಶ್ರೀ ರವೀಂದ್ರ ಕೇಣಿಯವರು ಈ ಕುರಿತು ಒಂದು ವರದಿಯನ್ನು ತಯಾರಿಸಿ ಅಧ್ಯಕ್ಷರಿಗೆ ನೀಡಿರುತ್ತಾರೆ. ಅವರು ನೀಡಿದ ವರದಿಯಲ್ಲಿ ಅಂದಾಜು ಖರ್ಚು ಈ ಕೆಳಗಿನಂತೆ ಇದೆ.

| | |
|---|---|
| 100 ವಿದ್ಯಾರ್ಥಿಗಳಿಗೆ ಬೇಳೆ ಮತ್ತು ಮೊಳಕೆ ಕಾಳು ಬಾಜಿ ತಯಾರಿಸಲು ಒಂದು ದಿನಕ್ಕೆ ತಗಲುವ ಒಟ್ಟೂ ವೆಚ್ಚ | ರೂ.492 |
| **ಪ್ರತಿ ವಿದ್ಯಾರ್ಥಿಗೆ ಪ್ರತಿ ದಿನಕ್ಕೆ ತಗಲುವ ವೆಚ್ಚ** | **ರೂ.4.92** |

ಪ್ರಯೋಗಾರ್ಥವಾಗಿ ಜೂನ್ 1 ರಿಂದ ಜೂನ್ 30ರವರೆಗೆ ಟ್ರಸ್ಟು ನಡೆಸುತ್ತಿರುವ ಜನತಾ ವಿದ್ಯಾಲಯ, ಬಾಡ–ಕಾಗಾಲ ಶಾಲೆಯಲ್ಲಿ ಬಿಸಿಯೂಟದ ಜೊತೆಗೆ ಮೊಳಕೆ ತಂದ ಕಾಳು ಬಾಜಿಯನ್ನು ಊಟದ ಜೊತೆಗೆ ನೀಡುವಂತೆ ಹಾಗೂ ಅದಕ್ಕೆ ತಗಲುವ ಖರ್ಚನ್ನು ಟ್ರಸ್ಟಿಗೆ ತಿಳಿಸಲು ಆ ಶಾಲೆಯ ಹಿರಿಯ ಶಿಕ್ಷಕರಾದ ಶ್ರೀ ವಿ.ಪಿ.ಶಾನಭಾಗರಿಗೆ ತಿಳಿಸಲಾಗಿತ್ತು. ಅವರು ನೀಡಿದ ವರದಿ ಈ ಕೆಳಗಿನಂತೆ ಇದೆ.

**<u>01 ರಿಂದ 30 ಜೂನ್ 2017ರ ಅವಧಿಯಲ್ಲಿ ಮೊಳಕೆ ತಂದ ಬಾಜಿ ನೀಡಲು ಖರ್ಚಾದ ವಿವರ</u>**


| | |
|---|---|
| ಮೊಳಕೆ ತರಿಸಿದ ಕಾಳು ಬಾಜಿ ಪಲ್ಯ ನೀಡಿದ ದಿವಸಗಳು | 20 ದಿವಸ |
| ಒಟ್ಟೂ ಊಟ ಮಾಡಿದ ವಿದ್ಯಾರ್ಥಿಗಳ ಸಂಖ್ಯೆ (20 ದಿವಸಕ್ಕೆ) | 3422 |
| ಪ್ರತಿ ದಿವಸ ಊಟ ಮಾಡಿದ ವಿದ್ಯಾರ್ಥಿಗಳ ಸಂಖ್ಯೆ (ಸರಾಸರಿ) | 171 |
| ಮೊಳಕೆ ತರಿಸಿದ ಬಾಜಿಯನ್ನು ನೀಡಲು ತಗಲಿದ ಒಟ್ಟೂ ಖರ್ಚು (20 ದಿವಸಕ್ಕೆ) | ರೂ.5669 |
| ಪ್ರತಿಯೊಬ್ಬ ವಿದ್ಯಾಥಿಗೆ ಮೊಳಕೆ ತರಿಸಿದ ಬಾಜಿ ನೀಡಿದ ಪ್ರಮಾಣ | 40 ರಿಂದ 50 ಗ್ರಾಂ |
| **ಪ್ರತಿ ವಿದ್ಯಾರ್ಥಿಗೆ ಪ್ರತಿ ದಿನಕ್ಕೆ ತಗಲುವ ಖರ್ಚು (ಸರಾಸರಿ)** | **ರೂ.1.65** |

(ಬಿಸಿಯೂಟ ತಯಾರಿಸುವ ಅಡಿಗೆಯವರು ಮೊಳಕೆ ತಂದ ಕಾಳು ಬಾಜಿಯನ್ನು ಸ್ವ–ಖುಶಿಯಿಂದ ಮಾಡಲು ಒಪ್ಪಿದ್ದಾರೆ. ಇಂಧನವನ್ನು ಶಾಲೆಯ ಬಿಸಿಯೂಟಕ್ಕೆ ತಯಾರಿಸುವ ಇಂಧನ ಉಪಯೋಗಿಸಲಾಗಿದೆ.)

## 15. ಸಮವಸ್ತ್ರದ ಬದಲಾವಣೆ ಕುರಿತು

ಕೆನರಾ ವೆಲ್‌ಫೇರ್ ಟ್ರಸ್ಟು ನಡೆಸುತ್ತಿರುವ ಎಲ್ಲ ಅನುದಾನಿತ/ಅನುದಾನರಹಿತ ಪೂರ್ವ ಪ್ರಾಥಮಿಕ/ಪ್ರಾಥಮಿಕ/ಮಾದ್ಯಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಸಮವಸ್ತ್ರ ಬದಲಾಯಿಸಬೇಕೆಂಬ ಬೇಡಿಕೆ ಕಳೆದ 2–3 ವರ್ಷಗಳಿಂದ ಬಂದಿದ್ದು ಇರುತ್ತದೆ. ದಿನಾಂಕ 06–08–2016 ರಂದು ನಡೆದ ಟ್ರಸ್ಟಿನ ವಾರ್ಷಿಕ ಸಮಾಲೋಚನಾ ಸಭೆಯಲ್ಲಿ ಈ ವಿಷಯ ಪ್ರಸ್ತಾಪವಾಗಿತ್ತು. ಟ್ರಸ್ಟಿನ ಅಧ್ಯಕ್ಷರು ಸಮವಸ್ತ್ರ ಬದಲಾವಣೆ ಕುರಿತು ಕೂಲಂಕಷವಾಗಿ ಚರ್ಚಿಸಿ ಟ್ರಸ್ಟಿಗೆ ಸಲಹೆ ನೀಡಲು ಒಂದು ಸಮಿತಿಯನ್ನು ನೇಮಕ ಮಾಡಿದ್ದರು. ಈ ಸಮಿತಿಯು ತನ್ನ ವರದಿಯನ್ನು ಟ್ರಸ್ಟಿಗೆ ಸಲ್ಲಿಸಿದ್ದು ಸಮಿತಿಯ ಅಭಿಪ್ರಾಯದಂತೆ ಸಮವಸ್ತ್ರ ಬದಲಾವಣೆ ಮಾಡಲು ಟ್ರಸ್ಟು ನಿರ್ಣಯಿಸಿರುತ್ತದೆ. ದಿನಾಂಕ 24–03–2017 ರಂದು ಪಿ.ಎಮ್.ಹೈಸ್ಕೂಲ್ ಅಂಕೋಲಾದಲ್ಲಿ ನಡೆದ ಸಭೆಯಲ್ಲಿ ಟ್ರಸ್ಟಿನ ಅಧ್ಯಕ್ಷರು, ಸಮಿತಿಯ ಸಂಚಾಲಕರು ಕೆಲವು ಸದಸ್ಯರು ಹಾಗೂ ಶಿಕ್ಷಕರೊಂದಿಗೆ ಸಮವಸ್ತ್ರದ ವಿನ್ಯಾಸ, ಬಣ್ಣ ಹಾಗೂ ದರದ ಕುರಿತು ಚರ್ಚಿಸಲಾಯಿತು. ಅಂದಿನ ಸಭೆಯಲ್ಲಿ ಸಮವಸ್ತ್ರ ಪೂರೈಸುವ ಮಿರಜಕರ ಹೊಸಿಯರಿಸ ಅವರು ಹಾಜರಿದ್ದು ಅವರೊಡನೆ ವಿನ್ಯಾಸ, ಬಣ್ಣ ಹಾಗೂ ದರದ ಕುರಿತು ಚರ್ಚಿಸಿ ಅಂತಿಮಗೊಳಿಸಲಾಯಿತು.

2017–18ನೇ ಸಾಲಿಗೆ ಹೊಸದಾಗಿ ಪ್ರವೇಶ ಪಡೆಯುವ ನರ್ಸರಿ/ಎಲ್.ಕೆ.ಜಿ, ಒಂದನೇ ತರಗತಿಯಿಂದ 9ನೇ ತರಗತಿವರೆಗೆ ವಿದ್ಯಾರ್ಥಿಗಳಿಗೆ ಸಮವಸ್ತ್ರ ಜಾರಿಗೆ ಬಂದಿರುತ್ತದೆ ಪೂರ್ವ ಪ್ರಾಥಮಿಕ/ಪ್ರಾಥಮಿಕ ಹಾಗೂ ಹೈಸ್ಕೂಲ ವಿದ್ಯಾರ್ಥಿಗಳಿಗೆ ಬದಲಾವಣೆ ಮಾಡಿದ ಸಮವಸ್ತ್ರದ ವಿನ್ಯಾಸ ಯಾವ ರೀತಿಯಲ್ಲಿ ಕಾಣಿಸುತ್ತಿದೆ ಅನ್ನುವ ಕುರಿತು ವಿನ್ಯಾಸದ ಫೋಟೋ ಪ್ರತಿಯೊಂದು ಶಾಲೆಗಳಿಗೆ ಕಳುಹಿಸಲಾಗಿದೆ.



ವಿದ್ಯಾರ್ಥಿಗಳಿಂದ ಪಡೆಯಬೇಕಾದ ಸಮವಸ್ತ್ರದ ದರದ ವಿವರವನ್ನು ಈ ಕೆಳಗೆ ನೀಡಲಾಗಿದೆ.

| ಪೂರ್ವ ಪ್ರಾಥಮಿಕ ಎಲ್.ಕೆ.ಜಿ ಮತ್ತು ಯು.ಕೆ.ಜಿ. ಸಮವಸ್ತ್ರ | | | | | |
|---|---|---|---|---|---|
| | ದರ | ಬೆಲ್ಟ | ಕಲರ ಮೇಚಿಂಗ | ಸ್ಕೂಲ್ ಲೋಗೋ | ಒಟ್ಟೂ |
| ವಿದ್ಯಾರ್ಥಿಗಳ ಸಮವಸ್ತ್ರಕ್ಕೆ | 240 | 20 | 10 | 10 | **ರೂ.280** |
| ವಿದ್ಯಾರ್ಥಿನಿಯರ ಸಮವಸ್ತ್ರಕ್ಕೆ | 250 | – | 10 | 10 | **ರೂ.270** |
| **ಪ್ರಾಥಮಿಕ 1 ರಿಂದ 4ನೇ ತರಗತಿ ಸಮವಸ್ತ್ರ** | | | | | |
| | ದರ | ಬೆಲ್ಟ | ಕಲರ ಮೇಚಿಂಗ | ಸ್ಕೂಲ್ ಲೋಗೋ | ಒಟ್ಟೂ |
| ವಿದ್ಯಾರ್ಥಿಗಳ ಸಮವಸ್ತ್ರಕ್ಕೆ | 250 | 20 | 10 | 10 | **ರೂ.290** |
| ವಿದ್ಯಾರ್ಥಿನಿಯರ ಸಮವಸ್ತ್ರಕ್ಕೆ | 315 | 20 | 10 | 10 | **ರೂ.355** |
| **ಪ್ರಾಥಮಿಕ 5 ರಿಂದ 7ನೇ ತರಗತಿ ಸಮವಸ್ತ್ರ** | | | | | |
| | ದರ | ಬೆಲ್ಟ | ಕಲರ ಮೇಚಿಂಗ | ಸ್ಕೂಲ್ ಲೋಗೋ | ಒಟ್ಟೂ |
| ವಿದ್ಯಾರ್ಥಿಗಳ ಸಮವಸ್ತ್ರಕ್ಕೆ | 260 | 20 | 10 | 10 | **ರೂ.300** |
| ವಿದ್ಯಾರ್ಥಿನಿಯರ ಸಮವಸ್ತ್ರಕ್ಕೆ | 350 | 20 | 10 | 10 | **ರೂ.390** |
| **ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಸಮವಸ್ತ್ರ** | | | | | |
| | ದರ | ಬೆಲ್ಟ | ಕಲರ ಮೇಚಿಂಗ | ಸ್ಕೂಲ್ ಲೋಗೋ | ಒಟ್ಟೂ |
| ವಿದ್ಯಾರ್ಥಿಗಳ ಸಮವಸ್ತ್ರಕ್ಕೆ | 450 | 20 | 10 | 10 | **ರೂ.490** |
| ವಿದ್ಯಾರ್ಥಿನಿಯರ ಸಮವಸ್ತ್ರಕ್ಕೆ | 600 | – | 10 | 10 | **ರೂ.620** |

ಸಮವಸ್ತ್ರದ ಕುರಿತು ಎಲ್ಲ ಶಾಲೆಗಳ ಮುಖ್ಯಾಧ್ಯಾಪಕರಿಗೆ ಸುತ್ತೋಲೆ ಮೂಲಕ ತಿಳಿಸಿ ಪ್ರತಿ ಶಾಲೆಯಿಂದ ಆಯಾ ಶಾಲೆಗೆ ಬೇಕಾಗುವ ಸಮವಸ್ತ್ರದ ಇಂಡೆಂಟ್ ತರಿಸಿಕೊಳ್ಳಲಾಗಿದೆ. ಶಾಲೆಯಿಂದ ನೀಡಿದ ಇಂಡೆಂಟ ಪ್ರಕಾರ ಮಿರಜಕರ ಹೊಸಿರಿಸ್ ಹುಬ್ಬಳ್ಳಿಯವರಿಗೆ ಸಮವಸ್ತ್ರ ತಯಾರಿಸಲು ತಿಳಿಸಲಾಗಿದೆ. ಇದೇ ತಿಂಗಳ 17 ರಿಂದ 31ರ ಒಳಗೆ ಎಲ್ಲ ವಿದ್ಯಾರ್ಥಿಗಳಿಗೆ ಎಲ್ಲ ಶಾಲೆಗಳಿಗೆ ಸಮವಸ್ತ್ರ ಪೂರೈಸುವದಾಗಿ ತಿಳಿಸಿರುತ್ತಾರೆ.

## 16.ಕಾರ್ಮಿಕರ ರಾಜ್ಯ ವಿಮಾ ನಿಗಮ (E.S.I.) ಯೋಜನೆ

ಯಾವದೇ ಸಂಸ್ಥೆಯಲ್ಲಿ 10 ಅಥವಾ ಅದಕ್ಕಿಂತ ಮೇಲ್ಪಟ್ಟು ಕಾರ್ಯ ನಿರ್ವಹಿಸುವ ಅನುದಾನರಹಿತ ಸಿಬ್ಬಂದಿಗಳಿದ್ದರೆ ಹಾಗೂ ಅವರು ಪಡೆಯುತ್ತಿರುವ ವೇತನ ರೂ.21,000/–ಕ್ಕಿಂತ ಕಡಿಮೆ ಇದ್ದರೆ ಅವರ ಹೆಸರನ್ನು ಕೇಂದ್ರ ಸರಕಾರದ ಆದೇಶ ಪ್ರಕಾರ ಕಾರ್ಮಿಕರ ರಾಜ್ಯ ವಿಮಾ ಯೋಜನೆಯಡಿಯಲ್ಲಿ ನೋಂದಾಯಿಸುವದು ಕಡ್ಡಾಯವೆಂದು ಸರ್ಕಾರ ಆದೇಶ ಹೊರಡಿಸಿದೆ. ಈಗಾಗಲೇ ಈ ಯೋಜನೆ ಟ್ರಸ್ಟಿನ ದಾಂಡೇಲಿ ಕೇಂದ್ರದಲ್ಲಿ ಜಾರಿ ಇರುತದೆ. ಈ ಯೋಜನೆಯನ್ನು ಟ್ರಸ್ಟು ನಡೆಸುತ್ತಿರುವ ಎಲ್ಲ ಸಂಸ್ಥೆಗಳ ಸಿಬ್ಬಂದಿಗಳಿಗೆ ವಿಸ್ತರಿಸಲು ಟ್ರಸ್ಟು ನಿರ್ಣಯ ಕೈಗೊಂಡಿರುತ್ತದೆ.



ಈ ಯೋಜನೆಯಡಿಯಲ್ಲಿ ನೀಡಲಾಗುವ ಸೌಲಭ್ಯಗಳು ಮತ್ತು ಆರ್ಥಿಕ ನೆರವಿನ ನಿಯಮಗಳನ್ನು ಹಾಗೂ ಸಿಬ್ಬಂದಿಗಳ ಹೆಸರನ್ನು Online ನಲ್ಲಿ ನೋಂದಾಯಿಸುವ ವಿಧಾನ KYC Norms ಹಾಗೂ ಇನ್ನಿತರ ಮಹತ್ವಪೂರ್ಣ ಮಾಹಿತಿಯನ್ನು ಟ್ರಸ್ಟಿನ ವಿವಿಧ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲ ಆಫೀಸ ಸಿಬ್ಬಂದಿಗಳಿಗೆ, ಕಾರವಾರ ಎಜ್ಯೂಕೇಶನ್ ಸೊಸೈಟಿ ನಡೆಸುತ್ತಿರುವ ಸಂಸ್ಥೆಗಳ ಆಫೀಸ್ ಸಿಬ್ಬಂದಿಯವರಿಗೆ ಹಾಗೂ ಅಂಕೋಲಾ ತಾಲೂಕಿನ ವಿವಿಧ ಸಂಸ್ಥೆಗಳ ಸಿಬ್ಬಂದಿಗಳಿಗೆ ದಿನಾಂಕ 06 ಮರ್ಚ್ 2017 ರಂದು ಕಾರ್ಯಗಾರ ಆಯೋಜಿಸಿ ತಿಳುವಳಿಕೆ ನೀಡಲಾಗಿದೆ. ಈ ಕಾರ್ಯಗಾರದಲ್ಲಿ ಕಾರ್ಮಿಕರ ರಾಜ್ಯವಿಮಾ ಯೋಜನೆಯ ಅಧಿಕಾರಿಗಳು ಪಾಲ್ಗೊಂಡಿದ್ದರು.

ಈ ಯೋಜನೆಯಲ್ಲಿ ನೋಂದಾಯಿಸುವ ಪ್ರತಿಯೊಬ್ಬ ಸಿಬ್ಬಂದಿ ತಮ್ಮ ವೇತನದಲ್ಲಿ ಶೇಕಡಾ 1.75% ದಷ್ಟು ವಂತಿಗೆ ನೀಡಬೇಕಾಗುತ್ತದೆ. ಆಡಳಿತ ಮಂಡಳಿ ವಂತಿಗೆ ವೇತನದ ಶೇಕಡಾ 4.75% ರಷ್ಟು ನೀಡಬೇಕಾಗುತ್ತದೆ. ಮಾರ್ಚ 2017ರಿಂದ ಈಗಾಗಲೆ ನೋಂದಣಿ ಮಾಡಿದ 80 ಜನ ಸಿಬ್ಬಂದಿಗಳ ವಂತಿಗೆ ಹಣವನ್ನು E.S.I. ನಿಗಮಕ್ಕೆ ನಿಯಮಿತವಾಗಿ ಪಾವತಿಸಲಾಗುತ್ತಿದೆ.

ಈಗಾಗಲೆ ಟ್ರಸ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ 80 ಸಿಬ್ಬಂದಿಗಳ ನೋಂದಣಿ ಪ್ರಕ್ರಿಯೆ ಪೂರ್ಣಗೊಂಡಿದೆ. ಈ ಯೋಜನೆ ಮೇರೆಗೆ 80 ಸಿಬ್ಬಂದಿಗಳಿಗೆ ಪ್ರತಿ ತಿಂಗಳು ರೂ.18,061/– ಆಡಳಿತ ಮಂಡಳಿ ವಂತಿಗೆಯನ್ನು ಮತ್ತು ರೂ.6659/– ಸಿಬ್ಬಂದಿಗಳ ವಂತಿಗೆಯನ್ನು ಪಾವತಿಸಬೇಕಾಗುತ್ತದೆ.

## 17.ಟ್ರಸ್ಟಿನ ವಿವಿಧ ಶಾಲೆ–ಕಾಲೇಜುಗಳಲ್ಲಿ ನಡೆದ ಅಭಿವೃದ್ಧಿ ಹಾಗೂ ಇತರ ಕಾರ್ಯಗಳು

1. ಗೋಖಲೆ ಸೆಂಟಿನರಿ ಕಾಲೇಜ್, ಅಂಕೋಲಾದಲ್ಲಿ ಎಮ್.ಎಸ್ಸಿ. ರಸಾಯನಶಾಸ್ತ್ರ ವಿಭಾಗದ ಪ್ರಯೋಗಾಲಯ ಉನ್ನತೀಕರಣ ಕೈಗೊಳ್ಳಲು ರೂ.1,63,741/– ಆಡಳಿತ ಮಂಡಳಿ ಖಾತೆಯಿಂದ ಖರ್ಚು ಮಾಡಲಾಗಿದೆ. ಕಾಲೇಜು ವಿಭಾಗದ ಬಹಿರಂಗ ವೇದಿಕೆಗೆ ಮತ್ತು ಸುಣ್ಣಬಣ್ಣ ಮಾಡಿಸಲು ರೂ.4,34,113/– ಆಡಳಿತ ಮಂಡಳಿಯಿಂದ ಖರ್ಚು ಮಾಡಲಾಗಿದೆ.
2. ದಿವೇಕರ ವಾಣಿಜ್ಯ ಕಾಲೇಜು, ಕಾರವಾರದಲ್ಲಿ ರಿಪೇರಿ ಹಾಗೂ ಫೆಬ್ರಿಕೆಶನ್ ಕೆಲಸಕ್ಕೆ ಆಡಳಿತ ಮಂಡಳಿ ಖಾತೆಯಿಂದ ರೂ.74,029/– ಖರ್ಚು ಮಾಡಲಾಗಿದೆ.
3. ಟ್ರಸ್ಟಿನ ಬಿ.ಇಡ್.ಕಾಲೇಜ್, ದಾಂಡೇಲಿಯಲ್ಲಿ ಫರ್ನಿಚರ ಮತ್ತು ಉಪಕರಣದ ಬಗ್ಗೆ ಒಟ್ಟೂ ರೂ.80,000/–ನ್ನು ಆಡಳಿತ ಮಂಡಳಿ ಖಾತೆಯಿಂದ ಖರ್ಚು ಮಾಡಲಾಗಿದೆ.
4. ದಾಂಡೇಲಿಯ ಜನತಾ ವಿದ್ಯಾಲಯ ಪದವಿ ಪೂರ್ವ ಕಾಲೇಜಿನ ಕಂಪ್ಯೂಟರ ವಿಭಾಗಕ್ಕೆ ಹಾಗೂ ರಿಪೇರಿ ಕೆಲಸಕ್ಕೆ ಒಟ್ಟೂ ರೂ.2,70,846/– ಆಡಳಿತ ಮಂಡಳಿ ಖಾತೆಯಿಂದ ಖರ್ಚು ಮಾಡಲಾಗಿದೆ.
5. ಕಡತೋಕಾ ಹೈಸ್ಕೂಲಿನ ಡೆಸ್ಕು ಬೆಂಚು ರಿಪೇರಿಗೆ ರೂ.13,567/– ಆಡಳಿತ ಮಂಡಳಿ ಖಾತೆಯಿಂದ ಖರ್ಚು ಮಾಡಲಾಗಿದೆ ಹಾಗೂ ಪದವಿ ಪೂರ್ವ ಕಾಲೇಜಿನ ಸುವರ್ಣ ಭವನ ಕಟ್ಟಡದ ಕೆಲಸಕ್ಕೆ ರೂ.16,18,002/–, ಡೆಸ್ಕು ಬೆಂಚಿಗೆ ರೂ.26,979/–, ಕಟ್ಟಡ ರಿಪೇರಿ ಬಗ್ಗೆ ರೂ.1,25,000/–, ಒಟ್ಟೂ ರೂ.17,69,981/– ಖರ್ಚು ಮಾಡಲಾಗಿದೆ. ಇದರಲ್ಲಿ ಟ್ರಸ್ಟಿನಿಂದ ನೀಡಿದ ಮೊತ್ತ ರೂ.11,51,979/–.
6. ದಿವೇಕರ ಪದವಿ ಪೂರ್ವ ಕಾಲೇಜಿಗೆ ಸಿ.ಸಿ.ಕ್ಯಾಮರಾ ಅಳವಡಿಸಲು ರೂ.30,000/– ಆಡಳಿತ ಮಂಡಳಿ ಖಾತೆಯಿಂದ ಖರ್ಚು ಮಾಡಲಾಗಿದೆ.
7. ಜನತಾ ವಿದ್ಯಾಲಯ, ಕಡವಾಡ ಶಾಲೆಗೆ ನೀರಿನ ವ್ಯವಸ್ಥೆಗೆ ಹಾಗೂ ಕಂಪ್ಯೂಟರ ಖರೀದಿಗೆ ಟ್ರಸ್ಟಿನಿಂದ ಹಾಗೂ ದಾನಿಗಳ ನೆರವಿನಿಂದ ರೂ.10,400/– ಖರ್ಚು ಮಾಡಲಾಗಿದೆ.
8. ಜನತಾ ವಿದ್ಯಾಲಯ, ಕಾಸರಕೋಡ ಶಾಲೆಯ ರಿಪೇರಿ ಬಗ್ಗೆ ಟ್ರಸ್ಟಿನಿಂದ ರೂ.1,25,000/– ದಾನಿಗಳಿಂದ ಶಾಸಕರ ಅನುದಾನದಿಂದ ಅಭಿವೃದ್ಧಿ ಕಾರ್ಯಗಳಿಗಾಗಿ ರೂ,2,00,500/– ಖರ್ಚು ಮಾಡಲಾಗಿದೆ.
9. ಜನತಾ ವಿದ್ಯಾಲಯ, ಮುರ್ಡೆಶ್ವರ ಶಾಲೆಯ ಡೆಸ್ಕು ಬೆಂಚು ರಿಪೇರಿಗೆ ಹಾಗೂ ಶೌಚಾಲಯ ರಿಪೇರಿಗೆ ಆಡಳಿತ ಮಂಡಳಿ ಖಾತೆಯಿಂದ ರೂ.87,832/–, ಖರ್ಚು ಮಾಡಲಾಗಿದೆ. ಶಾಲಾ ಅಭಿವೃದ್ಧಿ ಕಾರ್ಯಗಳಿಗೆ ಸುವರ್ಣ ಮಹೋತ್ಸವ ಸಮಿತಿಯಿಂದ ರೂ.53,40,000/– ಖರ್ಚು ಮಾಡಲಾಗಿದೆ.

10. ಜನತಾ ವಿದ್ಯಾಲಯ, ಮಿರ್ಜಾನ ಕೋಡಕಣಿ ಶಾಲೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ರಿಪೇರಿಗೆ ಆಡಳಿತ ಮಂಡಳಿ ಖಾತೆಯಿಂದ ರೂ.18,886/– ಖರ್ಚು ಮಾಡಲಾಗಿದೆ.
11. ಜನತಾ ವಿದ್ಯಾಲಯ, ಮುದಗಾ ಶಾಲೆಯ ಕಟ್ಟಡ ರಿಪೇರಿಗೆ ರೂ.25,000/– ಟ್ರಸ್ಟಿನಿಂದ ನೀಡಲಾಗಿದೆ. ಕಟ್ಟಡದ ಸುಣ್ಣಬಣ್ಣಕ್ಕೆ ಹಾಗೂ ಇತರ ಕೆಲಸಗಳಿಗೆ ರೂ.2,50,143/– ಸುವರ್ಣ ಮಹೋತ್ಸವ ಖಾತೆಯಿಂದ ಖರ್ಚು ಮಾಡಲಾಗಿದೆ.
12. ಜನತಾ ವಿದ್ಯಾಲಯ, ಬೇಡ್ಕಣಿ ಶಾಲೆಯ ಬಿಸಿಯೂಟದ ಕಟ್ಟಡಕ್ಕೆ ರೂ.3,61,200/– ಸರ್ಕಾರದ ಅನುದಾನದಿಂದ ನಿರ್ಮಿಸಲಾಗಿದೆ. ಟ್ರಸ್ಟಿನಿಂದ ಕಂಪೌಂಡ ವಾಲ್ ರಿಪೇರಿಗೆ ರೂ.60,000/– ನೀಡಲಾಗಿದೆ. ಒಟ್ಟೂ ರೂ.4,21,200/– ಖರ್ಚು ಮಾಡಲಾಗಿದೆ.
13. ಜನತಾ ವಿದ್ಯಾಲಯ, ಅನಿಲಗೋಡ ಶಾಲೆಯ ಬಾವಿ ನಿರ್ಮಾಣಕ್ಕೆ ರೂ.1,50,000/– ಗ್ರಾಮ ಪಂಚಾಯತ ಸಹಾಯದಿಂದ, ಆಟದ ಮೈದಾನ ರಿಪೇರಿಗೆ, ರೂ.1,00,000/– ಉದ್ಯೋಗ ಖಾತ್ರಿ ಯೋಜನೆಯಿಂದ ರೂ.20,000/– ದಾನಿಗಳ ನೆರವಿನಿಂದ ಹೀಗೆ ಒಟ್ಟೂ ರೂ.2,70,000/– ಖರ್ಚು ಮಾಡಲಾಗಿದೆ..
14. ಅಂಕೋಲಾದ ಪಿ.ಎಮ್.ಇಂಗ್ಲೀಷ ಮೀಡಿಯಮ್ ಹೈಸ್ಕೂಲಿನ ಎರಡನೆ ಅಂತಸ್ತಿಗೆ ಜಾಳಿಗೆ ಕೂಡ್ರಿಸಿದ್ದು ಮತ್ತು ಶಾಲೆಯ ಮುಂದಿನ ನೆಲಕ್ಕೆ ಪೇವರ ಬ್ರಿಕ್ಸ ಕೂಡ್ರಿಸಿದ ಬಗ್ಗೆ ಒಟ್ಟೂ ರೂ.48,296/– ಆಡಳಿತ ಮಂಡಳಿ ಖಾತೆಯಿಂದ ಖರ್ಚು ಮಾಡಿರುವರು.
15. ಎಸ್.ಕೆ.ಪಿ.ಹೈಸ್ಕೂಲ್, ಕತಗಾಲ ಶಾಲೆಯ ಕಂಪ್ಯೂಟರಿಗೆ ರೂ.80,000/– ಶಾಸಕರ ನಿಧಿಯಿಂದ ರೂ.2,80,632/– ಶ್ರೀ ವಿ.ಎಂ.ಜಾಲಿಸತ್ಗಿ ಹಾಗೂ ಹೇಮಂತ ಪಿಕಳೆ ಅವರ ದೇಣಿಗೆಯಿಂದ ಕುಡಿಯುವ ನೀರಿನ ಬಗ್ಗೆ ರೂ.1,50,000/– ಪ್ರಕೃತಿ ವಿಕೋಪ ಕಾಮಗಾರಿಯಿಂದ, ಶಾಲೆಯ ವಾಯರಿಂಗ ಬಗ್ಗೆ ರೂ.60,674/– ಶಾಲೆಯ ಆಡಳಿತ ಮಂಡಳಿ ಖಾತೆಯಿಂದ, ಒಟ್ಟೂ ರೂ.5,71,306/– ಖರ್ಚು ಮಾಡಲಾಗಿದೆ.
16. ದಾಂಡೇಲಿಯ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯ ರಿಪೇರಿ ಕೆಲಸಕ್ಕೆ, ಕಂಪ್ಯೂಟರ ಖರೀದಿ ಹಾಗೂ ಇನ್ನಿತರ ಕೆಲಸಕ್ಕೆ ಒಟ್ಟೂ ಆಡಳಿತ ಮಂಡಳಿ ಖಾತೆಯಿಂದ ರೂ.6,42,013/– ಖರ್ಚು ಮಾಡಲಾಗಿದೆ.
17. ದಾಂಡೇಲಿಯ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯ ಫರ್ನಿಚರ ಹಾಗೂ ರಿಪೇರಿ ಬಗ್ಗೆ ಆಡಳಿತ ಮಂಡಳಿ ಖಾತೆಯಿಂದ ಖರ್ಚು ಮಾಡಿದ ಒಟ್ಟೂ ಹಣ ರೂ.24,789/–.
18. ದಿನಕರ ದೇಸಾಯಿ ಸ್ಮಾರಕ ಕನ್ನಡ ಹಾಗೂ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ ಅಂಕೋಲಾದಲ್ಲಿ ಕಟ್ಟಡಕ್ಕೆ, ಫರ್ನಿಚರಿಗೆ ಹಾಗೂ ಇಂಟರಲಾಕ್ ಹಾಕಿಸಲು ಒಟ್ಟೂ ರೂ.11,92.693/– ಆಡಳಿತ ಮಂಡಳಿ ಖಾತೆಯಿಂದ ಖರ್ಚು ಮಾಡಿರುವರು.

19. ಜನತಾ ವಿದ್ಯಾಲಯ ಶಿರಾಲಿಯಲ್ಲಿ ಸಲಕರಣೆ ಖರೀದಿ ಬಗ್ಗೆ ಹಾಗೂ ರಿಪೇರಿ ಬಗ್ಗೆ ಒಟ್ಟೂ ರೂ.40,772/– ದಾನಿಗಳ ದೇಣಿಗೆಯಿಂದ ಖರ್ಚು ಮಾಡಲಾಗಿದೆ. ಹಾಗೂ ಬಾಲಮಂದಿರ ಕಟ್ಟಡಕ್ಕೆ ರೂ.67,995/– ಆಡಳಿತ ಮಂಡಳಿ ಖಾತೆಯಿಂದ ಖರ್ಚು ಮಾಡಾಲಗಿದೆ.
20. ದಿನಕರ ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆ, ಧಾರೇಶ್ವರದ ಕಟ್ಟಡದ ಕೆಲಸಕ್ಕೆ ರೂ.8,47,800/– ಕಂಪ್ಯೂಟರ ಲ್ಯಾಬಿಗೆ ರೂ.2,87,000/– ಮತ್ತು ಸಭಾಭವನಕ್ಕೆ ರೂ.1,61,054/– ಒಟ್ಟೂ ರೂ.12,95,854/– ದಾನಿಗಳ ನೆರವಿನಿಂದ ಹಾಗೂ ಆಡಳಿತ ಮಂಡಳಿ ಖಾತೆಯಿಂದ ಖರ್ಚು ಮಾಡಲಾಗಿದೆ.
21. ಆಂಗ್ಲ ಮಾಧ್ಯಮ ಪೂರ್ವ ಪ್ರಾಥಮಿಕ ಶಾಲೆ ದಾಂಡೇಲಿ ಶಾಲೆಗೆ ಡೆಸ್ಕು ಬೆಂಚುಗಳ ಬಗ್ಗೆ ಕುಡಿಯುವ ನೀರಿನ ಬಗ್ಗೆ ಮತ್ತು ಕಟ್ಟಡ ನಿರ್ವಹಣೆ ಬಗ್ಗೆ ರೂ.24,437/– ಆಡಳಿತ ಮಂಡಳಿ ಖಾತೆಯಿಂದ ನಿರ್ವಹಿಸಲಾಗಿದೆ.
22. ಟ್ರಸ್ತಿನಿಂದ ವಿವಿಧ ಶಾಲೆಗಳಿಗೆ ಡೆಸ್ಕು ಬೆಂಚು ಪೂರೈಸಿದ ಬಗ್ಗೆ ರೂ.1,85,000/– ಫರ್ನಿಚರ ಬಗ್ಗೆ ರೂ.28,611 ಮತ್ತು ಸಂಗೀತ ಶಾಲೆಯ ಉಪಕರಣದ ಬಗ್ಗೆ ರೂ.35,800/– ಒಟ್ಟೂ ರೂ.2,52,411/– ಟ್ರಸ್ಟಿನಿಂದ ಖರ್ಚು ಮಾಡಲಾಗಿದೆ.


## 18.ಕ್ರುಗರ ಫೌಂಡೇಶನ, ಕಾರವಾರ, ಇವರು ತಾತ್ಕಾಲಿಕ ಶಿಕ್ಷಕರಿಗೆ ನೀಡಿದ ಸಹಾಯಧನ

ಟ್ರಸ್ಟು ನಡೆಸುತ್ತಿರುವ ಕೆಲವು ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದೆ. ಈ ಕೊರತೆ ನೀಗಿಸಲು ಆಡಳಿತ ಮಂಡಳಿಯವರು ಪ್ರತಿ ವರ್ಷ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡು ಶಾಲೆಗಳ ಶೈಕ್ಷಣಿಕ ಮಟ್ಟ ಕುಸಿಯದಂತೆ ನೋಡಿಕೊಂಡು ಅವರಿಗೆ ಸಂಭಾವನೆ ನೀಡುತ್ತ ಬಂದಿದೆ. ಅವರಿಗೆ ನೀಡುತ್ತಿರುವ ಸಂಭಾವನೆ ಮೊತ್ತ ಕಡಿಮೆ ಇರುವದನ್ನು ಮನಗಂಡು ಟ್ರಸ್ಟಿನ ಅಧ್ಯಕ್ಷರು 2006–2007ನೇ ಸಾಲಿನಿಂದ ತಾತ್ಕಾಲಿಕ ಶಿಕ್ಷಕರಿಗೆ ಪ್ರತಿ ತಿಂಗಳು ರೂ.1000/– ರಂತೆ ಕ್ರುಗರ್ ಫೌಂಡೆಶನ್ ವತಿಯಿಂದ ಸಹಾಯಧನವಾಗಿ ನೀಡುತ್ತ ಬಂದಿದ್ದಾರೆ. ಅಧ್ಯಕ್ಷರು 2014–2015 ಸಾಲಿನಿಂದ ಈ ಮೊತ್ತವನ್ನು ಪ್ರತಿ ತಿಂಗಳಿಗೆ ರೂ.1500/– ರಂತೆ ಹೆಚ್ಚಿಸಿರುತ್ತಾರೆ. ಈ ಸಂಭಾವನೆ ಪಡೆಯುವ ಎಲ್ಲ ಶಿಕ್ಷಕರು ಶಾಲೆಯಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ನೀಡಿ ಅವರ ಶೈಕ್ಷಣಿಕ ಮಟ್ಟವನ್ನು ಹೆಚ್ಚಿಸುವದು ಇದರ ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶವನ್ನು ಈಡೇರಿಸಲು ತಾತ್ಕಾಲಿಕ ಸಿಬ್ಬಂದಿಗಳು ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಕ್ರುಗರ ಫೌಂಡೇಶನನಿಂದ ಇದುವರೆಗೆ ಸಹಾಯ ಪಡೆದ ಫಲಾನುಭವಿಗಳ ಸಂಖ್ಯೆ ಹಾಗೂ ನೀಡಿದ ಸಹಾಯಧನದ ವಿವರ ಈ ಕೆಳಗಿನಂತೆ ಇದೆ.

| ವರ್ಷ | ಫಲಾನುಭವಿಗಳ ಸಂಖ್ಯೆ | ಕ್ರುಗರ ಫೌಂಡೇಶನ ನೀಡಿದ ಸಹಾಯ ಧನ | ತಾತ್ಕಾಲಿಕ ಶಿಕ್ಷಕರಿಗೆ ನೀಡಿದ ಒಟ್ಟು ಸಂಭಾವನೆ |
|---|---|---|---|
| 2006-2007 | 86 | Rs. 3,00,000 | Rs. 2,64,500 |
| 2007-2008 | 88 | Rs. 3,50,000 | Rs. 3,81,500 |
| 2008-2009 | 90 | Rs. 4,00,000 | Rs. 3,84,000 |
| 2009-2010 | 79 | Rs. 3,50,000 | Rs. 3,39,500 |
| 2010-2011 | 78 | Rs. 5,00,000 | Rs. 5,33,500 |
| 2011-2012 | 55 | Rs. 4,59,000 | Rs. 4,13,500 |
| 2012-2013 | 55 | Rs. 4,50,000 | Rs. 4,40,000 |
| 2013-2014 | 54 | Rs. 4,41,500 | Rs. 4,59,000 |
| 2014-2015 | 53 | Rs. 7,02,000 | Rs. 6,30,000 |
| 2015-2016 | 63 | Rs. 6,71,500 | Rs. 7,78,500 |
| 2016-2017 | 59 | Rs. 6,88,500 | Rs. 6,64,500 |
| **Total** | | **Rs.53,12,500** | **Rs.52,88,500** |

## Kruger Foundation Assistance given to Unaided Teachers




2006–2007ರಲ್ಲಿ ಪ್ರಾರಂಭವಾದ ಯೋಜನೆಯಡಿಯಲ್ಲಿ 2016–2017ನೇ ಸಾಲಿನಲ್ಲಿ 59 ಶಿಕ್ಷಕರಿಗೆ ರೂ.6,64,500/– ನೀಡಲಾಗಿದೆ. ಕಳೆದ 11 ವರ್ಷಗಳಿಂದ ಈ ಯೋಜನೆಗೆ ಇದುವರೆಗೆ ಕ್ರುಗರ್ ಫೌಂಡೇಶನ್, ಕಾರವಾರದ ಅಧ್ಯಕ್ಷರಾದ ಶ್ರೀ ಎಸ್.ಪಿ.ಕಾಮತರವರು ರೂ.53,12,500/– ಸಹಾಯಧನ ನೀಡಿ ಪ್ರೋತ್ಸಾಹ ನೀಡಿದ್ದಾರೆ. ಈ ಬಗ್ಗೆ ಸಂಸ್ಥೆಯ ಅಧ್ಯಕ್ಷರಿಗೂ, ಕ್ರುಗರ್ ಫೌಂಡೇಶನ್ ಕಾರವಾರ ಇವರಿಗೂ ಟ್ರಸ್ಟಿನ ಪರವಾಗಿ ಹಾಗೂ ಎಲ್ಲ ಸಂಸ್ಥೆಯ ಪರವಾಗಿ ಧನ್ಯವಾದ ಅರ್ಪಿಸುತ್ತೇನೆ.

2017–2018ನೇ ಶೈಕ್ಷಣಿಕ ವರ್ಷದಲ್ಲಿಯೂ ಈ ಯೋಜನೆ ಮುಂದುವರೆಸಬೇಕಾಗಿ ಮಾನ್ಯ ಅಧ್ಯಕ್ಷರಿಗೆ ತಮ್ಮೆಲ್ಲರ ಪರವಾಗಿ ವಿನಂತಿಸುತ್ತೇನೆ.

## 19.'ಜನರಲ್ ವೆಲ್‌ಪೆರ್ ಫಂಡ್' ನಿಂದ ನೀಡಿದ ಸಹಾಯಧನ

2012–2013ನೇ ಸಾಲಿನಲ್ಲಿ ಕೆನರಾ ವೆಲ್‌ಫೆರ್ ಟ್ರಸ್ಟು **"General Welfare Fund"** ಎಂಬ ಹೊಸ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಈ ಫಂಡಿಗಾಗಿ ಟ್ರಸ್ಟಿನ ನಿಧಿಯಿಂದ 2012–2013ನೇ ಸಾಲಿನಿಂದ ಪ್ರತಿವರ್ಷ ಒಂದು ಲಕ್ಷ ವರ್ಗಾಯಿಸಲಾಗುತ್ತಿದೆ. ಈ ನಿಧಿಯಿಂದ ಅಸಹಾಯಕರಿಗೆ, ಆರ್ಥಿಕವಾಗಿ ತೀರಾ ಬಡವರಿದ್ದು ವೈದ್ಯಕೀಯ ಖರ್ಚು ನಿರ್ವಹಿಸಲು ಸಾಧ್ಯವಾಗದವರಿಗೆ ಸಹಾಯವನ್ನು ಟ್ರಸ್ಟು ನೀಡುತ್ತ ಬಂದಿದೆ.

2016–2017ನೇ ಸಾಲಿನಲ್ಲಿ ಈ ನಿಧಿಯಿಂದ ಸಹಾಯ ಪಡೆದ ಫಲಾನುಭವಿಗಳು.

| | | |
|---|---|---|
| | **FOR MEDICAL ASSISTANCE** | |
| 1 | Swami Ambikapuri Maharaj, Ramakrishna Ashram, Kolkata – towards medical expenses | Rs. 7,542 |
| 2 | Mr. Sandesh Deshbhandari, student, JV-Dhareshwar – medical expenses | Rs. 10,000 |
| 4 | Ms. Madhu Chintamani, student, English Medium School, Dandeli – for medical expenses | Rs. 10,000 |
| 5 | Ms. Ashrita Naik, Dr. Dinkar Desai Memorial Primary School – for medical expenses | Rs. 5,000 |
| 6 | Mr. Dinkar M Naik, P.M.High School, Ankola – for medical expenses | Rs. 15,000 |
| | **FOR OTHER PURPOSE** | |
| 8 | Smt. Laxmi Madhav Naik, Shirali – to tide over crisis after death of her husband | Rs. 15,000 |
| | **GRAND TOTAL** | **Rs. 62,542** |

**'ಜನರಲ್ ವೆಲ್‌ಪೇರ್ ಫಂಡ್'** ನಿಧಿಗಾಗಿ ದಾನಿಗಳು ಹಣ ನೀಡಿದರೆ ಆ ಹಣವನ್ನು ಈ ಖಾತೆಗೆ ಟ್ರಸ್ಟಿನಲ್ಲಿ ಜಮಾ ಮಾಡಲಾಗುವದು. ಸಂಸ್ಥೆಯ ಮುಖ್ಯಸ್ಥರು ಈ ಯೋಜನೆಗಾಗಿ ಹಣ ಸಂಗ್ರಹಿಸಿದರೆ ನೇರವಾಗಿ ಟ್ರಸ್ಟಿಗೆ ಸಂದಾಯ ಮಾಡಬೇಕು. ಅವರಿಗೆ ಟ್ರಸ್ಟಿನಿಂದ ರಸೀದಿ ನೀಡಲಾಗುವದು. ಈ ದೇಣಿಗೆಗೆ Income Tax benefit under Sec. 80G ಸೌಲಭ್ಯ ಕೂಡಾ ಇದೆ.

# 20.2016–2017ನೇ ಸಾಲಿನಲ್ಲಿ ತಾತ್ಕಾಲಿಕ ಸಿಬ್ಬಂದಿಗಳಿಗೆ ನೀಡಿದ ವೇತನ, ಅಭಿವೃದ್ಧಿ ಕಾರ್ಯಕ್ಕೆ ವಿನಿಯೋಗಿಸಿದ ಹಣ ಇತ್ಯಾದಿಗಳ ವಿವರ

| ಅ. ನಂ. | ಶಾಲೆ/ಕಾಲೇಜಿನ ಹೆಸರು | ಅನುಮೋದಿತ ಸಿಬ್ಬಂದಿಗಳು ಸರಕಾರದಿಂದ ಪಡೆದ ವೇತನ | ತಾತ್ಕಾಲಿಕ ಸಿಬ್ಬಂದಿಗಳಿಗೆ ನೀಡಿದ ವೇತನ | ಕಟ್ಟಡ ನಿರ್ಮಾಣ, ಅಭಿವೃದ್ಧಿ ಕಾರ್ಯಕ್ಕೆ ವಿನಿಯೋಗಿಸಿದ ಹಣ |
|---|---|---|---|---|
| | **DEGREE COLLEGES** | | | |
| 1 | Gokhale Centenary College, Ankola | Rs.2,88,75,939 | Rs.11,74,980 | Rs.4,34,113 |
| 2 | Divekar College of Commerce, Karwar | Rs.1,92,20,592 | Rs.8,58,644 | Rs.74,029 |
| 3 | KWT's College of Education, Dandeli | -- | Rs.12,94,071 | Rs.80,000 |
| 4 | B.C.A. College, Karwar | -- | Rs.8,63,720 | -- |
| 5 | Divekar College PG Centre (M.Com), Karwar | -- | Rs.5,89,250 | -- |
| 6 | G.C.College PG Centre (M.Sc.), Ankola | -- | Rs.4,36,708 | Rs.1,63,741 |
| | **JUNIOR COLLEGES** | | | |
| 7 | Gokhale Centenary PU College, Ankola | Rs.4,77,897 | Rs.11,82,773 | -- |
| 8 | Divekar P.U. Com. College, Karwar | -- | Rs.8,58,644 | Rs.30,000 |
| 9 | J.V.Comp. Jr. College, Dandeli | Rs.12,97,943 | Rs.4,46,481 | -- |
| 10 | J.V.Comp. Jr. College, Kadtoka | Rs.25,54,723 | Rs.1,42,000 | -- |
| 11 | J.V.Comp. Jr. College, Shirali, Bhatkal | Rs.39,97,866 | Rs.6,67,173 | -- |
| 12 | P.M. Comp. Junior College, Ankola | Rs.23,62,315 | Rs.1,03,336 | -- |
| | **HIGH SCHOOLS** | | | |
| 13 | P.M. High School, Ankola | Rs.75,76,903 | Rs.1,55,700 | -- |
| 14 | Janata Vidyalaya, Baad-Kagal, Kumta | Rs.45,75,468 | Rs.1,10,780 | -- |
| 15 | Janata Vidyalaya, Shirali, Bhatkal | Rs.42,69,844 | Rs.71,700 | Rs.40,772 |
| 16 | Janata Vidyalaya, Dandeli | Rs.91,73,982 | Rs.17,44,424 | Rs.2,70,846 |
| 17 | Janata Vidyalaya, Kadwad, Karwar | Rs.21,47,238 | Rs.45,000 | Rs.10,400 |
| 18 | Janata Vidyalaya, Kasarkod, Honnavar | Rs.23,65,242 | Rs.1,58,317 | Rs.3,25,500 |
| 19 | Janata Vidyalaya, Murdeshwar, Bhatkal | Rs.37,34,547 | Rs.3,50,675 | Rs.54,27,832 |
| 20 | Janata Vidyalaya, Mirjan-Kodkani | Rs.51,35,518 | Rs.60,700 | Rs.18,866 |
| 21 | Janata Vidyalaya, Kadtoka | Rs.43,14,732 | Rs.18,650 | Rs.17,69,891 |
| 22 | Janata Vidyalaya, Mudga, Karwar | Rs.36,23,287 | Rs.10,000 | Rs.2,75,143 |
| 23 | Janata Vidyalaya, Dhareshwar, Kumta | Rs.35,36,436 | -- | -- |
| 24 | Janata Vidyalaya, Bedkani, Siddapur | Rs.30,81,246 | Rs.82,500 | Rs.4,21,200 |
| 25 | S.K.P. High School, Katgal, Kumta | Rs.29,20,647 | Rs.1,72,500 | Rs.5,71,306 |
| 26 | Janata Vidyalaya, Anilgod, Honnavar | Rs.20,77,629 | Rs.42,500 | Rs.2,70,000 |
| 27 | Janata Vidyalaya, Kulve-Baroor, Sirsi | Rs.37,83,929 | Rs.34,400 | -- |
| 28 | P.M. Eng. Med. High School, Ankola | -- | Rs.6,52,885 | Rs.48,296 |
| 29 | Dinkar Eng. Med. High School, Dhareshwar | -- | Rs.4,07,825 | Rs.12,95,854 |

| | | | | |
|---|---|---|---|---|
| | **PRIMARY AND PRE-PRIMARY SCHOOLS** | | | |
| 30 | English Medium Primary School, Dandeli | Rs.13,20,923 | Rs.22,70,163 | Rs.6,42,013 |
| 31 | Eng. Med. Pre-Primary School, Dandeli | -- | Rs.6,12,300 | Rs.24,437 |
| 32 | Kannada Medium Primary School, Dandeli | -- | Rs.2,60,002 | -- |
| 33 | Kan. Med. Pre-Primary School, Dandeli | -- | Rs.13,14,317 | Rs.24,789 |
| 34 | Balamandir & Tailoring School, Mundgod | -- | Rs.12,000 | Rs.44,000 |
| 35 | Dr. Dinkar Desai Primary School, Ankola | -- | Rs.12,98,998 | Rs.11,92,693 |
| 36 | ThakkaraBapa Pre-Primary School, Ankola | -- | -- | -- |
| 37 | Dinkar Pre-Primary/Primary School, Dhareshwar | -- | Rs.5,68,070 | -- |
| 38 | Balamandir, Shirali | -- | Rs.3,51,000 | Rs.67,995 |
| | **OTHER SOCIAL SERVICE INSTITUTIONS** | | | |
| 39 | Dinkar Kalaniketan, Karwar & Ankola | -- | Rs.2,34,000 | Rs.35,800 |
| 40 | Thakkar Bapa Tailoring School, Ankola | -- | Rs.20,000 | -- |
| 41 | Trust Office Staff | -- | Rs.7,47,150 | -- |
| | **GRAND TOTAL** | **Rs.12,24,24,846** | **Rs.2,04,24,336** | **Rs.1,35,59,516** |

ಅನುದಾನಿತ ಶಾಲಾ/ಕಾಲೇಜುಗಳ ಸಿಬ್ಬಂದಿಗಳಿಗೆ ಸರಕಾರ 2016–2017ನೇ ಸಾಲಿನಲ್ಲಿ ಒಟ್ಟು ರೂ.12,24,24846 ಅನುದಾನದ ರೂಪದಲ್ಲಿ ವೇತನಕ್ಕಾಗಿ ಹಣ ನೀಡಿದೆ. ಆಡಳಿತ ಮಂಡಳಿ ತಾತ್ಕಾಲಿಕ ಸಿಬ್ಬಂದಿಗಳಿಗೆ ವೇತನಕ್ಕಾಗಿ ನೀಡಿದ ಮೊತ್ತ ರೂ.2,04,24,336 ಒಟ್ಟು ಸಿಬ್ಬಂದಿಗಳ ವೇತನಕ್ಕಾಗಿ ಸರಕಾರ ಹಾಗೂ ಆಡಳಿತ ಮಂಡಳಿ ನೀಡಿದ ಹಣ **ರೂ.14,28,49,182/–.**

## ತಾತ್ಕಾಲಿಕವಾಗಿ ಸೇವೆ ಸಲ್ಲಿಸುವವರ ಭವಿಷ್ಯ ನಿಧಿ


2016–2017ನೇ ಸಾಲಿನಲ್ಲಿ ಟ್ರಸ್ಟು ನಡೆಸುತ್ತಿರುವ ವಿವಿಧ ಶಾಲಾ ಕಾಲೇಜುಗಳಲ್ಲಿ ಹಾಗೂ ಟ್ರಸ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅನುದಾನ ರಹಿತ ಸಿಬ್ಬಂದಿಗಳಿಗೆ ಸರ್ಕಾರದ ನಿಯಮದಂತೆ ಶೇಕಡಾ 12% ರಂತೆ ಭವಿಷ್ಯ ನಿಧಿಯನ್ನು ತುಂಬಲಾಗಿದೆ. ಅದರ ವಿವರ ಈ ಕೆಳಗಿನಂತೆ ಇದೆ.

| | | |
|---|---|---|
| 1 | **ಸಿಬ್ಬಂದಿಗಳ ಭವಿಷ್ಯ ನಿಧಿ ವಂತಿಗೆ ಶೇಕಡಾ 12%** | Rs. 10,43,261 |
| 2 | **ಟ್ರಸ್ಟಿನಿಂದ ಹಾಗೂ ಆಡಳಿತ ಮಂಡಳಿ ಖಾತೆಯಿಂದ ಪಾವತಿಸಿದ ಭವಿಷ್ಯ ನಿಧಿ ವಂತಿಗೆ 12% + 1.58% = 13.58%** *(ಸರ್ವಿಸ್ ಹಾಗೂ ಇನ್ನಿತರ ವಂತಿಗೆ 1.58%)* | Rs. 11,68,836 |
| | **ಒಟ್ಟು** | **Rs.22,12,097** |

2016–2017ನೇ ಸಾಲಿನಲ್ಲಿ ತಾತ್ಕಾಲಿಕ ಸಿಬ್ಬಂದಿಗಳ ವೇತನಕ್ಕಾಗಿ, ಶಾಲಾ–ಕಾಲೇಜುಗಳ ನಿರ್ವಹಣಾ ವೆಚ್ಚಕ್ಕಾಗಿ, ಭವಿಷ್ಯನಿದಿ ವಂತಿಗೆಗೆ, ಅಭಿವೃದ್ಧಿ ಕಾರ್ಯಗಳಿಗೆ, ಕ್ರೂಗರ ಫೌಂಢೇಶನ್‌ನಿಂದ ತಾತ್ಕಾಲಿಕ ಸಿಬ್ಬಂದಿಗಳಿಗೆ ನೀಡಿದ Ex-gratia ಹಣ ಹಾಗೂ ಇನ್ನಿತರ ವೆಚ್ಚಕ್ಕಾಗಿ ನೀಡಿದ ಒಟ್ಟೂ ಹಣದ ವಿವರ ಈ ಕೆಳಗಿನಂತಿದೆ.

## ABSTRACT OF EXPENDITURE

| PARTICULARS | | AMOUNT |
|---|---|---|
| I | Salary of unaided staff | Rs.2,04,24,336 |
| II | Developmental work undertaken | Rs.1,35,59,516 |
| III | Contribution towards Provident Fund | Rs.11,68,836 |
| IV | Ex-gratia assistance from Kruger Foundation | Rs.6,88,500 |
| V | Desks & Benches supplied to Institutions | Rs.2,13,611 |
| VI | Maintenance Fund for Schools & Colleges | Rs.2,10,000 |
| VII | General Welfare Fund Legal Fees, Audit Fees, etc. | Rs.1,07,038 |
| | GRAND TOTAL | Rs.3,63,71,837 |
| *(Rupees Three Crore Sixty Three Lakh Seventy One Thousand Eight Hundred Thirty Seven)* | | |




**Amount Spent for Various Purposes during 2016-2017**

2017–2018ನೇ ಸಾಲಿನಲ್ಲಿಯೂ ಕೂಡಾ ಸಂಸ್ಥೆಯ ಎಲ್ಲ ಮುಖ್ಯಸ್ಥರು ಹಾಗೂ ಸಿಬ್ಬಂದಿಗಳು ಹೆಚ್ಚಿನ ಪ್ರಯತ್ನ ಮಾಡಿ ವಿಶೇಷ ನಿಧಿಯನ್ನು ಸಂಗ್ರಹಿಸಿ ಇನ್ನೂ ಹೆಚ್ಚಿನ ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಂಡು, ಟ್ರಸ್ಟು ಒಂದು ಮಾದರಿ ಸಂಸ್ಥೆಯಾಗಿ ರಾಜ್ಯದಲ್ಲಿ ಹೆಸರು ಗಳಿಸುವಂತೆ ಕಾರ್ಯ ನಿರ್ವಹಿಸಲಿ ಎಂದು ಆಶಿಸುತ್ತೇನೆ.

## 21.ಶಿಕ್ಷಣಕ್ಕಾಗಿ ಆರ್ಥಿಕ ನೆರವು (2012–13ನೇ ಸಾಲಿನಿಂದ ಪ್ರಾರಂಭವಾದ ಹೊಸ ಯೋಜನೆ)

ಆರ್ಥಿಕ ಕಾರಣಗಳಿಂದ ಬಡ ಹಾಗೂ ಅರ್ಹ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಬಾರದೆಂಬ ಕಾರಣದಿಂದ "ಶಿಕ್ಷಣಕ್ಕಾಗಿ ಆರ್ಥಿಕ ನೆರವು" ಎಂಬ ಯೋಜನೆ 2012–2013ನೇ ಸಾಲಿನಿಂದ ಪ್ರಾರಂಭಗೊಂಡಿದೆ. ಈ ಯೋಜನೆಯ ಪ್ರಾಯೋಜಕತ್ವವನ್ನು ಕ್ರುಗರ್ ಫೌಂಡೇಶನ್, ಕಾರವಾರ, ಹಾಗೂ ಉಚ್ಚ ನ್ಯಾಯಾಲಯದ ನ್ಯಾಯವಾದಿಗಳಾದ ಶ್ರೀ ದೇವದತ್ತ ಕಾಮತರವರು ವಹಿಸಿಕೊಂಡಿದ್ದಾರೆ. ಈ ಮಹತ್ವದ ಯೋಜನೆಯನ್ನು ಟ್ರಸ್ಟು ಕಾರ್ಯಗತಗೊಳಿಸುತ್ತಿದೆ.

### 2012–2013 ರಿಂದ 2016–2017ರ ವರೆಗೆ ಈ ಯೋಜನೆಯ ಅಡಿಯಲ್ಲಿ ಪ್ರಯೋಜನ ಪಡೆದ ಫಲಾನುಭವಿಗಳು

| Year | No. of Students | Percentage cut offs for fresh award | | Scholarship Amount Distributed |
|---|---|---|---|---|
| | | SSLC - Max-Min % | PU - Max-Min % | |
| 2012-2013 | 279 | 97.92 - 89.44 | 96.33 – 79.50 | Rs.8,37,000 |
| 2013-2014 | 500 | 96.96 – 87.68 | 95.83 – 84.00 | Rs.15,00,000 |
| 2014-2015 | 576 | 98.40 – 91.20 | 97.00 – 87.67 | Rs.17,28,000 |
| 2015-2016 | 406 | 95.83 – 89.00 | 98.17 – 85 .20 | Rs.12,18,000 |
| 2016-2017 | 479 | 99.20 – 83.33 | 97.33 – 80.00 | Rs.14,44,000 |
| **TOTAL** | **2240** | | | **Rs.67,27,000** |

2016–2017ನೇ ಸಾಲಿನಲ್ಲಿ ಶಿಕ್ಷಣಕ್ಕಾಗಿ ಆರ್ಥಿಕ ನೆರವನ್ನು ದಿನಾಂಕ 12 ನವೆಂಬರ್ 2016 ರಂದು ಗೋಖಲೆ ಸೆಂಟಿನರಿ ಕಾಲೇಜಿನಲ್ಲಿ ಏರ್ಪಡಿಸಿದ ಸಮಾರಂಭದಲ್ಲಿ ಒಟ್ಟು 479 ವಿದ್ಯಾರ್ಥಿಗಳಿಗೆ ಪ್ರಾಯೋಜಕರಾದ ಶ್ರೀ ದೇವದತ್ತ ಕಾಮತರವರು ನೀಡಿದರು. ಈ ಸಮಾರಂಭದಲ್ಲಿ **Ms. Swati Maliwal**, Chairperson, Delhi Commission for Women, ಇವರು ಮುಖ್ಯ ಅತಿಥಿಯರಾಗಿ ಭಾಗವಹಿಸಿದ್ದರು. ಟ್ರಸ್ಟಿನ ಹಾಗೂ ಕ್ರೂಗರ್ ಫೌಂಡೇಶನದ ಅಧ್ಯಕ್ಷರಾದ ಶ್ರೀ ಎಸ್.ಪಿ.ಕಾಮತರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಇದುವರೆಗೆ 2240 ಪ್ರತಿಭಾವಂತ ಅರ್ಹ ಬಡ ವಿದ್ಯಾರ್ಥಿಗಳಿಗೆ ಒಟ್ಟೂ ರೂ.67,27,000 ಸ್ಕಾಲರಶಿಪ್ ನೀಡಲಾಗಿದೆ.







2017–2018ನೇ ಸಾಲಿನಲ್ಲಿಯೂ ಪ್ರಾಯೋಜಕರು ಈ ಯೋಜನೆಯನ್ನು ಮುಂದುವರೆಸಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಪ್ರಾಯೋಜಕರಿಗೂ ಹಾಗೂ ಆಯ್ಕೆ ಮಾಡುವ ಪರಿಶೀಲನಾ ಸಮಿತಿಯವರಿಗೂ ಹಾಗೂ ಎಲ್ಲ ಸಂಘಟಕರಿಗೂ ಹೃತ್ಪೂರ್ವಕ ಅಭಿನಂದನೆ ಸಲ್ಲಿಸುತ್ತೇನೆ.

## 22. Mobile Health Care Project - ಆರೋಗ್ಯ ತಪಾಸಣೆ ಮತ್ತು ಔಷದೋಪಚಾರ ಶಿಬಿರ

2013ನೇ ಸಾಲಿನಿಂದ ಜಿಲ್ಲೆಯ ವಿವಿಧ ಗ್ರಾಮೀಣ ಭಾಗದಲ್ಲಿ ನುರಿತ ತಜ್ಞ ವೈದ್ಯರಿಂದ ಆರೋಗ್ಯ ತಪಾಸಣಾ ಶಿಬಿರಗಳನ್ನು ಏರ್ಪಡಿಸಿ ಅರ್ಹ ಫಲಾನುಭವಿಗಳಿಗೆ ಉಚಿತ ಔಷದವನ್ನು ನೀಡುವ ಹೊಸ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಈ ಯೋಜನೆಯ ಪೂರ್ಣ ವೆಚ್ಚವನ್ನು ಕ್ರುಗರ್ ಫೌಂಡೇಶನ್, ಕಾರವಾರ ಹಾಗೂ ಸುಪ್ರೀಮ್ ಕೋರ್ಟಿನ ಯುವ ನ್ಯಾಯವಾದಿಗಳಾದ ಶ್ರೀ ದೇವದತ್ತ ಕಾಮತರವರು ಪ್ರಾಯೋಜಕರಾಗಿ ಭರಿಸುತ್ತಿದ್ದಾರೆ. ಇದುವರೆಗೆ ನಡೆದ ಶಿಬಿರಗಳ ವಿವರ ಈ ಕೆಳಗಿನಂತಿದೆ.

| Date of Camp | Camp conducted at | No. of Patients treated | Medicines & Camp Expenditure |
|---|---|---|---|
| 16 June 2013 | Basgod | 272 | Rs. 1,00,662 |
| 29 Sept. 2013 | Dhareshwar | 320 | Rs. 80,876 |
| 15 Nov. 2014 | Baad-Kagal | 342 | Rs. 99,840 |
| 08 Nov. 2015 | Kulve-Baroor | 395 | Rs. 71,732 |
| | **Total** | **1329** | **Rs. 3,53,110** |


ಪ್ರಾಯೋಜಕರು ಈ ಯೋಜನೆಯನ್ನು ಈ ವರ್ಷವೂ ಮುಂದುವರಿಸುತ್ತಾರೆ. ಈ ಯೋಜನೆಯಲ್ಲಿ ಪಾಲ್ಗೊಂಡ ಎಲ್ಲ ವೈದ್ಯರುಗಳಿಗೆ, ಪ್ರಾಯೋಜಕರಾದ ಶ್ರೀ ಎಸ್.ಪಿ.ಕಾಮತ, ಅಧ್ಯಕ್ಷರು, ಕ್ರುಗರ್ ಫೌಂಡೇಶನ್, ಕಾರವಾರ, ಮತ್ತು ಶ್ರೀ ದೇವದತ್ತ ಕಾಮತರಿಗೆ ಹಾಗೂ ಎಲ್ಲ ಸಂಘಟಕರಿಗೆ ಹೃತ್ಪೂರ್ವಕವಾಗಿ ಟ್ರಸ್ಟಿನ ಪರವಾಗಿ ಅಭಿನಂದಿಸುತ್ತೇನೆ.

## 23. P.S.Kamat Memorial District Level Inter-Collegiate Debate Competition - ಪಿ.ಎಸ್.ಕಾಮತ ಸ್ಮರಣಾರ್ಥ ಜಿಲ್ಲಾ ಮಟ್ಟದ ಅಂತರ ಕಾಲೇಜು ಚರ್ಚಾ ಸ್ಪರ್ಧೆ

ವಿದ್ಯಾರ್ಥಿಗಳಲ್ಲಿ, ಯುವಕರಲ್ಲಿ, ಸಾಮಾಜಿಕ, ಆರ್ಥಿಕ, ರಾಜಕೀಯ ಸಮಸ್ಯೆಗಳ ಕುರಿತು ಜಾಗ್ರತೆ ಮೂಡಿಸಿ ಅದರ ವಿರುದ್ಧ ಹೋರಾಟ ಮಾಡುವ ಶಕ್ತಿ ಬರಬೇಕು. ತಮ್ಮ ನಾಯಕತ್ವವನ್ನು ಬೆಳೆಸಿಕೊಳ್ಳುವ ಛಲ ಅವರಲ್ಲಿ ಮೂಡಬೇಕು ಎನ್ನುವ ಉದ್ದೇಶವನ್ನು ಇಟ್ಟುಕೊಂಡು "ಜಿಲ್ಲಾ ಮಟ್ಟದ ಅಂತರ ಕಾಲೇಜು ಚರ್ಚಾ ಸ್ಪರ್ಧೆ"ಯನ್ನು ಸುಪ್ರೀಮ್ ಕೋರ್ಟಿನ ಯುವ ನ್ಯಾಯವಾದಿಗಳಾದ ಶ್ರೀ ದೇವದತ್ತ ಕಾಮತರವರು ತಮ್ಮ ಅಜ್ಜ ದಿ॥ ಪಿ.ಎಸ್.ಕಾಮತರವರ

ಸ್ಮರ್ಣಾರ್ಥ 2011–2012ನೇ ಸಾಲಿನಿಂದ ಪ್ರಾರಂಭಿಸಿದರು. ಈ ಜಿಲ್ಲಾ ಮಟ್ಟದ ಚರ್ಚಾ ಸ್ಪರ್ಧೆ ಮೂರು ಹಂತದಲ್ಲಿ ನಡೆಸಲಾಗುತ್ತಿದೆ. (1) ಕಾಲೇಜು ಮಟ್ಟದಲ್ಲಿ, (2) ತಾಲೂಕಾ ಮಟ್ಟದಲ್ಲಿ ಮತ್ತು (3) ಜಿಲ್ಲಾ ಮಟ್ಟದಲ್ಲಿ. ಈ ಮೂರು ಹಂತದಲ್ಲಿ ಜಯಶಾಲಿ ಆದವರಿಗೆ ಬಹುಮಾನ ನೀಡಲಾಗುತ್ತಿದೆ. ಜಿಲ್ಲಾ ಮಟ್ಟದ ಅಂತಿಮ ಸ್ಪರ್ಧೆಗಳಲ್ಲಿ ಮೊದಲನೆ ಸ್ಥಾನ ಪಡೆದವರಿಗೆ ರೂ.50,000/–, ದ್ವಿತೀಯ ಸ್ಥಾನ ಪಡೆದವರಿಗೆ ರೂ.30,000/–, ತೃತೀಯ ಸ್ಥಾನ ಪಡೆದವರಿಗೆ ರೂ.20,000/– ಹಾಗೂ 4 ಮತ್ತು 5ನೇ ಸ್ಥಾನ ಪಡೆದವರಿಗೆ ತಲಾ ರೂ.5,000/– ನೀಡಲಾಗುತ್ತಿದೆ. ಇದರ ಹೊರತಾಗಿ ಅಂತಿಮ ಸುತ್ತಿನಲ್ಲಿ ಭಾಗವಹಿಸುವ ಎಲ್ಲ ಸ್ಪರ್ಧಾಳುಗಳಿಗೆ ಆಕರ್ಷಕ ಇತರೇ ಬಹುಮಾನ ನೀಡಲಾಗುತ್ತಿದೆ.

## 2011–2012 ರಿಂದ ನಡೆದ ಕಾರ್ಯಕ್ರಮದ ವಿವರ

| Year & Date | Topic for the Debate | Place of Final Event | Chief Guests at the Event | Expenditure incurred |
|---|---|---|---|---|
| 18th Feb. 2012 | **The Proposed Anti-Corruption Laws / Enactments will Eliminate Corruption in India** | Divekar College, Karwar | **Shri Vivek Tankha,** Additional Solicitor General of India, New Delhi | **Rs. 4,89,300** |
| 8th & 9th Jan. 2013 | **Indian Parliamentary Democracy is a Success Story** | G.C.College, Ankola | **Prof. G.V.Bhat,** Trustee, Kanara Welfare Trust | **Rs. 5,25,000** |
| 4th & 5th Jan. 2014 | **Indian Culture and Law have ensured Liberty, Equality, Safety and Dignity of Women** | Divekar College, Karwar | **Smt. Indira Jaising,** Additional Solicitor General of India, New Delhi | **Rs. 4,93,977** |
| 23rd & 24th Jan. 2015 | **In the present context in India, Reservation in Education and Employment requires to be done away with** | G.C.College, Ankola | **H.E. Mr. Idriss Raoua OUEDRAOGO,** Ambassador Extraordinary and Plenipotentiary of Burkina Faso, Burkinese Embassy, New Delhi | **Rs. 4,68,572** |
| 13th & 14th Feb. 2016 | **World Peace is an achievable reality and not an illusion** | Divekar College, Karwar | **Mr. Christian Kruger,** Chairman, Krüger Holding AG and Krüger & Co. AG., Switzerland **Ms. Lee Jihyun Julianne,** Founder & CEO of JulianneLee & Co., South Korea | **Rs. 4,49,766** |
| 27th & 28th Jan. 2017 | **Solution to Kashmir problem lies in integrating POK [Pakistan Occupied Kashmir] with rest of India** | G.C.College, Ankola | **Shri Maneesh Chhibber,** Chief of Bureau & Legal Editor, The Indian Express, New Delhi | **Rs.3,82,053** |
| | | | **Total** | **Rs.28,08,668** |







7ನೇ ಜಿಲ್ಲಾ ಮಟ್ಟದ ಅಂತರ್–ಕಾಲೇಜು ಚರ್ಚಾ ಸ್ಪರ್ಧೆ ಇದೇ ಶೈಕ್ಷಣಿಕ ವರ್ಷದ ಡಿಸೆಂಬರ್/ಜನವರಿ ತಿಂಗಳಲ್ಲಿ ನಡೆಸಲು ಪ್ರಾಯೋಜಕರು ತಿರ್ಮಾನಿಸಿದ್ದಾರೆ. ಈ ಕಾರ್ಯಕ್ರಮದ ಪ್ರಾಯೋಜಕರಾದ ಶ್ರೀ ದೇವದತ್ತ ಕಾಮತರವರಿಗೆ ಹಾಗೂ ಸಂಘಟಕರಿಗೆಲ್ಲರಿಗೂ ನಾನು ಟ್ರಸ್ಟಿನ ಪರವಾಗಿ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

## 24.Project Change Makers for a Better Tomorrow (ಉತ್ತಮ ನಾಳೆಗಾಗಿ ಪರಿವರ್ತನಾಗಾರರು)

ಈ ಯೋಜನೆ 2008 ರಿಂದ ಪ್ರಾರಂಭಿಸಲಾಗಿದೆ. 3 ವರ್ಷದ ಕಾಲಾವಧಿಯಲ್ಲಿ ಹೈಸ್ಕೂಲಿನ 8ನೇ ತರಗತಿಯಲ್ಲಿ ಓದುವ ಜಿಲ್ಲೆಯ ಉತ್ತಮ ಮಕ್ಕಳನ್ನು ಆಯ್ಕೆ ಮಾಡಿ ಪ್ರತಿ 3 ತಿಂಗಳಿಗೊಮ್ಮೆ ಉತ್ತಮ ಸಂಸ್ಕಾರ ನೀಡುವ ತರಬೇತಿಯನ್ನು ವಿಷಯ ತಜ್ಞರಿಂದ ನೀಡಲಾಗುತ್ತಿದೆ. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳಿಗೆ ರೂ.500/– 3 ವರ್ಷಗಳ ಕಾಲ ಅವರ ಖಾತೆಗೆ ಒಟ್ಟು ರೂ.18,000/– online ಮೂಲಕ ಸಹಾಯಧನವಾಗಿ ಜಮಾ ಮಾಡಲಾಗುತ್ತಿದೆ. ಇದುವರೆಗೆ 3 ವರ್ಷದ 3 ಬ್ಯಾಚ್‌ಗಳು ಮುಗಿದಿದ್ದು, 4ನೇ ಬ್ಯಾಚ್ ಪ್ರಾರಂಭವಾಗಿದೆ.





**ಮೊದಲನೇಯ ಬ್ಯಾಚ್** 29 ಸೆಪ್ಟೆಂಬರ್ 2008 ರಿಂದ ಪ್ರಾರಂಭವಾಗಿ 22 ಎಪ್ರಿಲ್ 2010 ರಂದು ಮುಕ್ತಾಯವಾಗಿದೆ. ಮೊದಲನೇ ಯೋಜನೆಗೆ ಒಟ್ಟೂ ರೂ.20,25,000/– ಖರ್ಚಾಗಿದೆ. ಪ್ರಥಮ ಯೋಜನೆಯಲ್ಲಿ 8 ಶಿಬಿರಗಳನ್ನು ಏರ್ಪಡಿಸಲಾಗಿದ್ದು, ಒಟ್ಟು 125 ವಿದ್ಯಾರ್ಥಿಗಳ ಪ್ರಯೋಜನ ಪಡೆದಿದ್ದಾರೆ.

**ಎರಡನೇಯ ಬ್ಯಾಚ್** 15 ಸೆಪ್ಟೆಂಬರ್ 2010 ರಿಂದ ಪ್ರಾರಂಭವಾಗಿ 18 ಜುಲೈ 2013 ರಂದು ಮುಕ್ತಾಯವಾಗಿದೆ. ಜಿಲ್ಲೆಯ ಒಟ್ಟು 50 ವಿದ್ಯಾರ್ಥಿಗಳು ಪ್ರಯೋಜನ ಪಡೆದಿದ್ದು, 10 ಶಿಬಿರಗಳನ್ನು ಏರ್ಪಡಿಸಲಾಗಿದೆ. ಎರಡನೇಯ ಯೋಜನೆಯಡಿ ಒಟ್ಟು ರೂ.12,64,327/– ಖರ್ಚಾಗಿದೆ.

**ಮೂರನೇಯ ಬ್ಯಾಚ್** 03 ಸೆಪ್ಟೆಂಬರ್ 2013 ರಿಂದ ಪ್ರಾರಂಭವಾಗಿ ಜೂನ್ 14, 2016ರಂದು ಮುಕ್ತಾಯವಾಗಿದೆ. ಜಿಲ್ಲೆಯ ಒಟ್ಟು 60 ವಿದ್ಯಾರ್ಥಿಗಳು ಈ ಯೋಜನೆಯ ಪ್ರಯೋಜನ ಪಡೆದಿದ್ದು, ಇದುವರೆಗೆ ಒಟ್ಟು 10 ಶಿಬಿರಗಳನ್ನು ಏರ್ಪಡಿಸಲಾಗಿದೆ. ಮೂರನೇಯ ಬ್ಯಾಚಿಗೆ ಒಟ್ಟೂ ಖರ್ಚು ರೂ.16,20,995/– ಆಗಿರುತ್ತದೆ.

**ನಾಲ್ಕನೇಯ ಬ್ಯಾಚ್** – ಈ ಯೋಜನೆಯ ಅಡಿಯಲ್ಲಿ 4ನೇ ಬ್ಯಾಚಿನ ಆಯ್ಕೆಯ ಪ್ರಕ್ರಿಯೆಯನ್ನು ಅಗಷ್ಟ 2016ರಲ್ಲಿ ಪ್ರಾರಂಭಿಸಲಾಯಿತು. ಉತ್ತರ ಕನ್ನಡ ಜಿಲ್ಲೆಯ 85 ಮಾದ್ಯಮಿಕ ಶಾಲೆಗಳ ಮುಖ್ಯಾಧ್ಯಾಪಕರಿಂದ ಒಟ್ಟೂ 255 ವಿದ್ಯಾರ್ಥಿಗಳ ಹೆಸರು ಆಯ್ಕೆಗಾಗಿ ಶಿಫಾರಸು ಮಾಡಿ ಪತ್ರ ಬರೆದಿರುತ್ತಾರೆ. ಈ ಎಲ್ಲ ಅಭ್ಯರ್ಥಿಗಳಿಗೆ ಜಿಲ್ಲೆಯ 8 ಕೇಂದ್ರಗಳಲ್ಲಿ ಪ್ರಥಮ ಸುತ್ತಿನ ಅರ್ಹತಾ ಪರೀಕ್ಷೆಯನ್ನು ನಡೆಸಿ, ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಜಿಲ್ಲೆಯ ಒಟ್ಟೂ 100 ವಿದ್ಯಾರ್ಥಿಗಳನ್ನು ಅಂತಿಮ ಆಯ್ಕೆಗಾಗಿ ಕಾರವಾರದ ಬಾಲಮಂದಿರ ಸಭಾಭವನದಲ್ಲಿ ಮಾನ್ಯ ಶ್ರೀ ಎಸ್.ಪಿ.ಕಾಮತರ ಅಧ್ಯಕ್ಷತೆಯಲ್ಲಿ ದಿನಾಂಕ 17 ಸಪ್ಟೆಂಬರ್ 2016ರಂದು ಸಂದರ್ಶನಕ್ಕೆ ಕರೆಯಲಾಯಿತು. 10 ಜನ ತಜ್ಞರ ಸಮಿತಿ ವತಿಯಿಂದ ಎಲ್ಲ ಅಭ್ಯರ್ಥಿಗಳಿಗೆ ಸಂದರ್ಶನ ನಡೇಸಿ 64 ಅಭ್ಯರ್ಥಿಗಳ ಅಂತಿಮ ಆಯ್ಕೆ ಮಾಡಲಾಯಿತು.

ಉತ್ತಮ ನಾಳೆಗಾಗಿ ಪರಿವರ್ತನಾಕಾರರ ತಂಡಕ್ಕೆ ಆಯ್ಕೆಯಾದ 64 ಅಭ್ಯರ್ಥಿಗಳಿಗೆ ನವಂಬರ 6 ರಿಂದ 8ರವರೆಗೆ ಮೂರು ದಿವಸಗಳ ಕಾಲ ತರಬೇತಿ ಶಿಬಿರವನ್ನು ಅಂಕೋಲೆಯ ಗೋಖಲೆ ಸೆಂಟಿನರಿ ಕಾಲೇಜಿನಲ್ಲಿ ಏರ್ಪಡಿಸಲಾಯಿತು. 2ನೇ ಶಿಬಿರವನ್ನು ಯಲ್ಲಾಪುರದ ನಿಸರ್ಗ ಮನೆಯಲ್ಲಿ ಮೇ 5 ರಿಂದ 7ರವರೆಗೆ ನಡೆಸಲಾಯಿತು.

ನಾಲ್ಕನೇ ತಂಡದ ಆಯ್ಕೆ ಹಾಗೂ ಶಿಬಿರಗಳಿಗೆ ಖರ್ಚಾದ ವಿವರ ಈ ಕೆಳಗಿನಂತೆ ಇದೆ.

| | | | |
|---|---|---|---|
| 1 | Selection process expenditure | Rs. | 40,548 |
| 2 | First Camp expenditure<br>*(including utensils supplied to the CMG members)* | Rs. | 64,721 |
| 3 | Second Camp expenditure | Rs. | 94,378 |
| 4 | Incentive amount paid *(Sept. 2016 to Mar. 2017)* | Rs. | 2,37,000 |
| | **Total** | **Rs.** | **4,36,647** |

ಸಪ್ಟೆಂಬರ್ 2008 ರಿಂದ ಜೂನ್ 2016ರ ವರೆಗೆ 3 ಬ್ಯಾಚುಗಳಲ್ಲಿ ಜಿಲ್ಲೆಯ ಒಟ್ಟು 237 ವಿದ್ಯಾರ್ಥಿಗಳು ಪ್ರಯೋಜನವನ್ನು ಪಡೆದಿರುತ್ತಾರೆ. 4ನೇ ಬ್ಯಾಚಿನಲ್ಲಿ 64 ವಿದ್ಯಾರ್ಥಿಗಳು ಪ್ರಯೋಜನ ಪಡೆಯುತ್ತಿದ್ದಾರೆ. ಈ ಯೋಜನೆಯ ಪ್ರಾಯೋಜಕತ್ವವನ್ನು ಕ್ರೂಗರ್ ಫೌಂಡೇಶನ್, ಕಾರವಾರ, ಮಾಡುತ್ತಿದ್ದು, ಯೋಜನೆಯನ್ನು ಟ್ರಸ್ಟು ಕಾರ್ಯಗತಗೊಳಿಸುತ್ತಿದೆ. ಇದುವರೆಗೆ ಈ ಯೋಜನೆಗೆ ಒಟ್ಟು ರೂ.53,46,969/– ಖರ್ಚು ಮಾಡಲಾಗಿದೆ.

ಈ ಶಿಬಿರಗಳನ್ನು ನಡೆಸಲು ಸಹಕಾರ ನೀಡಿದ ಎಲ್ಲರಿಗೆ ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಎಲ್ಲರಿಗೆ ಹಾಗೂ ಕ್ರೂಗರ ಫೌಂಡೇಶನ ಮತ್ತು ಟ್ರಸ್ಟಿನ ಅಧ್ಯಕ್ಷರಿಗೆ ಹೃತ್ಪೂರ್ವಕ ಅಭಿನಂದನೆ ಸಲ್ಲಿಸುತ್ತೇನೆ.

## 25.ದಿ. ಗಣಪತಿ ಅಣ್ಣಪ್ಪಯ್ಯ ಪೈ ಸ್ಮರಣಾರ್ಥ ಸಂಸ್ಕೃತ ಸೌರಭ ಕಾರ್ಯಕ್ರಮ

ದಿ. ಗಣಪತಿ ಅಣ್ಣಪ್ಪಯ್ಯ ಪೈ ಸ್ಮರಣಾರ್ಥ ಮಾನ್ಯ ಅಧ್ಯಕ್ಷರ ಸಲಹೆಯಂತೆ ಸಂಸ್ಕೃತ ಸೌರಭ ಕಾರ್ಯಕ್ರಮ 2013–2014 ರಿಂದ ಟ್ರಸ್ಟಿನ ವಿವಿಧ ಕೇಂದ್ರಗಳಲ್ಲಿ ನಡೆಸಲಾಗುತ್ತಿದೆ.

ಪ್ರಥಮ ಕಾರ್ಯಕ್ರಮವನ್ನು ದಿನಾಂಕ 6 ಡಿಸೆಂಬರ್ 2013 ರಂದು ಪಿ.ಎಂ.ಜ್ಯೂನಿಯರ್ ಕಾಲೇಜ್, ಅಂಕೋಲಾದಲ್ಲಿ ಭಗ್ವದ್ಗೀತಾ ಕಂಠ ಪಾಠ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು ಒಟ್ಟು 41 ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿಜೇತರಿಗೆ ಬಹುಮಾನ ನೀಡಲಾಯಿತು.

ಎರಡನೇಯ ಕಾರ್ಯಕ್ರಮವು ದಿನಾಂಕ 12 ಡಿಸೆಂಬರ್ 2014 ರಂದು ಜನತಾ ವಿದ್ಯಾಲಯ, ಮಿರ್ಜಾನ ಶಾಲೆಯಲ್ಲಿ ನಡೆಸಲಾಯಿತು. ಕಾಳಿದಾಸರ ಕುರಿತು ಡಾ. ಎಸ್.ಎನ್.ಭಟ್ಟರವರು ವಿದ್ವತ್ ಪೂರ್ಣ ಭಾಷಣ ಮಾಡಿದರು. ಶಾಲೆಯಲ್ಲಿ ಸಂಸ್ಕೃತ ಅಭ್ಯಾಸ ಮಾಡುವ ಎಲ್ಲ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲಾಯಿತು.

ಮೂರನೇ ಕಾರ್ಯಕ್ರಮವು ದಿನಾಂಕ 05–12–2015ರಂದು ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜು, ಕಡತೋಕಾದಲ್ಲಿ ಆಯೋಜಿಸಲಾಗಿತ್ತು. ಭಗ್ವತ್‌ಗೀತಾ ಕಂಠಪಾಠ, ಭಾಷಣ ಸ್ಪರ್ಧೆ ಹಾಗೂ ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿತ್ತು. ಅದರಲ್ಲಿ ಒಟ್ಟೂ 50 ವಿದ್ಯಾರ್ಥಿಗಳು ಭಾಗವಹಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಸದಾಶಿವ ಶಾಸ್ತ್ರಿ, ಕೋಸಳ್ಳಿ ಇವರು ಭಾಗವಹಿಸಿದ್ದರು. ವಿಜೇತರಿಗೆ ಬಹುಮಾನ ನೀಡಲಾಯಿತು.

ನಾಲ್ಕನೇ ಕಾರ್ಯಕ್ರಮವು ದಿನಾಂಕ 10–12–2016ರಂದು ಎಸ್.ಕೆ.ಪಿ.ಹೈ ಸ್ಕೂಲ, ಕತಗಾಲದಲ್ಲಿ ಆಯೋಜಿಸಲಾಗಿತ್ತು. ಭಗ್ವತ್‌ಗೀತಾ ಕಂಠಪಾಠ, ಭಾಷಣ ಸ್ಪರ್ಧೆ ಹಾಗೂ ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿತ್ತು. ಅದರಲ್ಲಿ ಸುಮಾರು 100 ವಿದ್ಯಾರ್ಥಿಗಳು ಭಾಗವಹಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ವಿವೇಕ ಎಂ.ಜಾಲಿಸತ್ಗಿ ಹಾಗೂ ವಿಶೇಷ ಉಪನ್ಯಾಸಕರಾಗಿ ಡಾ. ಕೆ.ಗಣಪತಿ ಭಟ್ಟ ಅವರು ಭಾಗವಹಿಸಿದ್ದರು. ವಿಜೇತರಿಗೆ ಬಹುಮಾನ ನೀಡಲಾಯಿತು.






ಈ ಕಾರ್ಯಕ್ರಮ ಆಯೋಜಿಸುವಂತೆ ಟ್ರಸ್ಟಿನ ಅಧ್ಯಕ್ಷರಾದ ಶ್ರೀ ಎಸ್.ಪಿ.ಕಾಮತರವರು ಸಲಹೆ ನೀಡಿದ್ದಲ್ಲದೆ ಪ್ರತಿವರ್ಷ ಜಿಲ್ಲೆಯ ಉಳಿದ ತಾಲೂಕುಗಳಲ್ಲಿ ನಡೆಸುವಂತೆ ತಿಳಿಸಿ ಪ್ರೋತ್ಸಾಹಿಸಿರುತ್ತಾರೆ ಅವರಿಗೂ ಅಭಿನಂದನೆ ಸಲ್ಲಿಸುತ್ತೇನೆ.

## 26.ಟ್ರಸ್ಟಿಗೆ ಬರುವ ಆದಾಯದ ಕುರಿತು

### 1. ತೋಟದ ಉತ್ಪನ್ನ

ಟ್ರಸ್ಟು ನಡೆಸುತ್ತಿರುವ ವಿವಿಧ ಸಂಸ್ಥೆಗಳಲ್ಲಿ ಬರುವ ತೋಟದ ಉತ್ಪನ್ನವನ್ನು ಟ್ರಸ್ಟಿಗೆ ಪಾವತಿಸುವಂತೆ ಈ ಹಿಂದಿನ ವರ್ಷಗಳಲ್ಲಿ ವಿನಂತಿಸಲಾಗಿತ್ತು. ಟ್ರಸ್ಟಿಗೆ ಸಂದಾಯವಾದ ತೋಟದ ಉತ್ಪನ್ನ ಈ ಕೆಳಗಿನಂತಿರುತ್ತದೆ.


| ವರ್ಷ | ಸಂದಾಯವಾದ ಹಣ |
|---|---|
| 2012-2013 | Rs. 1,37,219 |
| 2013-2014 | Rs. 1,60,130 |
| 2014-2015 | Rs. 2,08,000 |
| 2015-2016 | Rs. 2,03,419 |
| 2016-2017 | Rs. 1,63,969 |




ಬರುವ ಶೈಕ್ಷಣಿಕ ವರ್ಷದಲ್ಲಿ ತೋಟದ ಉತ್ಪನ್ನ ಹೆಚ್ಚಿಗೆ ಬರುವಂತೆ ಶಾಲೆಯ ಮುಖ್ಯಾಧ್ಯಾಪಕರು ಹಾಗೂ ಎಲ್ಲ ಸಿಬ್ಬಂದಿಗಳು ವಿಶೇಷ ಪ್ರಯತ್ನ ಮಾಡಬೇಕಾಗಿ ವಿನಂತಿಸುತ್ತೇನೆ.

### 2. ಬಾಡಿಗೆಯಿಂದ ಬರುವ ಆದಾಯ (ವಸತಿ ಗೃಹ / ಅಂಗಡಿ ಬಾಡಿಗೆ)

| ವರ್ಷ | ಸಂದಾಯವಾದ ಬಾಡಿಗೆ ಮೊತ್ತ |
|---|---|
| 2012-2013 | Rs. 3,83,227 |
| 2013-2014 | Rs. 4,38,072 |
| 2014-2015 | Rs. 4,75,551 |
| 2015-2016 | Rs. 4,86,026 |
| 2016-2017 | Rs. 4,62,050 |





2016–2017ನೇ ಸಾಲಿನಲ್ಲಿ ಬಾಡಿಗೆ ರೂಪದಲ್ಲಿ ರೂ.4,62,050/– ಬಂದಿದೆ. ಶಾಲಾ / ಕಾಲೇಜು ಆವಾರದಲ್ಲಿರುವ ಟ್ರಸ್ಟಿನ ಎಲ್ಲ ಕಟ್ಟಡಗಳ ನಿರ್ವಹಣೆ ಹಾಗೂ ಪಂಚಾಯತ / ನಗರ ಸಭೆ ಕರ ತುಂಬುವದು ಟ್ರಸ್ಟಿನಿಂದಲೆ ಮಾಡಲಾಗುತ್ತಿದೆ.

## 3. ರೂಪೀ ರಿಸರ್ವ ಫಂಡ

ಟ್ರಸ್ಟಿನ ಯೋಜನೆಯಲ್ಲೊಂದಾದ 'ರೂಪೀ ರಿಝರ್ವ ಫಂಡ' ನಿಧಿಗೆ ಸ್ವಯಂ ಪ್ರೇರಣೆಯಿಂದ ವಿದ್ಯಾರ್ಥಿಗಳಿಂದ, ಶಿಕ್ಷಕರಿಂದ ಮತ್ತು ಶಿಕ್ಷಕೇತರ ಸಿಬ್ಬಂದಿಯವರಿಂದ ಪ್ರತಿಯೊಂದು ಶೈಕ್ಷಣಿಕ ವರ್ಷದಲ್ಲಿ ಸಂಗ್ರಹಿಸಿದ ಹಣವನ್ನು ಟ್ರಸ್ಟಿಗೆ ಸಂದಾಯ ಮಾಡಲಾಗುತ್ತಿದೆ.

ಕಳೆದ 5 ವರ್ಷಗಳಲ್ಲಿ ಸಂಗ್ರಹಿಸಿದ ಹಣದ ವಿವರ ಈ ಕೆಳಗಿನಂತಿದೆ.

| ವರ್ಷ | ರೂಪೀ ರಿಸರ್ವ ಫಂಡ ಸಂಗ್ರಹಣೆ |
|---|---|
| **2012-2013** | **Rs. 9,57,250** |
| **2013-2014** | **Rs. 19,26,700** |
| **2014-2015** | **Rs. 21,46,400** |
| **2015-2016** | **Rs. 20,78,800** |
| **2016-2017** | **Rs. 20,14,400** |




2016–2017ನೇ ಸಾಲಿನಲ್ಲಿ ಸಂಗ್ರಹಿಸಿದ ಒಟ್ಟೂ ಹಣ ರೂ.20,14,400/– ಈ ಸಂಗ್ರಹಣೆಯಲ್ಲಿ ಸಹಕರಿಸಿ ಎಲ್ಲ ಪ್ರಾಚಾರ್ಯರನ್ನು/ಮುಖ್ಯಾಧ್ಯಾಪಕರನ್ನು ಅಭಿನಂದಿಸುತ್ತೇನೆ. ಟ್ರಸ್ಟಿಗೆ ಬರುವ ಆದಾಯದಲ್ಲಿ ರೂಫೀ ರಿಝರ್ವ ಫಂಡಿನಿಂದ ಬರುವ ಹಣವೇ ಪ್ರಧಾನವಾಗಿದೆ. ಆದ್ದರಿಂದ ಈ ಯೋಜನೆಯಲ್ಲಿ ಎಲ್ಲರ ಸಹಕಾರ ಎಂದಿನಂತೆ ನಿರಂತರವಾಗಿ ಮುಂದುವರೆಯಲೆಂದು ಟ್ರಸ್ಟಿನ ಪರವಾಗಿ ವಿನಂತಿಸುತ್ತೇನೆ.

Rupee Reserve Fund ಮೂಲಕ ಸಂಗ್ರಹಿಸಿದ ಈ ಹಣವನ್ನು ರಿಸರ್ವ ಫಂಡ ಖಾತೆಗೆ ಶಾಶ್ವತ ನಿಧಿಯಾಗಿ ವಿನಿಯೋಗಿಸಬೇಕಾಗುತ್ತದೆ. ಆದರೆ ಶಾಲಾ–ಕಾಲೇಜುಗಳ ನಿರ್ವಹಣೆ ವೆಚ್ಚಕ್ಕಾಗಿ, ಅಭಿವೃದ್ಧಿ ಕಾರ್ಯಕ್ಕೆ, ತಾತ್ಕಾಲಿಕ ಸಿಬ್ಬಂದಿಗಳ ವೇತನಕ್ಕಾಗಿ ಹಾಗೂ ಇನ್ನಿತರ ಕಾರ್ಯಗಳಿಗೆ ಟ್ರಸ್ಟು ಈ ಹಣ ವಿನಿಯೋಗಿಸುವದರಿಂದ ರೂಫಿ ರಿಸರ್ವ ಫಂಡ ನಿಂದ ಸಂಗ್ರಹವಾಗುವ ಹಣ ಪ್ರತ್ಯೇಕ ನಿಧಿಯಾಗಿ ಇಡಲು ಇದುವರೆಗೆ ಸಾಧ್ಯವಾಗಲಿಲ್ಲ. ಟ್ರಸ್ಟಿಗೆ ಬರುವ ಆದಾಯ, ದೇಣಿಗೆ ಹೆಚ್ಚಾದಲ್ಲಿ ಈ ಹಣವನ್ನು ಪ್ರತ್ಯೇಕ ನಿಧಿಯಾಗಿ ಇಡಲು ಸಾಧ್ಯವಾಗಬಹುದು. ಟ್ರಸ್ಟಿಗೆ ಬರುವ ಆದಾಯ ಇನ್ನೂ ಹೆಚ್ಚಾಗುವಂತೆ ಎಲ್ಲರೂ ಪ್ರಯತ್ನಿಸಬೇಕಾಗಿ ವಿನಂತಿಸುತ್ತೇನೆ. ಟ್ರಸ್ಟಿಗೆ ಬರುವ ಆದಾಯ ಪ್ರತಿ ವರ್ಷ ರೂ.75 ಲಕ್ಷ ದಷ್ಟಾದರೆ, ಟ್ರಸ್ಟು Rupee Reserve Fund ಹಣ ಹಾಗೂ ಇತರೆ ಉದ್ದೇಶಕ್ಕಾಗಿ ಬರುವ ಹಣ ಪ್ರತ್ಯೇಕ ನಿಧಿಯಾಗಿ ಇಡಲು ಸಾಧ್ಯವಿದೆ.

ಮೂಲಕ ಸಂಗ್ರಹಿಸಿದ ಈ ಹಣವನ್ನು ರಿಸರ್ವ ಫಂಡ ಖಾತೆಗೆ ಶಾಶ್ವತ ನಿಧಿಯಾಗಿ ವಿನಿಯೋಗಿಸಬೇಕಾಗುತ್ತದೆ. ಆದರೆ ಶಾಲಾ–ಕಾಲೇಜುಗಳ ನಿರ್ವಹಣೆ ವೆಚ್ಚಕ್ಕಾಗಿ, ಅಭಿವೃದ್ಧಿ ಕಾರ್ಯಕ್ಕೆ, ತಾತ್ಕಾಲಿಕ ಸಿಬ್ಬಂದಿಗಳ ವೇತನಕ್ಕಾಗಿ ಹಾಗೂ ಇನ್ನಿತರ ಕಾರ್ಯಗಳಿಗೆ ಟ್ರಸ್ಟು ಈ ಹಣ ವಿನಿಯೋಗಿಸುವದರಿಂದ ರೂಪಿ ರಿಸರ್ವ ಫಂಡ ನಿಂದ ಸಂಗ್ರಹವಾಗುವ ಹಣ ಪ್ರತ್ಯೇಕ ನಿಧಿಯಾಗಿ ಇಡಲು ಇದುವರೆಗೆ ಸಾಧ್ಯವಾಗಲಿಲ್ಲ. ಟ್ರಸ್ಟಿಗೆ ಬರುವ ಆದಾಯ, ದೇಣಿಗೆ ಹೆಚ್ಚಾದಲ್ಲಿ ಈ ಹಣವನ್ನು ಪ್ರತ್ಯೇಕ ನಿಧಿಯಾಗಿ ಇಡಲು ಸಾಧ್ಯವಾಗಬಹುದು. ಟ್ರಸ್ಟಿಗೆ ಬರುವ ಆದಾಯ ಇನ್ನೂ ಹೆಚ್ಚಾಗುವಂತೆ ಎಲ್ಲರೂ ಪ್ರಯತ್ನಿಸಬೇಕಾಗಿ ವಿನಂತಿಸುತ್ತೇನೆ. ಟ್ರಸ್ಟಿಗೆ ಬರುವ ಆದಾಯ ಪ್ರತಿ ವರ್ಷ ರೂ.75 ಲಕ್ಷ ದಷ್ಟಾದರೆ, ಟ್ರಸ್ಟು Rupee Reserve Fund ಹಣ ಹಾಗೂ ಇತರೆ ಉದ್ದೇಶಕ್ಕಾಗಿ ಬರುವ ಹಣ ಪ್ರತ್ಯೇಕ ನಿಧಿಯಾಗಿ ಇಡಲು ಸಾಧ್ಯವಿದೆ.

## 2016–2017ನೇ ಸಾಲಿನಲ್ಲಿ ಟ್ರಸ್ಟಿನಿಂದ ಮಾಡಿದ ವೆಚ್ಚ್

| | |
|---|---|
| ಅನುದಾನರಹಿತ ಸಿಬ್ಬಂದಿಗಳ ವೇತನದ ಬಗ್ಗೆ | **Rs.20,00,000** |
| ಸಂಸ್ಥೆಗಳಲ್ಲಿ ಅಭಿವೃದ್ಧಿ ಕಾರ್ಯಗಳ ಬಗ್ಗೆ | **Rs.22,00,000** |
| ಹೊಸ ಡೆಸ್ಕ್–ಬೆಂಚುಗಳ / ರಿಪೇರಿಯ ಬಗ್ಗೆ | **Rs.2,50,000** |
| ಸಾದಿಲ್ವಾರ, ಇತ್ಯಾದಿ | **Rs.8,00,000** |
| ಸೊಫ್ಟ್‌ವೆರ್ ಬಗ್ಗೆ | **Rs.2,50,000** |
| ಪಿ.ಎಫ್, ಇ.ಎಸ್.ಐ., ಇತ್ಯಾದಿ | **Rs.6,00,000** |
| **ಒಟ್ಟೂ** | **Rs.61,00,000** |

ಟ್ರಸ್ಟಿನ ಆದಾಯಕ್ಕಿಂತ ಹೆಚ್ಚಿನ ಹಣ ಖರ್ಚು ಮಾಡಬೇಕಾದುದರಿಂದ ಟ್ರಸ್ಟಿನ ಹಣಕಾಸು ನಿರ್ವಹಣೆ ಸರಿದೂಗಿಸಲು ಈ ಕೆಳಗಿನ ಸಂಸ್ಥೆಗಳಿಂದ ಒಟ್ಟೂ ರೂ.35,00,000/–ವನ್ನು ಪಡೆಯಲಾಗಿದೆ.

| | |
|---|---|
| ಜನತಾ ವಿದ್ಯಾಲಯ, ದಾಂಡೇಲಿ | **Rs.15,00,000** |
| ಆಂಗ್ಲ ಮಾಧ್ಯಮ ಶಾಲೆ, ದಾಂಡೇಲಿ | **Rs.10,00,000** |
| ದಿನಕರ ದೇಸಾಯಿ ಪ್ರಾಥಮಿಕ ಶಾಲೆ, ಅಂಕೋಲಾ | **Rs.5,00,000** |
| ಪಿ.ಎಂ.ಆಂಗ್ಲ ಮಾಧ್ಯಮ ಶಾಲೆ, ಅಂಕೋಲಾ | **Rs.5,00,000** |
| **ಒಟ್ಟೂ** | **Rs.35,00,000** |

## 27.2016–2017ನೇ ಸಾಲಿನಲ್ಲಿ ಟ್ರಸ್ಟಿಗೆ ನೇರವಾಗಿ ದೇಣಿಗೆ ಸಂದಾಯ ಮಾಡಿದವರ ವಿವರ

| Sl. | Name of the Donor | Amount |
|---|---|---|
| 1 | Shri G.V.Nayak, Ankola | Rs. 1,00,000 |
| 2 | Dr. B.H.Nayak, Principal, Divekar College of Commerce | Rs. 20,000 |
| 3 | Shri Prakash Narwekar, Ankola | Rs. 10,000 |
| 4 | Shri Vishnu Naik, Ankola | Rs. 5,000 |
| 5 | Shamdasani Foundation, Hong Kong | Rs. 5,000 |
| 6 | Shri Christopher Fernandes | Rs. 3,000 |
| | **Total** | **Rs. 1,43,000** |

ದೇಣಿಗೆ ನೀಡಿದ ಎಲ್ಲ ದಾನಿಗಳಿಗೆ ಟ್ರಸ್ಟಿನ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳು.

## 28.2016–2017ನೇ ಸಾಲಿನಲ್ಲಿ ಟ್ರಸ್ಟು ವಿವಿಧ ಕಾರ್ಯಕ್ರಮಗಳಿಗೆ ನೀಡಿದ ದೇಣಿಗೆ ವಿವರ

| ಅ.ನಂ. | ಹೆಸರು | ದೇಣಿಗೆ ಮೊತ್ತ |
|---|---|---|
| 1 | **ಕಲಾಶ್ರೀ ಸಂಸ್ಕೃತ ವೇದಿಕೆ, ಕತಗಾಲ, ಕುಮಟಾ**<br>[ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲು] | ರೂ. 10,000 |
| 2 | **ಸಂಗೀತ ಪ್ರತಿಷ್ಠಾನ, ಕಾರವಾರ**<br>[ಸಂಗೀತ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ] | ರೂ. 10,000 |
| | **ಒಟ್ಟು** | **ರೂ. 20,000** |

## 29.2016–2017ನೇ ಸಾಲಿನಲ್ಲಿ ನಿವೃತ್ತಿ ಹೊಂದಿದ ಬೋಧಕ–ಬೋಧಕೇತರರು

| | | |
|---|---|---|
| 1 | **ಪ್ರೊ. ಮೋಹನ ವಿ.ಭಟ್ಟ**<br>ಅಸ್ಸೋಸಿಯೇಟ್ ಪ್ರೊಫೆಸ್ಸರ್, ದಿವೇಕರ ವಾಣಿಜ್ಯ ಕಾಲೇಜ್, ಕಾರವಾರ, ಇವರು ದಿ.31–01–2017 ರಂದು ಸೇವಾ ನಿವೃತ್ತಿ ಹೊಂದಿರುತ್ತಾರೆ. |  |
| 2 | **ಶ್ರೀ ಪ್ರಕಾಶ ಕುಂಜಿ**<br>ದೈಹಿಕ ಶಿಕ್ಷಕರು, ಪಿ.ಎಂ.ಹೈ.ಸ್ಕೂಲ್, ಅಂಕೋಲಾ, ಇವರು ದಿ.31–05–2017 ರಂದು ಸೇವಾ ನಿವೃತ್ತಿ ಹೊಂದಿರುತ್ತಾರೆ. |  |
| 3 | **ಡಾ. ಜಯಶ್ರೀ ಕೊರಟಿ**<br>ಪ್ರಾಚಾರ್ಯರು, ಬಿ.ಎಡ್., ಕಾಲೇಜ್, ದಾಂಡೇಲಿ, ಇವರು ದಿ.17–05–2017 ರಂದು ರಾಜಿನಾಮೆ ನೀಡಿರುತ್ತಾರೆ. |  |

ಟ್ರಸ್ಟಿನ ವಿವಿಧ ಶಾಲಾ–ಕಾಲೇಜುಗಳಲ್ಲಿ ಅನೇಕ ವರ್ಷ ಪ್ರಾಮಾಣಿಕ ಸೇವೆ ಸಲ್ಲಿಸಿ, ಸೇವಾ ನಿವೃತ್ತಿ ಹೊಂದಿದ ಎಲ್ಲರ ಸೇವೆ ಇನ್ನೊಮ್ಮೆ ಸ್ಮರಿಸಿ, ಅವರ ನಿವೃತ್ತಿ ಜೀವನ ಶುಭದಾಯಕವಾಗಲಿ, ಅವರ ಸೇವೆ ಸದಾ ಟ್ರಸ್ಟಿಗೆ ದೊರೆಯಲಿ ಎಂದು ಟ್ರಸ್ಟಿನ ಪರವಾಗಿ ಹಾರೈಸುತ್ತೇನೆ.

**ಶ್ರೀ ಗಣೇಶ ಸಿದ್ದೇಶ್ವರ**

ಸಹಾಯಕ ಶಿಕ್ಷಕರು, ಜನತಾ ವಿದ್ಯಾಲಯ, ಧಾರೇಶ್ವರ, ಇವರು ದಿ.17–03–2017 ರಂದು ಆಕಸ್ಮಿಕ ನಿಧನ ಹೊಂದಿರುತ್ತಾರೆ ಎಂದು ತಿಳಿಸಲು ಅತೀವ ದು:ಖವೆನಿಸುತ್ತದೆ. ಅವರ ಅಕಾಲಿಕ ನಿಧನಕ್ಕೆ ಟ್ರಸ್ಟಿನ ಪರವಾಗಿ ಅವರ ಕುಟುಂಬಕ್ಕೆ ಶ್ರದ್ಧಾಂಜಲಿ ಸಲ್ಲಿಸಲಾಗಿದೆ.



## 30.ಶೈಕ್ಷಣಿಕ ಪ್ರಗತಿ ಹಾಗೂ ಲೆಕ್ಕ ಪತ್ರ ಪರಿಶೀಲನಾ ಕಾರ್ಯಕ್ರಮ

ಟ್ರಸ್ಟಿನ ನಿರ್ದೇಶನದಂತೆ 2016–2017ನೇ ಸಾಲಿನಲ್ಲಿಯೂ ಕೂಡಾ ಶೈಕ್ಷಣಿಕ ಪ್ರಗತಿ ಪರಿಶೀಲನಾ ತಂಡವು ಟ್ರಸ್ಟಿನ ವಿವಿಧ ಸಂಸ್ಥೆಗಳಿಗೆ ಭೆಟ್ಟಿ ನೀಡಿ ಎಲ್ಲ ಶಾಲೆಗಳ, ಸಂಯುಕ್ತ ಪದವಿ ಪೂರ್ವ ಕಾಲೇಜುಗಳ ಶೈಕ್ಷಣಿಕ ಪ್ರಗತಿ ಹಾಗೂ ಲೆಕ್ಕ ಪತ್ರ ಪರಿಶೀಲನಾ ಕಾರ್ಯಕ್ರಮ ನಡೆಸಿರುತ್ತದೆ. ಪದವಿ ಹಾಗೂ ಪದವಿ ಪೂರ್ವ ವಿಭಾಗದ ಲೆಕ್ಕ ಪತ್ರಗಳನ್ನು ಕೂಡಾ ಪರಿಶೀಲಿಸಲಾಗಿದೆ. ಪರಿಶೀಲನಾ ಸಂದರ್ಭದಲ್ಲಿ ಕಂಡುಬಂದ ಕೆಲವು ಅಂಶಗಳನ್ನು ಪ್ರತ್ಯೇಕ ವರದಿಯಲ್ಲಿ ನೀಡಲಾಗಿದೆ. ಶೈಕ್ಷಣಿಕ ಪರಿಶೀಲನಾ ವರದಿಯನ್ನು ಎಲ್ಲ ಸಂಸ್ಥೆಗಳ ಮುಖ್ಯಸ್ಥರಿಗೆ ನೀಡಲಾಗಿದೆ.

ಈ ಪರಿಶೀಲನಾ ತಂಡದಲ್ಲಿ ವಿಷಯ ತಜ್ಞರಾಗಿ ಆಫೀಸ ಹಾಗೂ ಲೆಕ್ಕಪತ್ರ ಪರಿಶೀಲಕರಾಗಿ ಈ ಕೆಳಗಿನವರು ಭಾಗವಹಿಸಿದ್ದರು.

| 2016–2017ನೇ ಸಾಲಿನ ಶೈಕ್ಷಣಿಕ ಪ್ರಗತಿ ಪರಿಶೀಲನೆ / ಕಾರ್ಯಾಲಯ ನಿರ್ವಹಣೆ ಹಾಗೂ ಲೆಕ್ಕಪತ್ರ ನಿರ್ವಹಣೆಯ ಪರಿಶೀಲನಾ ತಂಡದಲ್ಲಿ ಭಾಗವಹಿಸಿದ ಸದಸ್ಯರು ಹಾಗೂ ವಿಷಯ ತಜ್ಞರು | | |
|---|---|---|
| 1. | **ಪ್ರೊ. ಜಿ.ವಿ.ಭಟ್ಟ** | ಧರ್ಮದರ್ಶಿಗಳು, ಕೆನರಾ ವೆಲ್‌ಫೇರ್ ಟ್ರಸ್ಟ, ಅಂಕೋಲಾ |
| 2. | **ಶ್ರೀ ಕೃಷ್ಣಾನಂದ ವಿ.ಶೆಟ್ಟಿ** | ಆಡಳಿತಾಧಿಕಾರಿ, ಕೆನರಾ ವೆಲ್‌ಫೇರ್ ಟ್ರಸ್ಟ |
| 3. | **ಶ್ರೀ ವಿಷ್ಣು ನಾಯ್ಕ** | ನಿವೃತ್ತ ಪ್ರಾಚಾರ್ಯರು, ಪಿ.ಎಂ.ಪ.ಪೂ.ಕಾಲೇಜ, ಅಂಕೋಲಾ |
| 4. | **ಪ್ರೊ. ಡಿ.ಪಿ.ಕುಚಿನಾಡ** | ಉಪನ್ಯಾಸಕರು, ಜಿ.ಸಿ.ಕಾಲೇಜ್, ಅಂಕೋಲಾ |
| 5. | **ಡಾ. ಎಸ್.ವಿ.ವಸ್ತ್ರದ** | ಉಪನ್ಯಾಸಕರು, ಜಿ.ಸಿ.ಕಾಲೇಜ್, ಅಂಕೋಲಾ |
| 6. | **ಪ್ರೊ. ಎಂ.ಎಂ.ಪಾಟೀಲ** | ಉಪನ್ಯಾಸಕರು, ಜಿ.ಸಿ.ಕಾಲೇಜ್, ಅಂಕೋಲಾ |
| 7. | **ಶ್ರೀಮತಿ ಇಂದಿರಾ ಯಾಜಿ** | ಉಪನ್ಯಾಸಕರು, ಜ.ವಿ.ಸಂ.ಪ.ಪೂ.ಕಾಲೇಜ, ಕಡತೋಕಾ |
| 8. | **ಶ್ರೀ ಎಸ್.ವಿ.ಮುಳಗುಂದ** | ನಿವೃತ್ತ ಶಿಕ್ಷಕರು, ಪಿ.ಎಂ.ಹೈಸ್ಕೂಲ, ಅಂಕೋಲಾ |
| 9. | **ಶ್ರೀಮತಿ ಫಿಲೋಮಿನಾ ರೋಡ್ರಿಗಿಸ್** | ಮುಖ್ಯಾಧ್ಯಾಪಕರು, ಜನತಾ ವಿದ್ಯಾಲಯ, ಕಾಸರಕೋಡ |

| | | |
|---|---|---|
| 10. | ಶ್ರೀಮತಿ ಉಷಾ ಭಟ್ಟ | ಮುಖ್ಯಾಧ್ಯಾಪಕರು, ಜನತಾ ವಿದ್ಯಾಲಯ, ಕಡತೋಕಾ |
| 11. | ಶ್ರೀ ಪಿ.ಪಿ.ಮಲ್ಲ್ಯ | ಸಹಶಿಕ್ಷಕರು, ಪಿ.ಎಂ.ಹೈಸ್ಕೂಲ, ಅಂಕೋಲಾ |
| 12. | ಶ್ರೀಮತಿ ಪ್ರತಿಭಾ ಭಾಗ್ವತ | ಸಹಶಿಕ್ಷಕರು, ಜನತಾ ವಿದ್ಯಾಲಯ, ಧಾರೇಶ್ವರ |
| 13. | ಶ್ರೀ ಐ.ವಿ.ಭಟ್ಟ | ಸಹಶಿಕ್ಷಕರು, ಜನತಾ ವಿದ್ಯಾಲಯ, ಬಾಡ–ಕಾಗಲ |
| 14. | ಶ್ರೀ ವಿ.ಪಿ.ಶಾನಭಾಗ | ಸಹಶಿಕ್ಷಕರು, ಜನತಾ ವಿದ್ಯಾಲಯ, ಬಾಡ–ಕಾಗಲ |
| 15. | ಶ್ರೀ ವಿ.ಟಿ.ಗೌಡ | ಸಹಶಿಕ್ಷಕರು, ಪಿ.ಎಂ.ಹೈಸ್ಕೂಲ, ಅಂಕೋಲಾ |
| 16. | ಶ್ರೀ ವಿನೋದ ಎಲ್.ಹೆಗಡೆ | ಸಹಶಿಕ್ಷಕರು, ಜನತಾ ವಿದ್ಯಾಲಯ, ಕುಳವೆ–ಬರೂರು |
| 17. | ಶ್ರೀ ಎನ್.ವಿ.ಹೆಗಡೆ | ಸಹಶಿಕ್ಷಕರು, ಪಿ.ಎಂ.ಹೈಸ್ಕೂಲ, ಅಂಕೋಲಾ |
| 18. | ಶ್ರೀ ಮಹೇಶ ಹನಬರಟ್ಟಿ | ಸಹಶಿಕ್ಷಕರು, ಜನತಾ ವಿದ್ಯಾಲಯ, ಮುರುಡೇಶ್ವರ |
| 19. | ಶ್ರೀ ಜೈರಂಗನಾಥ ಬಿ.ಎಸ್. | ಸಹಶಿಕ್ಷಕರು, ಜನತಾ ವಿದ್ಯಾಲಯ, ಮುದಗಾ |
| 20. | ಶ್ರೀ ಪಿ.ಎಂ.ನಾಯ್ಕ | ಸಹಶಿಕ್ಷಕರು, ಜನತಾ ವಿದ್ಯಾಲಯ, ಬೇಡ್ಕಣಿ |
| 21. | ಶ್ರೀ ಎಂ.ಬಿ.ಅರವಳ್ಳಿ | ಸಹಶಿಕ್ಷಕರು, ಜನತಾ ವಿದ್ಯಾಲಯ, ಕಡತೋಕಾ |
| 22. | ಶ್ರೀ ಎಂ.ಜಿ.ಶಾಸ್ತ್ರಿ | ಸಹಶಿಕ್ಷಕರು, ಜನತಾ ವಿದ್ಯಾಲಯ, ಕಡತೋಕಾ |
| 23. | ಶ್ರೀ ಅಶೋಕ ಪಿ.ಭಟ್ಟ | ಸಹಶಿಕ್ಷಕರು, ಎಸ್.ಕೆ.ಪಿ.ಹೈಸ್ಕೂಲ, ಕತಗಾಲ |
| 24. | ಶ್ರೀ ಗಣೇಶ ಎಸ್.ಭಟ್ಟ | ಸಹಶಿಕ್ಷಕರು, ಜನತಾ ವಿದ್ಯಾಲಯ, ಕಾಸರಕೋಡ |
| 25. | ಶ್ರೀ ಹನುಮಪ್ಪ ಟಿ.ತಳ್ಳಳ್ಳಿ | ಸಹಶಿಕ್ಷಕರು, ಜನತಾ ವಿದ್ಯಾಲಯ, ಧಾರೇಶ್ವರ |
| 26. | ಶ್ರೀ ಉಲಾಸ ಹುದ್ದಾರ | ಉಪನ್ಯಾಸಕರು, ಪಿ.ಎಂ.ಜ್ಯೂನಿಯರ್ ಕಾಲೇಜ್, ಅಂಕೋಲಾ |
| 27. | ಶ್ರೀ ಪ್ರಶಾಂತ ಎನ್.ರಾವ್ | ಕೋ–ಆರ್ಡಿನೇಟರ, ಕೆನರಾ ವೆಲ್‌ಫೆರ್ ಟ್ರಸ್ಟ |
| 28. | ಶ್ರೀ ರಾಜು ಜಿ.ನಾಯ್ಕ | ಆಫೀಸ ಸಹಾಯಕರು, ಕೆನರಾ ವೆಲ್‌ಫೆರ್ ಟ್ರಸ್ಟ |

ಇವರೆಲ್ಲರ ಸಹಕಾರದಿಂದ ಟ್ರಸ್ಟಿನ ಎಲ್ಲ ಶಾಲೆಗಳ ಪ್ರಗತಿ ಪರಿಶೀಲನಾ ಕಾರ್ಯಕ್ರಮ ಯಶಸ್ವಿಯಾಗಿ ನಡೆಸಲಾಯಿತು. ಪ್ರತಿಯೊಂದು ಶಾಲೆಯ ಶೈಕ್ಷಣಿಕ ಪ್ರಗತಿ ಪರಿಶೀಲಿಸಿ, ಅಲ್ಲಿಯ ಕುಂದುಕೊರತೆಗಳನ್ನು ಶಿಕ್ಷಕರ ಸಮಕ್ಷಮ ಚರ್ಚಿಸಲಾಯಿತು. ಬಹುತೇಕ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಶೈಕ್ಷಣಿಕ ವಾತಾವರಣ ಚೆನ್ನಾಗಿರುವದಾಗಿ ಪರಿಶೀಲನಾ ಸಮಿತಿ ಅಭಿಪ್ರಾಯ ಪಟ್ಟಿದೆ. ಶೈಕ್ಷಣಿಕ ವಾತಾವರಣ ಇನ್ನೂ ಹೆಚ್ಚು ಪರಿಣಾಮಕಾರಿಯಾಗುವ ದಿಶೆಯಲ್ಲಿ ಅನೇಕ ಸಲಹೆ ಸೂಚನೆಗಳನ್ನು ವರದಿಯಲ್ಲಿ ನೀಡಲಾಗಿದೆ. 2016–2017ನೇ ಸಾಲಿನ ಪರಿಶೀಲನಾ ವರದಿಯನ್ನು ಆಯಾ ಸಂಸ್ಥೆಯ ಮುಖ್ಯಸ್ಥರಿಗೆ ನೀಡಲಾಗಿದೆ.





ಮಾನ್ಯ ಅಧ್ಯಕ್ಷರ ಸಲಹೆ ಮೇರೆಗೆ 2017–2018ನೇ ಶೈಕ್ಷಣಿಕ ವರ್ಷದ ಪ್ರಾರಂಭವಾದ ಕೂಡಲೆ ಟ್ರಸ್ಟು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳಿಗೆ ಭೆಟ್ಟಿ ನೀಡಿ ಶಾಲಾ / ಕಾಲೇಜುಗಳಲ್ಲಿ ನಡೆಯುತ್ತಿರುವ ಪ್ರವೇಶ ಪ್ರಕ್ರಿಯೆ, ನಿವೃತ್ತಿಯಿಂದ / ವರ್ಗಾವಣೆಯಿಂದ ಹಾಗೂ ಇನ್ನಿತ ಕಾರಣಗಳಿಂದ ತೆರವಾದ ಹುದ್ದೆಗಳ ಕುರಿತು, ತಾತ್ಕಾಲಿಕ ಹುದ್ದೆಗಳ ನೇಮಕಾತಿ ಮಾಡುವ ಕುರಿತು, ಲೆಕ್ಕಪತ್ರ ನಿರ್ವಹಣೆ, ಆಡಿಟ್ ವರದಿ, ಮುಂತಾದವುಗಳನ್ನು ಪರಿಶೀಲಿಸಲಾಯಿತು. 2017–2018ನೇ ಶೈಕ್ಷಣಿಕ ವರ್ಷದಲ್ಲಿ ಯಾವುದೇ ತೊಂದರೆಯಾಗದಂತೆ ಸೂಕ್ತ ಮಾರ್ಗದಶನ ನೀಡಲಾಯಿತು. ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಸಂಸ್ಥೆಗಳಿಗೆ ಭೆಟ್ಟಿ ನೀಡಿದ ತಂಡದಲ್ಲಿ ಆಡಳಿತಾಧಿಕಾರಿ ಶ್ರೀ ಕೆ.ವಿ.ಶೆಟ್ಟಿ, ಶ್ರೀ ವಿಷ್ಣು ನಾಯ್ಕ, ಶ್ರೀ ಪ್ರಶಾಂತ ರಾವ್ ಹಾಗೂ ಶ್ರೀ ರಾಜು ನಾಯ್ಕ ರವರು ಇದ್ದರು.

ಶೈಕ್ಷಣಿಕ ವರ್ಷ ಪ್ರಾರಂಭದಲ್ಲಿ ನೀಡುವ ಈ ಭೆಟ್ಟಿಯು ಸಂಸ್ಥೆಗಳಲ್ಲಿರುವ ತುರ್ತು ಸಮಸ್ಯೆ ಪರಿಹಾರಕ್ಕೆ ಹಾಗೂ ಶಾಲಾ–ಕಾಲೇಜುಗಳ ಕಾರ್ಯ ನಿರ್ವಹಣೆಗೆ ಹೆಚ್ಚಿನ ಅನುಕೂಲ ಆಗುತ್ತದೆ. ಎಂದು ಸಂಸ್ಥೆಯ ಮುಖ್ಯಸ್ಥರು ಅಭಿಪ್ರಾಯ ಪಟ್ಟಿದ್ದಾರೆ. ಈ ಕಾರ್ಯದಲ್ಲಿ ಸಹಕಾರ ನೀಡಿದ ಎಲ್ಲರಿಗೆ ಅಭಿನಂದನೆಗಳು.

## 31.ಪ್ರಗತಿ ಪರಿಶೀಲನಾ ತಂಡದ ಸಲಹೆಗಳು

- "ಶಿಕ್ಷಣದ ಮೂಲಕ ಸಾಮಾಜಿಕ ಬದಲಾವಣೆ" ಎಂಬ ಟ್ರಸ್ಟಿನ ನಿಲುವನ್ನು ಮನಸಾ ಸ್ವೀಕರಿಸಿ ಆಯಾ ಭಾಗಗಳಲ್ಲಿ ಟ್ರಸ್ಟಿನ ಶಿಕ್ಷಣ ಸಂಸ್ಥೆಗಳು ಸಮಾಜಸೇವಾ ಕಾರ್ಯಕ್ಕೆ ತಮ್ಮನ್ನು ತೊಡಗಿಸಿಕೊಳ್ಳುವದು.
- ಪರಿಹಾರ ಬೋಧನಾ ಕಾರ್ಯವನ್ನು ಹೆಚ್ಚು ಸಮರ್ಪಕವಾಗಿ ಎಲ್ಲ ಶಾಲೆಗಳಲ್ಲಿಯೂ ನಿರ್ವಹಿಸುವದು.
- ಪರೀಕ್ಷಾ ಫಲಿತಾಂಶ ಉತ್ತಮ ಪಡಿಸುವದರ ಜೊತೆಗೆ ಪ್ರತಿಭಾವಂತ ವಿದ್ಯಾರ್ಥಿಗಳ ಬಗ್ಗೆಯೂ ಹೆಚ್ಚಿನ ಗಮನ ಹರಿಸಿ ಅವರ ಸಾಧನೆ ರಾಜ್ಯಮಟ್ಟದಲ್ಲಿ ಗುರುತಿಸುವಂತೆ ಪ್ರಯತ್ನಿಸುವದು.
- ಪಠ್ಯೇತರ ಚಟುವಟಿಕೆಗಳಲ್ಲೂ ಕೂಡಾ ವಿಶೇಷ ಗಮನ ಹರಿಸಿ, ಪ್ರತಿಭೆಯುಳ್ಳ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವದು.
- ಒಟ್ಟಾರೆಯಾಗಿ ಶಿಕ್ಷಕರು ತಮ್ಮ ಕ್ರೀಯಾಶೀಲತೆಯನ್ನು ಹೆಚ್ಚಿಸಿಕೊಂಡು, ಸಮಾಜದಲ್ಲಿ ಗೌರವ ಸಂಪಾದಿಸಿಕೊಂಡು, ಶಾಲೆಗೂ ಟ್ರಸ್ಟಿಗೂ ಕೀರ್ತಿ ಬರುವಂತೆ ಕಾರ್ಯ ನಿರ್ವಹಿಸುವದು.

## 32.ಆಫೀಸ ಹಾಗೂ ಲೆಕ್ಕ ಪತ್ರ ನಿರ್ವಹಣೆ ಕುರಿತು ಪರಿಶೀಲನೆಯ ವರದಿ

2016–2017ನೇ ಸಾಲಿನ ಶೈಕ್ಷಣಿಕ ಪ್ರಗತಿ ಪರಿಶೀಲನಾ ಸಂದರ್ಭದಲ್ಲಿ ಟ್ರಸ್ಟಿನ ಎಲ್ಲ ಜ್ಯೂನಿಯರ್ ಕಾಲೇಜ್ ಹಾಗೂ ಹೈಸ್ಕೂಲಿನ ಆಫೀಸ ಕಾರ್ಯನಿರ್ವಹಣೆ ಹಾಗೂ ಲೆಕ್ಕ ಪತ್ರದ ಪರಿಶೀಲನೆಯನ್ನು ಕೈಗೊಳ್ಳಲಾಗಿದೆ. ಈ ಪರಿಶೀಲನೆ ಸಂದರ್ಭದಲ್ಲಿ ಕಂಡುಬಂದ ಲೋಪದೋಷಗಳನ್ನು ಈ ಕೆಳಗೆ ನೀಡಲಾಗಿದೆ.

1. ಲೆಕ್ಕಪತ್ರ ನಿರ್ವಹಣೆಯ ಸಿಬ್ಬಂದಿಯು ಪ್ರತಿಯೊಂದು ಲೆಕ್ಕದ ವ್ಯವಹಾರವನ್ನು ಆಯಾ ದಿವಸವೇ ಬರೆದು ಅಂತಿಮ ಶಿಲ್ಕು ದಾಖಲಿಸಿದ ನಂತರ ಸಂಸ್ಥೆಯ ಮುಖ್ಯಸ್ಥರು ಅದನ್ನು ಪರಿಶೀಲಿಸಿ ಸಹಿ ಮಾಡುವದು ಕಡ್ಡಾಯ. ಈ ಕುರಿತು ಪ್ರತಿವರ್ಷ ತಿಳಿಸುತ್ತ ಬಂದರೂ ಪದವಿ ವಿಭಾಗದಲ್ಲಿ ಲೆಕ್ಕಪತ್ರ ನಿರ್ವಹಣೆಯಲ್ಲಿ ಕೆಲವು ನ್ಯೂನತೆ ಕಂಡುಬರುತ್ತದೆ. ಕೆಲವು ಸಂಸ್ಥೆಗಳ ಪ್ರಾಚಾರ್ಯರು ಪ್ರತಿನಿತ್ಯ ಲೆಕ್ಕಪತ್ರ ಪರಿಶೀಲಿಸಿದ್ದು ಕಂಡುಬರುವದಿಲ್ಲ.
2. ಪ್ರತಿ ತಿಂಗಳು ತಪ್ಪದೆ ಪ್ರತಿಯೊಂದು ಲೆಕ್ಕದ ಜಮಾ–ಖರ್ಚು ಪತ್ರಿಕೆ ತಯಾರಿಸಬೇಕು ಹಾಗೂ ಆಡಳಿತ ಮಂಡಳಿಯ ಲೆಕ್ಕದ ಖಾತೆಯ ಜಮಾ–ಖರ್ಚಿನ ಪತ್ರಿಕೆಯ ಪ್ರತಿಯನ್ನು ಟ್ರಸ್ಟಿಗೆ ನಿಯಮಿತವಾಗಿ ಸಲ್ಲಿಸಬೇಕು. ಇನ್ನೂ ಮುಂದೆ ಈ ಬಗ್ಗೆ ವಿಶೇಷ ಗಮನ ಹರಿಸಲು ಕೋರಲಾಗಿದೆ.
3. ಶಾಲಾ/ಕಾಲೇಜುಗಳ ಲೆಕ್ಕಪತ್ರ ನಿರ್ವಹಣೆ ಸರಿಯಾಗಿ ನಿರ್ವಹಿಸುವಂತೆ ಸಂಸ್ಥೆಯ ಎಲ್ಲ ಮುಖ್ಯಸ್ಥರೊಂದಿಗೆ ಹಾಗೂ ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿಯವರೊಡನೆ ಚರ್ಚಿಸಿ ಸಲಹೆ ಸೂಚನೆ ನೀಡಲಾಗಿದೆ.
4. ಲೈಬ್ರರಿ ಪುಸ್ತಕದ ಸ್ಟಾಕ್ ರಜಿಸ್ಟರ್‌ನ್ನು ಸರಿಯಾಗಿ ನಿರ್ವಹಿಸಿ ಪ್ರತಿ ವರ್ಷದ ಕೊನೆಯಲ್ಲಿ ಪುಸ್ತಕಗಳ ಪರಿಶೀಲನೆ ನಡೆಸಿ ಕಳೆದುಹೋದ ಇಲ್ಲವೇ ಹಾಳಾದ ಪುಸ್ತಕಗಳ ಪಟ್ಟಿ ಮಾಡಿ ಅದನ್ನು ಸಂಬಂಧಿಸಿದ ಇಲಾಖೆಯಿಂದ / ಆಡಳಿತ ಮಂಡಳಿಯಿಂದ ಮಂಜೂರಿ ಪಡೆದು ಸ್ಟಾಕಿನಲ್ಲಿ ಅಷ್ಟು ಪುಸ್ತಕವನ್ನು ಕಡಿಮೆ ಮಾಡಬೇಕು. ಇದನ್ನು ಕೆಲವು ಕಡೆ ನಿರ್ವಹಿಸಿದ್ದಾರೆ. ಇನ್ನೂ ಕೆಲವು ಸಂಸ್ಥೆಗಳು ಸರಿಯಾಗಿ ನಿರ್ವಹಿಸಿದ್ದು ಕಂಡುಬರಲಿಲ್ಲ. ಈ ಬಗ್ಗೆ ಹಿಂದಿನ ವರ್ಷದ ವರದಿಯಲ್ಲಿ ತಿಳಿಸಲಾಗಿತ್ತು. ಪುಸ್ತಕದ ಸ್ಟಾಕ್ ರಜಿಸ್ಟರನ್ನು ಹಾಗೂ ಇನ್ನಿತರ ದಾಖಲೆಗಳನ್ನು ಸರಿಯಾಗಿ ನಿರ್ವಹಿಸಬೇಕು.
5. ಶಾಲೆ / ಕಾಲೇಜಿನ ಹೆಸರಿಗೆ ಮಂಜೂರಾದ ಜಾಗೆಯ ರಿಕಾರ್ಡನ್ನು ಪ್ರತಿ ವರ್ಷ ಸಂಬಂಧಿಸಿದ ತಹಶೀಲದಾರರಿಂದ ಪಡೆಯಬೇಕು. ಲೀಜ್ ಮೇಲೆ ಮಂಜೂರಾದ ಜಾಗೆಯ ಕುರಿತು, ಲೀಜ್ ಅವಧಿ ಮುಗಿಯುವ ಸಾಕಷ್ಟು ಪೂರ್ವದಲ್ಲಿ ಸಂಬಂಧಿಸಿದ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿ ಲೀಜ್ ಅವಧಿಯನ್ನು ವಿಸ್ತರಿಸಿಕೊಳ್ಳಬೇಕು ಹಾಗೂ ಆ ಬಗ್ಗೆ ಟ್ರಸ್ಟಿಗೆ ಕಾಲಕಾಲಕ್ಕೆ ಮಾಹಿತಿ ಸಲ್ಲಿಸಬೇಕು. ಪ್ರತಿ ವರ್ಷ ಶೈಕ್ಷಣಿಕ ಪ್ರಗತಿ ಪರಿಶೀಲನೆ ಸಂದರ್ಭದಲ್ಲಿ ಸಂಸ್ಥೆಯ

ಜಾಗದ ಹೊಸ ರಿಕಾರ್ಡ ನೀಡಬೇಕು. ಈ ವರ್ಷ ಎಲ್ಲ ಸಂಸ್ಥೆಯ ಮುಖ್ಯಸ್ಥರು ಸಕಾಲದಲ್ಲಿ ಮಾಹಿತಿಯನ್ನು ಪೂರೈಸಿರುವರು.

6. Kruger Foundation for Child Aid ನಿಂದ ಮಂಜೂರಾದ ಹಣವನ್ನು ಟ್ರಸ್ಟಿನ ವಿವಿಧ ಮಾಧ್ಯಮಿಕ ಶಾಲೆಗಳಲ್ಲಿ ತಾತ್ಕಾಲಿಕವಾಗಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ ಪ್ರತಿ ತಿಂಗಳು ರೂ.1500/– ರಂತೆ ನೀಡಲು ಸಂಸ್ಥೆಯ ಅಧ್ಯಕ್ಷರು ತಿಳಿಸಿದಂತೆ ಸಂಸ್ಥೆಗೆ ಹಣ ನೀಡಲಾಗಿದೆ. ಟ್ರಸ್ಟಿನ ವಿವಿಧ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ತಾತ್ಕಾಲಿಕ ಶಿಕ್ಷಕರು ತಮ್ಮ ಬಿಡುವಿನ ಅವಧಿಯಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ತರಬೇತಿ ನೀಡಿ ಅವರ ಶಿಕ್ಷಣ ಮಟ್ಟ ಸುಧಾರಿಸುವಂತೆ ವಿಶೇಷ ಪ್ರಯತ್ನ ಮಾಡಬೇಕು. ಈ ಕುರಿತು ದಾಖಲೆಯನ್ನು ಇಡಬೇಕು. ಶಾಲೆಯ ಮುಖ್ಯಾಧ್ಯಾಪಕರು ಈ ಬಗ್ಗೆ ಗಮನ ಹರಿಸಿ ಅಭ್ಯಾಸದಲ್ಲಿ ಹಿಂದುಳಿದ ಮಕ್ಕಳಿಗೆ ತಾತ್ಕಾಲಿಕವಾಗಿ ಕಾರ್ಯ ನಿರ್ವಹಿಸುವ ಶಿಕ್ಷಕರು ವಿಶೇಷ ತರಬೇತಿ ಸರಿಯಾಗಿ ನೀಡುತ್ತಿರುವದನ್ನು ಪರಿಶೀಲಿಸಿ ಧೃಢೀಕರಿಸಿಕೊಳ್ಳಬೇಕು. ಈ ಕೆಲಸ ಸರಿಯಾಗಿ ನಿರ್ವಹಿಸುವವರಿಗೆ ಮಾತ್ರ ಈ ಸಹಾಯಧನ ನೀಡಬೇಕು.

7. ಈ ಯೋಜನೆಯಿಂದ ಶೈಕ್ಷಣಿಕವಾಗಿ ಹಿಂದುಳಿದ ಮಕ್ಕಳ ಪ್ರಗತಿಗೆ ಸಹಾಯಕಾರಿಯಾಗಿದೆ ಎಂಬುದು ಪರಿಶೀಲನಾ ಸಮಿತಿಯ ಅಭಿಪ್ರಾಯವಾಗಿದೆ. ಈ ಯೋಜನೆಯನ್ನು ಈ ವರ್ಷವೂ ಮುಂದುವರೆಸಿದ ಬಗ್ಗೆ Kruger Foundation ಸಂಸ್ಥೆಗೆ ಹಾಗೂ ಅಧ್ಯಕ್ಷರಿಗೆ ಧನ್ಯವಾದವನ್ನು ಸಲ್ಲಿಸುತ್ತೇವೆ. ಈ ಯೋಜನೆಯ ಲಾಭ ಎಲ್ಲ ಅರ್ಹ ಮಕ್ಕಳಿಗೆ ಲಭಿಸುವಲ್ಲಿ ಸಂಸ್ಥೆಯ ಮುಖ್ಯಸ್ಥರು ವಿಶೇಷ ಗಮನ ನೀಡುವ ಅವಶ್ಯಕತೆ ಇದೆ.

8. ಸಿಬ್ಬಂದಿಗಳ ಸೇವಾ ಪುಸ್ತಕದಲ್ಲಿ ಅವರು ಪಡೆದ ರಜೆಯ ವಿವರಗಳನ್ನು ಸರಿಯಾಗಿ ನಮೂದಿಸಬೇಕು. ವಾರ್ಷಿಕ ಮುಂಭಡ್ತಿ ಹಾಗು ಇನ್ನಿತರ ಸೇವಾ ಭಡ್ತಿಗಳನ್ನು ಕಾಲಕಾಲಕ್ಕೆ ಸರಿಯಾಗಿ ಸೇವಾ ಪುಸ್ತಕದಲ್ಲಿ ನಮೂದಿಸಿ, ಸಂಸ್ಥೆಯ ಮುಖ್ಯಸ್ಥರು ಧೃಢೀಕರಿಸಬೇಕು.

9. ಶಾಲಾ / ಕಾಲೇಜಿನ ಮುಖ್ಯಸ್ಥರು ರಜೆಯ ಮೇಲೆ ಹೋಗುವ ಪೂರ್ವದಲ್ಲಿ ತಮ್ಮ ರಜೆಯ ಅರ್ಜಿಯನ್ನು ಟ್ರಸ್ಟಿನ ಕಾರ್ಯಾಲಯಕ್ಕೆ ಸಾಕಷ್ಟು ಮುಂಚಿತವಾಗಿ ಕಳುಹಿಸಬೇಕು. ಹಾಗೂ ತಮ್ಮ ಸಂಸ್ಥೆಯ ಹಿರಿಯ ಸಹೋದ್ಯೋಗಿಯವರಿಗೆ ತಮ್ಮ ರಜಾ ಅವಧಿಯಲ್ಲಿ In-charge ಆಗಿ ಕಾರ್ಯನಿರ್ವಹಿಸುವಂತೆ ಲಿಖಿತವಾಗಿ ತಿಳಿಸಬೇಕು. ವಾರ್ಷಿಕ ತಪಾಸಣಾ ಸಂದರ್ಭದಲ್ಲಿ ಕೆಲವು ಸಂಸ್ಥೆಗಳು ಇದನ್ನು ಪಾಲಿಸದೇ ಇರುವದು ಗಮನಕ್ಕೆ ಬಂದಿರುತ್ತದೆ. ಅವರಿಗೆ ಈ ಹಿಂದೆಯೂ ಕೂಡಾ ಸೂಚನೆ ನೀಡಲಾಗಿತ್ತು. ಈ ಕುರಿತು ಸುತ್ತೋಲೆಯನ್ನು ಕೂಡಾ ಹೊರಡಿಸಲಾಗಿದೆ. ಸಂಸ್ಥೆಯ ಮುಖ್ಯಸ್ಥರು ತಮ್ಮ ರಜೆಯ ಅರ್ಜಿಯನ್ನು ಮುಂಚಿತವಾಗಿ ಮಂಜೂರಿ ಮಾಡಿಸಿಕೊಳ್ಳದೆ ಇರುವದು ತಮ್ಮ ರಜಾ ಅವಧಿಯಲ್ಲಿ In-charge ವ್ಯವಸ್ಥೆ ಮಾಡದೆ ಇರುವದು ಕಂಡುಬಂದಿದೆ. ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ತಮ್ಮ ರಜೆ ಅರ್ಜಿಯನ್ನು ಟ್ರಸ್ಟಿಗೆ ಸಲ್ಲಿಸಿ ಮುಂಚಿತವಾಗಿ ಮಂಜೂರಿ ಮಾಡಿಸಿಕೊಳ್ಳುವಂತೆ ಇನ್ನೊಮ್ಮೆ ತಿಳಿಸಲಾಗಿದೆ. ಇದನ್ನು ಪಾಲಿಸದಿದ್ದರೆ ಆಡಳಿತಾತ್ಮಕವಾದ ತೊಂದರೆ ಉಂಟಾಗುತ್ತದೆ.

## 33.ಸಾಮಾನ್ಯ ಸೂಚನೆಗಳು

1. ಶಾಲಾ ಅಭಿವೃದ್ಧಿ ಕೆಲಸ ನಿರ್ವಹಿಸುವಾಗ ಇಲ್ಲವೆ ಲೈಬ್ರರಿ / ಲೆಬೋರೆಟರಿ / ಸ್ಪೋರ್ಟ್ಸ್ / ಪುಸ್ತಕ / ಸಲಕರಣೆ ಇತ್ಯಾದಿ ಖರೀದಿಸುವ ಸಂದರ್ಭದಲ್ಲಿ ಪ್ರತಿವರ್ಷ ಶೈಕ್ಷಣಿಕ ವರ್ಷ ಪ್ರಾರಂಭವಾದ ಕೂಡಲೆ ಈ ಕೆಳಗೆ ನಮೂದಿಸಿದವರ ಒಂದು ಉಪಸಮಿತಿ ನೇಮಿಸಿಕೊಂಡು ಕಾರ್ಯ ನಿರ್ವಹಿಸಲು ಸೂಚಿಸಲಾಗಿದೆ. ಕಾಲಕಾಲಕ್ಕೆ ಈ ಸಮಿತಿಯು ಅಭಿವೃದ್ಧಿ ಕಾರ್ಯದ ಜೊತೆಗೆ ಅದರ ಮೇಲ್ವಿಚಾರಣೆ ಕೂಡಾ ನಡೆಸುತ್ತಿರಬೇಕು ಈ ಉಪಸಮಿತಿಯಲ್ಲಿ –
   - **ಸಂಸ್ಥೆಯ ಮುಖ್ಯಸ್ಥರು**
   - **ಹಿರಿಯ ಅಧ್ಯಾಪಕರು**
   - **ಸ್ಟಾಫ್ ಕೌನ್ಸಿಲ ಕಾರ್ಯದರ್ಶಿ ಹಾಗೂ**
   - **ಆಫೀಸನಲ್ಲಿ ಕಾರ್ಯ ನಿರ್ವಹಿಸುವ ಹಿರಿಯ ಸಿಬ್ಬಂದಿ ಇರಬೇಕು**

   ಈ ಉಪಸಮಿತಿ ಕಾಲಕಾಲಕ್ಕೆ ಸಭೆ ಸೇರಿ ಅಭಿವೃದ್ಧಿ ಕೆಲಸದ ಬಗ್ಗೆ ಇಲ್ಲವೆ ಸಲಕರಣೆ ಖರೀದಿಸುವ ಕುರಿತು ನಿರ್ಣಯ ತೆಗೆದುಕೊಂಡು ಕಾರ್ಯ ನಿರ್ವಹಿಸಿದರೆ ಹಾಗೂ ಹಣ ಪಾವತಿಸುವಾಗಲೂ ಈ ಸಮಿತಿಯ ಒಪ್ಪಿಗೆ ಪಡೆದು ಹಣ ಪಾವತಿಸಿದರೆ ಸಂಸ್ಥೆಯಲ್ಲಿ ಇನ್ನೂ ಹೆಚ್ಚಿನ ಪಾರದರ್ಶಕತೆ ಕಾಣಬಹುದು. ಈ ಕುರಿತು ಹಿಂದಿನ ವರ್ಷಗಳ ವರದಿಯಲ್ಲಿ ನಮೂದಿಸಲಾಗಿತ್ತು. ಆದರೆ ಕೆಲವು ಸಂಸ್ಥೆಗಳ ಮುಖ್ಯಸ್ಥರು ಈ ಬಗ್ಗೆ ಗಮನ ಹರಿಸಿದ ಹಾಗೆ ಕಂಡುಬರುವದಿಲ್ಲ ಹಾಗೂ ಇದನ್ನು ಕಾರ್ಯರೂಪಕ್ಕೆ ತಂದಿರುವದಿಲ್ಲ. ಶಾಲಾ/ಕಾಲೇಜಿನ ಲೆಕ್ಕಪತ್ರದಲ್ಲಿ ಲೆಕ್ಕಪತ್ರ ಸರಿಯಾಗಿ ನಿರ್ವಹಣೆಯಾಗಬೇಕಾದರೆ ಈ ನಿಯಮವನ್ನು ಪಾಲಿಸುವದು ಅವಶ್ಯ. 2017–2018ನೇ ಸಾಲಿನಲ್ಲಿ ವಾರ್ಷಿಕ ಪರಿಶೀಲನೆ ಸಂದರ್ಭದಲ್ಲಿ ಈ ಕುರಿತು ಇಟ್ಟ ದಾಖಲೆ ರಜಿಸ್ಟರನ್ನು ನೀಡಬೇಕು.
2. ಟ್ರಸ್ಟಿನ ಶಾಲಾ/ಕಾಲೇಜುಗಳ ಮುಖ್ಯಸ್ಥರು ಅನಿವಾರ್ಯ ಪ್ರಸಂಗದಲ್ಲಿ ಶಾಲಾ/ಕಾಲೇಜಿಗೆ ಸಂಬಂಧಪಟ್ಟ ಯಾವದಾದರೂ ಉದ್ದೇಶಕ್ಕಾಗಿ ಮುಂಗಡ ಹಣ ಪಡೆದಿದ್ದರೆ, ಅದರ ಲೆಕ್ಕವನ್ನು ಒಂದು ವಾರದ ಒಳಗೆ ಮುಕ್ತಾಯಗೊಳಿಸಬೇಕೆಂದು ಈ ಹಿಂದೆಯೇ ಅನೇಕ ಬಾರಿ ತಿಳಿಸಲಾಗಿದೆ. ಇದನ್ನು ಕಟ್ಟು ನಿಟ್ಟಾಗಿ ಸಂಸ್ಥೆಯ ಮುಖ್ಯಸ್ಥರು ಪಾಲಿಸಬೇಕು.
3. ಶಾಲಾ/ಕಾಲೇಜು ವತಿಯಿಂದ ಪಾವತಿಸಿದ ಹಣಕ್ಕೆ ರಸೀದಿ ಮತ್ತು ಬಿಲ್ಲು / ವಿವರಣೆ ಪತ್ರ ಸರಿಯಾಗಿ ಇಟ್ಟಿದ್ದು ಕೆಲವು ಸಂಸ್ಥೆಗಳಲ್ಲಿ ಕಂಡು ಬಂದಿರುವದಿಲ್ಲ. ಪ್ರತಿಯೊಂದು ಬಿಲ್ಲಿನ ಹಣವನ್ನು ನಿಯಮದ ಪ್ರಕಾರ ಪಾವತಿಸಿ ಸರಿಯಾದ ಓಚರನ್ನು ಇಡಬೇಕು ಪ್ರತಿಯೊಂದು ಬಿಲ್ಲು ಪಾವತಿಸಿದ ಕೂಡಲೆ ಅದರ ಮೇಲೆ Head of Account ಕಡ್ಡಾಯವಾಗಿ ನಮೂದಿಸಬೇಕು. ಇದನ್ನು ಸಂಸ್ಥೆಯ ಮುಖ್ಯಸ್ಥರು ಪರಿಶೀಲಿಸಿ ಲೆಕ್ಕಪತ್ರದ ನಿರ್ವಹಣೆ ಪುಸ್ತಕದ ಮೇಲೆ ಸಹಿ ಮಾಡಬೇಕು.
4. ಕೆನರಾ ವೆಲ್‌ಫೆರ್ ಟ್ರಸ್ಟಿಗೆ ನೀಡುವ ದೇಣಿಗೆಗೆ ಸೆಕ್ಷನ 80G ಪ್ರಕಾರ ಆದಾಯಕರ ವಿನಾಯ್ತಿಯನ್ನು, ಆದಾಯಕರ ಇಲಾಖೆಯವರು ದಿನಾಂಕ 03–06–2011 ರಂದು ಆದೇಶ ಹೊರಡಿಸಿ ಸೆಕ್ಷನ 80G ಪ್ರಕಾರ ದೇಣಿಗೆ ಹಣಕ್ಕೆ ನೀಡುವ ವಿನಾಯ್ತಿಯನ್ನು ಮುಂದುವರೆಸಿದ್ದಾರೆ. ಸಂಸ್ಥೆಯ ಮುಖ್ಯಸ್ಥರು ಇದನ್ನು ಗಮನಿಸಬೇಕು.

## 34.ಕೊನೆಯ ಮಾತು ಹಾಗೂ ಉಪಕಾರ ಸ್ಮರಣೆ

ಸಾಮಾನ್ಯವಾಗಿ ಶಾಲೆ–ಕಾಲೇಜುಗಳಲ್ಲಿ ಪಠ್ಯಪುಸ್ತಕದಲ್ಲಿರುವ ಪಾಠಗಳನ್ನು ಅಧ್ಯಾಪಕರು ಮುಗಿಸಿದರೆ ವರ್ಷದ ಕರ್ತವ್ಯ ಮುಗಿದಂತೆ ಹಾಗೂ ಪರೀಕ್ಷೆಯ ಪರಿಣಾಮವೇ ಶಿಕ್ಷಣ ಸಂಸ್ಥೆಯ ತರಗತಿಯ ಅಳತೆಗೋಲು ಎಂಬ ಕಲ್ಪನೆಯಿದೆ. ಪಠ್ಯಪುಸ್ತಕದ ಆಚೆಯೂ ಇರುವ ಹೊರಗಿನ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆ, ರಾಜಕೀಯ ಚಿಂತನೆ (ಅಣಕು ಸಂಸತ್ತಿನ ಮೂಲಕ) ಹಾಗೂ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಬಗ್ಗೆ ನಮ್ಮ ವಿದ್ಯಾರ್ಥಿಗಳು ಜ್ಞಾನಸಂಪತ್ತನ್ನು ಹೆಚ್ಚಿಸಿಕೊಳ್ಳುವಂಥ ಬಹುಮುಖ ವ್ಯಕ್ತಿತ್ವ ವಿಕಸನ ಶಿಕ್ಷಣ ಪದ್ಧತಿಗೆ ಬೋಧಕ ಸಿಬ್ಬಂದಿಗಳು ವಿಶೇಷ ಗಮನ ನೀಡಬೇಕೆಂದು ಈ ಸಂದರ್ಭದಲ್ಲಿ ತಿಳಿಸಲು ಬಯಸುತ್ತೇನೆ.

ಕ್ರುಗರ್ ಫೌಂಡೇಶನ್ ನೀಡಿದ ಹೆಚ್ಚುವರಿ ಆರ್ಥಿಕ ಸೌಲಭ್ಯ ಪಡೆಯುತ್ತಿರುವ ತಾತ್ಕಾಲಿಕ ಶಿಕ್ಷಕರು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ತೀರ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಬಗ್ಗೆ ಆದ್ಯತೆ ಮೇರೆಗೆ ವಿಶೇಷ ಗಮನ ನೀಡಲು ಸೂಚಿಸಿದೆ. ಆಯಾ ಶಾಲೆಯ ಮುಖ್ಯಸ್ಥರು ಈ ಕುರಿತು ಹೆಚ್ಚು ಗಮನ ಹರಿಸಿ ಕ್ರುಗರ ಫೌಂಡೇಶನ್ ನೀಡುತ್ತಿರುವ ಸಹಾಯ ಧನದ ಹಿಂದೆ ಇರುವ ಸಾಮಾಜಿಕ ಕಳಕಳಿ ಸಾರ್ಥಕಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು.

ಕೆನರಾ ವೆಲ್‌ಫೆರ್ ಟ್ರಸ್ಟು ಎಲ್ಲ ಸಂಸ್ಥೆಗಳ ಶೈಕ್ಷಣಿಕ ಪರಿಶೀಲನೆ ಹಾಗೂ ಲೆಕ್ಕಪತ್ರ ಪರಿಶೀಲನೆ ನಡೆಸುವಂತ ಈ ಒಂದು ಹೊಸ ಯೋಜನೆಯನ್ನು ಕಳೆದ ಅನೇಕ ವರ್ಷಗಳಿಂದ ನಡೆಸುತ್ತ ಬಂದಿದೆ. ಇದರಿಂದ ಶಾಲೆಯ ಶೈಕ್ಷಣಿಕ ಪ್ರಗತಿಗೆ ಹೆಚ್ಚು ಅನುಕೂಲವಾಗುವದರ ಜೊತೆಗೆ ಶಾಲೆಯ ಆಡಳಿತ, ಲೆಕ್ಕಪತ್ರ ನಿರ್ವಹಣೆಗೆ ಹಾಗೂ ಎದುರಿಸುತ್ತಿರುವ ಅನೇಕ ಸಮಸ್ಯೆಗಳಿಗೆ ಸ್ಥಳದಲ್ಲೆ ಪರಿಹಾರ ದೊರೆಯುವದರಿಂದ ಶಾಲೆಯ ಮುಖ್ಯಾಧ್ಯಾಪಕರಿಗೆ / ಪ್ರಾಚಾರ್ಯರಿಗೆ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲು ಹಾಗೂ ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲು ಸಹಕಾರಿಯಾಗುತ್ತದೆ ಎಂಬುದು ಪರಿಶೀಲನಾ ತಂಡದ ಅನಿಸಿಕೆ. ಸಂಸ್ಥೆಯ ಮುಖ್ಯಸ್ಥರು ವರದಿಯಲ್ಲಿ ನಮೂದಿಸಿದ ನ್ಯೂನತೆಗಳಿಗೆ ಹೆಚ್ಚು ಒತ್ತು ನೀಡಿ ಕಾರ್ಯ ನಿರ್ವಹಿಸಿದರೆ ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚು ಪ್ರಗತಿ ತೋರಿಸಲು ಸಾಧ್ಯವಿದೆ.

- ❖ ಮಾನ್ಯ ಟ್ರಸ್ಟಿಗಳಾದ **ಪ್ರೊ. ಜಿ.ವಿ.ಭಟ್ಟ**ರವರು ಟ್ರಸ್ಟು ನಡೆಸುತ್ತಿರುವ ಶಾಲಾ ಕಾಲೇಜುಗಳಿಗೆ ಶೈಕ್ಷಣಿಕ ಪ್ರಗತಿ ಪರಿಶೀಲನಾ ತಂಡದ ಜೊತೆಗೆ ಭಾಗವಹಿಸಿ ಪ್ರಗತಿ ಪರಿಶೀಲನಾ ಕಾರ್ಯದಲ್ಲಿ ಅತ್ಯಂತ ಉತ್ಸಾಹದಿಂದ ಪಾಲುಗೊಂಡು ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಿರುತ್ತಾರೆ, ಅವರಿಗೆ ಧನ್ಯಾವಾದಗಳು.
- ❖ 2016–2017ನೇ ಸಾಲಿನ ಪ್ರಗತಿ ಪರಿಶೀಲನಾ ಕಾರ್ಯದಲ್ಲಿ ಎಲ್ಲ ವಿಷಯ ತಜ್ಞರು ಸಂಪೂರ್ಣ ಸಹಕಾರ ನೀಡಿ ತಮ್ಮ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ, ಪ್ರತಿಯೊಂದು

ಶಾಲೆಯ ಶೈಕ್ಷಣಿಕ ಕಾರ್ಯವನ್ನು ವೀಕ್ಷಿಸಿ ಕೊನೆಯಲ್ಲಿ ತಮ್ಮ ಪ್ರಾಮಾಣಿಕ ಅನಿಸಿಕೆಗಳನ್ನು ಅಧ್ಯಾಪಕರಲ್ಲಿ ಹಾಗೂ ಪರಿಶೀಲನಾ ತಂಡದಲ್ಲಿ ವ್ಯಕ್ತಪಡಿಸಿ, ಮುಂಬರುವ ದಿನಗಳಲ್ಲಿ ಶಾಲೆಗಳ ಪ್ರಗತಿಗಾಗಿ ಹಾಕಿಕೊಳ್ಳಬೇಕಾದ ಕಾರ್ಯಯೋಜನೆ ಕುರಿತು ತಿಳುವಳಿಕೆ ನೀಡಿರುತ್ತಾರೆ. ಈ ಒಂದು ಮಹತ್ವದ ಕಾರ್ಯದಲ್ಲಿ ಪಾಲುಗೊಂಡು ತಮ್ಮ ಅಮೂಲ್ಯವಾದ ವೇಳೆಯನ್ನು ಈ ಕಾರ್ಯಕ್ಕೆ ನೀಡಿದ ಎಲ್ಲರನ್ನು ಹೃತ್ಪೂರ್ವಕವಾಗಿ ಅಭಿನಂದಿಸಿ ಬರುವ ವರ್ಷಗಳಲ್ಲಿ ಕೂಡ ಅವರಿಂದ ಇದೇ ರೀತಿಯ ಸಹಕಾರ ನಿರೀಕ್ಷಿಸಲಾಗಿದೆ.

ಪ್ರಗತಿ ಪರಿಶೀಲನೆಗಾಗಿ ಭೇಟಿ ನೀಡಿದ ಸಂದರ್ಭದಲ್ಲಿ ಟ್ರಸ್ಟಿನ ಎಲ್ಲ ಶಾಲೆಗಳ/ ಕಾಲೇಜುಗಳ ಮುಖ್ಯಾಧ್ಯಾಪಕರು / ಪ್ರಾಚಾರ್ಯರು ಹಾಗೂ ಅಧ್ಯಾಪಕ ವೃಂದದವರು, ಅಧ್ಯಾಪಕೇತರರು ಸಂಪೂರ್ಣ ಸಹಕಾರ ನೀಡಿದ್ದಾರೆ. ಅವರಿಗೂ ಈ ಸಂದರ್ಭದಲ್ಲಿ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಪರಿಶೀಲನಾ ಕಾರ್ಯ ನೆರವೇರಿಸಲು ಪ್ರೇರಣೆ ನೀಡಿದ ಟ್ರಸ್ಟಿನ ಅಧ್ಯಕ್ಷರು ಮತ್ತು ಎಲ್ಲ ಧರ್ಮದರ್ಶಿಗಳಿಗೆ ಹೃತ್ಪೂರ್ವಕ ವಂದನೆ ಸಲ್ಲಿಸುತ್ತೇನೆ.

2016–2017ನೇ ಶೈಕ್ಷಣಿಕ ವರ್ಷದ ಎಲ್ಲ ಶಾಲೆ, ಕಾಲೇಜುಗಳ ಹಾಗೂ ಕೆನರಾ ವೆಲ್‌ಫೆರ್ ಟ್ರಸ್ಟಿನ ಲೆಕ್ಕಪತ್ರವನ್ನು ಲೆಕ್ಕಪರಿಶೋಧಕರಾದ ಶ್ರೀ ಯು.ಕೆ.ಅಣ್ವೇಕರ ಹಾಗೂ ಅವರ ಸಿಬ್ಬಂದಿ ವರ್ಗ ಸಕಾಲದಲ್ಲಿ ಮುಗಿಸಿ ಕೊಟ್ಟಿರುತ್ತಾರೆ. ಅವರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಟ್ರಸ್ಟಿನ ದೈನಂದಿನ ವ್ಯವಹಾರದಲ್ಲಿ, ಅಭಿವೃದ್ಧಿ ಕೆಲಸದಲ್ಲಿ ಲೆಕ್ಕ ಪತ್ರ ನಿರ್ವಹಣೆಯಲ್ಲಿ, ಟ್ರಸ್ಟಿನ ಆಡಳಿತ ನಿರ್ವಹಣೆಯಲ್ಲಿ ಸದಾ ಮಾರ್ಗದರ್ಶನ ನೀಡುತ್ತಿರುವ ಟ್ರಸ್ಟಿನ ಅಧ್ಯಕ್ಷರಾದ ಮಾನ್ಯ **ಶ್ರೀ ಎಸ್.ಪಿ.ಕಾಮತ**ರವರಿಗೆ, ಟ್ರಸ್ಟಿಗಳಾದ **ಪ್ರೊ. ಜಿ.ವಿ.ಭಟ್ಟ**ರವರಿಗೆ ಹಾಗೂ **ಶ್ರೀಮತಿ ಉಷಾ ಪ್ರಧಾನ** ಅವರಿಗೆ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ತಾವೆಲ್ಲರೂ ಮುಕ್ತ ಮನಸ್ಸಿನಿಂದ ಮುಂದೆ ನಡೆಯುವ ಚರ್ಚೆಯಲ್ಲಿ ಭಾಗವಹಿಸಿ ಉಪಯುಕ್ತ ಸಲಹೆ ಸೂಚನೆ ನೀಡಿ ಸಭೆಯಲ್ಲಿ ಒಳ್ಳೆಯ ನಿರ್ಧಾರಗಳನ್ನು ತೆಗೆದುಕೊಳ್ಳಲು ಟ್ರಸ್ಟಿನ ಅಧ್ಯಕ್ಷರಿಗೆ ಸಹಕರಿಸಬೇಕಾಗಿ ವಿನಂತಿಸುತ್ತೇನೆ. ಈ ಒಂದು ಮಹತ್ವಪೂರ್ಣವಾದ ಸಭೆಯಲ್ಲಿ ಪಾಲ್ಗೊಳ್ಳಲು ಆಗಮಿಸಿದ ತಮಗೆಲ್ಲರಿಗೆ ಇನ್ನೊಮ್ಮೆ ಹೃತ್ಪೂರ್ವಕವಾಗಿ ಸ್ವಾಗತಿಸಿ ನನ್ನ ವರದಿಯನ್ನು ಮುಗಿಸುತ್ತೇನೆ.

**ಜೈ ಹಿಂದ!**

**ಅಂಕೋಲಾ**

**15 ಜುಲೈ 2017**

**ಕೃಷ್ಣಾನಂದ ವಿ.ಶೆಟ್ಟಿ**
**ಆಡಳಿತಾಧಿಕಾರಿ**
**ಕೆನರಾ ವೆಲ್‌ಫೆರ್ ಟ್ರಸ್ಟ್, ಅಂಕೋಲಾ**

# DETAILS OF LAND HOLDINGS PERTAINING TO THE TRUST INSTITUTIONS

| District-Taluk-Hobli-Village | Survey No. | Division | Area | Remarks |
|---|---|---|---|---|
| **GOKHALE CENTENARY COLLEGE, ANKOLA** | | | | |
| Uttar Kannada-Ankola-Ankola-Shedgeri | 109 | - | 11-14-00 | In front of Staff Quarters |
| Uttar Kannada-Ankola-Ankola-Shedgeri | 108 B | - | 03-17-04 | Lease |
| Uttar Kannada-Ankola-Ankola-Vandige | 8 A | 2 | 03-14-00 | Lease |
| Uttar Kannada-Ankola-Ankola-Vandige | 8 B | 2A | 02-00-00 | G C College campus |
| Uttar Kannada-Ankola-Ankola-Vandige | 8 B | 2B | 01-05-14 | behind G C College |
| Uttar Kannada-Ankola-Ankola-Vandige | 8 B | 1 | 03-02-10 | behind G C College |
| Uttar Kannada-Ankola-Ankola-Vandige | 8 C | 2 | 02-00-00 | near Honna-Raka Temple |
| | | **TOTAL** | **26-13-12** | |
| **DIVEKAR COLLEGE OF COMMERCE, KARWAR** | | | | |
| Uttar Kannada-Karwar-Baad-Kodibag | 108 C | - | 05-00-00 | Divekar College |
| | | **TOTAL** | **05-00-00** | |
| **P.M. COMPOSITE JUNIOR COLLEGE, ANKOLA** | | | | |
| Uttar Kannada-Ankola-Ankola-Ankola | 476 A1B1 | - | 00-19-03 | PM Junior College Building |
| | | **TOTAL** | **00-19-03** | |
| **PEOPLE'S MULTIPURPOSE HIGH SCHOOL, ANKOLA** | | | | |
| Uttar Kannada-Ankola-Basgod-Bobrawada | 23 | - | 01-34-00 | PM High School |
| Uttar Kannada-Ankola-Basgod-Bobrawada | 392 | 3 | 00-09-08 | PMHS Staff Quarters & Playground |
| Uttar Kannada-Ankola-Basgod-Bobrawada | 393 | - | 00-10-00 | PMHS Staff Quarters & Playground |
| Uttar Kannada-Ankola-Basgod-Bobrawada | 395 | 2 | 00-15-00 | PMHS Staff Quarters & Playground |
| Uttar Kannada-Ankola-Basgod-Bobrawada | 395 | 1 | 00-09-12 | PMHS Staff Quarters & Playground |
| Uttar Kannada-Ankola-Basgod-Bobrawada | 5 | - | 01-18-00 | PM High School |
| Uttar Kannada-Ankola-Basgod-Bobrawada | 6 A | - | 01-01-00 | PM High School |
| Uttar Kannada-Ankola-Basgod-Bobrawada | 6 B2 | - | 00-06-00 | Primary School |
| Uttar Kannada-Ankola-Basgod-Bobrawada | 6 B1 | - | 00-06-00 | |
| Uttar Kannada-Ankola-Basgod-Bobrawada | 7 | 3 | 00-10-00 | PM High School |
| Uttar Kannada-Ankola-Basgod-Bobrawada | 7 | 4 | 00-16-00 | PM High School |
| Uttar Kannada-Ankola-Ankola-Laxmeshwar | 19 | - | 00-06-00 | Primary School |
| Uttar Kannada-Ankola-Ankola-Laxmeshwar | 20 | - | 00-12-00 | |
| Uttar Kannada-Ankola-Ankola-Laxmeshwar | 21/A | 3 | 00-06-00 | |
| Uttar Kannada-Ankola-Ankola-Laxmeshwar | 21/B | - | 00-17-00 | Primary School |
| | | **TOTAL** | **07-16-04** | |
| **JANATA VIDYALAYA, DANDELI** | | | | |
| Uttar Kannada-Haliyal-Dandeli | | - | 15-00-00 | JV Campus |
| | | **TOTAL** | **15-00-00** | |
| **JANATA VIDYALAYA, KADWAD, KARWAR** | | | | |
| Uttar Kannada-Karwar-Kinnar-Kadwad | 404 | - | 01-20-00 | School Building |
| Uttar Kannada-Karwar-Kinnar-Kadwad | 413 | 2 | 00-18-08 | |
| Uttar Kannada-Karwar-Kinnar-Kadwad | 414 | 2 | 00-02-00 | |
| Uttar Kannada-Karwar-Kinnar-Kadwad | 71 A1 A1 A | - | 05-00-00 | on temporary lease wef 1967 |
| | | **TOTAL** | **07-00-08** | |

| District-Taluk-Hobli-Village | Survey No. | Division | Area | Remarks |
|---|---|---|---|---|

| **JANATA VIDYALAYA, BAAD-KAGAL, KUMTA** | | | | |
|---|---|---|---|---|
| Uttar Kannada-Kumta-Kumta-Baad | 78 | 1 | 00-14-00 | School Building |
| Uttar Kannada-Kumta-Kumta-Baad | 78 | 2 | 00-11-00 | Ground |
| Uttar Kannada-Kumta-Kumta-Baad | 78 | 3 | 00-15-00 | upto sea-shore |
| Uttar Kannada-Kumta-Kumta-Baad | 78 | 4 | 00-14-00 | |
| Uttar Kannada-Kumta-Kumta-Baad | 79 | 2 | 00-09-00 | |
| Uttar Kannada-Kumta-Kumta-Baad | 80 | 2 | 00-13-00 | |
| Uttar Kannada-Kumta-Kumta-Baad | 81 | 2 | 00-12-00 | |
| Uttar Kannada-Kumta-Kumta-Baad | 82 | 2 | 00-10-00 | |
| Uttar Kannada-Kumta-Kumta-Baad | 83 | 2 | 00-11-00 | |
| Uttar Kannada-Kumta-Kumta-Baad | 84 | 2 | 00-12-00 | |
| Uttar Kannada-Kumta-Kumta-Baad | 85 | 2 | 00-06-00 | |
| Uttar Kannada-Kumta-Kumta-Baad | 87 A | 2 | 00-02-08 | |
| Uttar Kannada-Kumta-Kumta-Baad | 87 A | 3 | 00-04-00 | |
| Uttar Kannada-Kumta-Kumta-Baad | 87 A | 5 | 00-07-08 | |
| | | **TOTAL** | **03-21-00** | |

| **JANATA VIDYALAYA, SHIRALI, BHATKAL** | | | | |
|---|---|---|---|---|
| Uttar Kannada-Bhatkal-Mavalli-Shirali | 811 | - | 02-10-00 | School & College Building |
| Uttar Kannada-Bhatkal-Mavalli-Shirali | 802 A2 | - | 00-27-08 | |
| | | **TOTAL** | **02-37-08** | |

| **JANATA VIDYALAYA, KASARKOD, HONNAVAR** | | | | |
|---|---|---|---|---|
| Uttar Kannada-Honnavar-Manki-Kasarkod | 106 A | 1 | 01-20-00 | Playground - as per agreement |
| Uttar Kannada-Honnavar-Manki-Kasarkod | 76 A | 1B2 | 03-00-00 | School Premises |
| | | **TOTAL** | **04-20-00** | |

| **JANATA VIDYALAYA, MURDESHWAR, BHATKAL** | | | | |
|---|---|---|---|---|
| Uttar Kannada-Bhatkal-Mavalli-Mavalli | 880 | 1A | 01-13-00 | School Building |
| Uttar Kannada-Bhatkal-Mavalli-Mavalli | 880 | 1B | 02-01-00 | Playground |
| | | **TOTAL** | **03-14-00** | |

| **JANATA VIDYALAYA, MIRJAN-KODKANI, KUMTA** | | | | |
|---|---|---|---|---|
| Uttar Kannada-Kumta-Mirjan-Ettinabail | 42 B | - | 05-00-00 | Playground |
| Uttar Kannada-Kumta-Mirjan-Ettinabail | 43 B | - | 05-00-00 | School Building |
| | | **TOTAL** | **10-00-00** | |

| **JANATA VIDYALAYA, KADTOKA, HONNAVAR** | | | | |
|---|---|---|---|---|
| Uttar Kannada-Honnavar-Honnavar-Kadtoka | 655 B15 | - | 03-20-00 | |
| Uttar Kannada-Honnavar-Honnavar-Kadtoka | 655 B18 | - | 00-23-08 | |
| Uttar Kannada-Honnavar-Honnavar-Kadtoka | 655 B7 | - | 01-14-00 | School Premises |
| | | **TOTAL** | **05-17-08** | |

| **JANATA VIDYALAYA, MUDGA, KARWAR** | | | | |
|---|---|---|---|---|
| Uttar Kannada-Karwar-Baad-Amadalli | 510/511/507/522-1/522-2 | - | 01-11-00 | Lease - 5 years - upto 01-04-2017 |
| Uttar Kannada-Karwar-Baad-Amadalli | 510/511/507/522-2/522-1 | - | 00-23-00 | Lease - 5 years - upto 01-06-2019 |
| | | **TOTAL** | **01-34-00** | |

| District-Taluk-Hobli-Village | Survey No. | Division | Area | Remarks |
|---|---|---|---|---|
| **JANATA VIDYALAYA, DHARESHWAR, KUMTA** | | | | |
| Uttar Kannada-Kumta-Kujalli-Holegadde | 60 | 1 | 04-25-00 | |
| Uttar Kannada-Kumta-Kujalli-Matha | 91 A | - | 05-00-14 | pending at Govt. level |
| | | **TOTAL** | **09-25-14** | |
| **JANATA VIDYALAYA, BEDKANI, SIDDAPUR** | | | | |
| Uttar Kannada-Sidapur-Kondli-Bedkani | 78 A | 1 | 02-09-00 | School Building |
| | | **TOTAL** | **02-09-00** | |
| **SMT. KAMALABAI PIKALE HIGH SCHOOL, KATGAL, KUMTA** | | | | |
| Uttar Kannada-Kumta-Mirjan-Alkod | 26 A1 A1 | - | 05-00-00 | lease pending at Govt. level |
| | | **TOTAL** | **05-00-00** | |
| **JANATA VIDYALAYA, ANILGOD, HONNAVAR** | | | | |
| Uttar Kannada-Honnavar-Manki-Anilgod | 83 | - | 00-28-00 | School Building |
| Uttar Kannada-Honnavar-Manki-Anilgod | 77 A | 3 | 05-00-00 | Ground |
| | | | **05-28-00** | |
| **JANATA VIDYALAYA, KULVE-BAROOR, SIRSI** | | | | |
| Uttar Kannada-Sirsi-Sirsi-Kageri | 231 | - | 10-00-00 | Lease |
| | | **TOTAL** | **10-00-00** | |
| **MUNDGOD CENTRE** | | | | |
| Uttar Kannada-Mundgod | | - | 00-06-02 | F.S. No.86/B [Plot Nos.227 & 228] |
| | | **TOTAL** | **00-06-02** | |
| **HONNEKERI HOSTEL** | | | | |
| Uttar Kannada-Ankola-Ankola-Ankola | 28 | 2 | 00-07-08 | Honnekeri Hostel |
| Uttar Kannada-Ankola-Ankola-Ankola | 33 | 1 | 00-08-08 | Honnekeri Hostel |
| Uttar Kannada-Ankola-Ankola-Ankola | 33 | 2 | 00-16-06 | Honnekeri Hostel |
| Uttar Kannada-Ankola-Ankola-Ankola | 33 | 3 | 00-05-05 | Honnekeri Hostel |
| | | **TOTAL** | **00-37-11** | |
| **BHAVIKODLA LAND** | | | | |
| Uttar Kannada-Kumta-Gokarn-Bavikodla | 10 | 4+5B | 06-21-00 | Bhavikodla, Kumta |
| | | **TOTAL** | **06-21-00** | |
| **SATYA SAI BALAWADI, KODIBAG, KARWAR** | | | | |
| Uttar Kannada-Karwar-Baad-Kodibag | 108 A1 | - | 00-01-12 | Lease |
| | | **TOTAL** | **00-01-12** | |

**The above records are subject to verification against the official land records.**

**In case of any variations, please bring it to the notice of the Trust Office.**

## INSTITUTIONS RUN BY KANARA WELFARE TRUST

| Sl. | Name of the Institution | Place | Estd. | Head of the Institution / Dept. |
|---|---|---|---|---|
| | **DEGREE COLLEGES** | | | |
| 1 | Gokhale Centenary College | Ankola | 1966 | Dr. Imthyaz Ahmed Khan |
| 2 | Divekar College of Commerce | Karwar | 1970 | Dr. B H.Nayak |
| 3 | KWT's College of Education | Dandeli | 2005 | Dr. Sahana Suryavanshi |
| 4 | KWT's B.C.A. College | Karwar | 2008 | Dr. B H.Nayak |
| 5 | Divekar College PG Centre - M.Com. | Karwar | 2014 | Shri Nitin S N |
| 6 | G.C.College PG Centre - M.Sc. Gen. Chemistry | Ankola | 2016 | Dr. Imthyaz Ahmed Khan |
| | **JUNIOR COLLEGES** | | | |
| 7 | Gokhale Centenary Pre-University College | Ankola | 2001 | Dr. Imthyaz Ahmed Khan |
| 8 | Divekar Pre-University Commerce College | Karwar | 2001 | Smt. Roopa Bandekar |
| 9 | Janata Vidyalaya Composite Junior College | Dandeli | 1971 | Shri M S Itagi |
| 10 | Janata Vidyalaya Composite Junior College | Kadtoka, Honnavar | 1971 | Smt. Durgamma P H |
| 11 | Janata Vidyalaya Composite Junior College | Shirali, Bhatkal | 1982 | Shri A.B.Ramrath |
| 12 | P.M. Composite Junior College | Ankola | 1993 | Shri Phalgun C.Gouda |
| | **HIGH SCHOOLS** | | | |
| 13 | People's Multipurpose High School | Ankola | 1953 | Shri R.V.Keni |
| 14 | Janata Vidyalaya | Baad-Kagal, Kumta | 1954 | Smt. Veena Malliger |
| 15 | Janata Vidyalaya | Shirali, Bhatkal | 1955 | Shri M A Naik |
| 16 | Janata Vidyalaya | Dandeli | 1956 | Smt. Haleema Bhukhari |
| 17 | Janata Vidyalaya | Kadwad, Karwar | 1960 | Shri S.G.Sheregar |
| 18 | Janata Vidyalaya | Kasarkod, Honnavar | 1960 | Smt. Philomena Rodrigues |
| 19 | Janata Vidyalaya | Murdeshwar, Bhatkal | 1960 | Shri Sandesh Ullikashi |
| 20 | Janata Vidyalaya | Mirjan-Kodkani, Kumta | 1961 | Shri B Lakshman |
| 21 | Janata Vidyalaya | Kadtoka, Honnavar | 1962 | Smt. Usha G.Bhat |
| 22 | Janata Vidyalaya | Mudga, Karwar | 1963 | Shri A.R.Kondli |
| 23 | Janata Vidyalaya | Dhareshwar, Kumta | 1964 | Smt. Laxmi Kasmadi |
| 24 | Janata Vidyalaya | Bedkani, Siddapur | 1965 | Smt. Pratima Palekar |
| 25 | Smt. Kamalabai Pikale High School | Katgal, Kumta | 1966 | Shri Shantappa Korawar |
| 26 | Janata Vidyalaya | Anilgod, Honnavar | 1966 | Shri K.G.Hulswar |
| 27 | Janata Vidyalaya | Kulve-Baroor, Sirsi | 1968 | Shri T.D.Lamani |
| 28 | P.M. Eng. Med. High School, Ankola | Ankola | 2011 | Shri Vinay Gunaga |
| 29 | Dinkar English Medium High School | Dhareshwar, Kumta | 2013 | Shri Jagadish Gunaga |
| | **PRIMARY AND PRE-PRIMARY SCHOOLS** | | | |
| 30 | English Medium Primary School | Dandeli | 1958 | Smt. Eugene D'Vaz |
| 31 | English Medium Nursery School | Dandeli | 1958 | Smt. Eugene D'Vaz |
| 32 | Bala Vikasa Kendra | Mundgod | 1969 | Smt. Sujata N Harihar |
| 33 | Kannada Medium Primary School | Dandeli | 1999 | Smt. Nandini M Naik |
| 34 | Kannada Medium Nursery School | Dandeli | 1999 | Smt. Nandini M Naik |
| 35 | Thakkar Bapa Nursery School | Ankola | 2003 | Smt. Sunita Argekar |
| 36 | Dr. Dinkar Desai Memorial Primary School | Ankola | 2004 | Shri Subhash K Naik |
| 37 | Janata Vidyalaya Dinkar Pre-Primary School | Dhareshwar, Kumta | 2005 | Shri Venkatesh Shet |
| 38 | Dinkar Primary School | Dhareshwar, Kumta | 2006 | Shri Venkatesh Shet |
| 39 | Shrimat Sadyojat Shankarashram Swamiji Balamandir | Shirali, Bhatkal | 2008 | Smt. Yamuna Patgar |
| | **OTHER SOCIAL SERVICE INSTITUTIONS** | | | |
| 40 | Thakkar Bapa Tailoring School | Ankola | 1956 | Smt. Vanita Shetti |
| 41 | Anandashram Tailoring School | Mundgod | 1969 | Smt. Sujata N Harihar |
| 42 | Dinkar Kalaniketan Music School | Ankola | 1990 | Shri Maruti G Naik |
| 43 | Dinkar Kalaniketan Music School | Karwar | 1990 | Shri Maruti G Naik |
| 44 | Computer Training Centre | Karwar | 1998 | Dr. B H Nayak |
| 45 | Computer Training Centre | Dandeli | 1998 | Shri M S Itagi |